ಸಂಚಿಕೆ ೮೨

ಸಂಚಯ


ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ

ದೆಸೆದೆಸೆಗೆ ಮುಗಿಲಿನೊಳು ದಶಲಕ್ಷ ಪುರಗಳಿವೆ
ಎಸೆಯುವೆನು ಗುರಿಯಿಲ್ಲದೆಲೆ ಪರಿವೆ ಇಲ್ಲೆನಗೆ
ಹುಸಿಯಾಗಲಾರನೆಂಬುದನರಿತೆ, ಲೀಲೆಯಲಿ
ಯಾವುದೂ ವಿಫಲವಲ್ಲ.

ದ.ರಾ.ಬೇಂದ್ರೆ

ಮಲ್ಲಿಕಾರ್ಜುನ ಮನ್ಸೂರ್

ಕೃಪೆ: A moment in time ಕೃತಿಯಿಂದ



ಸಂಚಯ

ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ

ದ್ವೈಮಾಸಿಕ ■ ಸಂಪುಟ : ೧೮ ■ ಸಂಚಿಕೆ : ೫(೮೨)

ಸೆಪ್ಟೆಂಬರ್ - ಅಕ್ಟೋಬರ್ ೨೦೦೯

ನೆರೆಯ ಅಬ್ಬರದಲ್ಲಿ ನಲುಗಿದ
ಬದುಕುಗಳ ಸಾಂತ್ವನ – ನೆಮ್ಮದಿಗೆ
ಈ ಸಂಚಯ

ಹಳುವ ತಪ್ಪಿದ ಹಕ್ಕಿ
ಬಟ್ಟ ಬಯಲೊಳು ಸಿಕ್ಕಿ
ಕೊಂಡು ತೊಳಲಾಡುವುದು ಗೂಡಿಗಾಗಿ
ಪ್ರತಿಯೊಂದು ಜೀವವು
ಪ್ರತಿಯೊಂದು ಭಾವವು
ಹುಡುಕುವುದು ತನ್ನೊಂದು ನಾಡಿಗಾಗಿ

– ದ.ರಾ.ಬೇಂದ್ರೆ

ಸಂಪಾದಕ :
ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ
೬ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ
ಬೆಂಗಳೂರು - ೫೬೦ ೦೮೫
ಫೋನ್ ನಂ.:೦೮೦-೨೬೭೯೧೯೨೫
ಮೊಬೈಲ್: ೯೮೪೪೦೬೩೫೧೪

email:
prahlad118@yahoo.com

ಚಂದಾವಿವರ

ವಾರ್ಷಿಕ ಚಂದಾ :
ರೂ. ೨೫೦/-
ಎರಡು ವರ್ಷಕ್ಕೆ :
ರೂ. ೫೦೦/-

ಮುಖಪುಟ ಮತ್ತು
ಪುಟ ವಿನ್ಯಾಸ:
ಎಂ.ಆರ್. ಗುರುಪ್ರಸಾದ್

ಈ ಸಂಚಿಕೆಯಲ್ಲಿ...

ಲೇಖನಗಳು

ಹೊಳೆದದ್ದು ತಾರೆ ಉಳಿದದ್ದು ಆಕಾಶ !

ಪ್ರಿಯ ಓದುಗರೇ,

ಯಾತಕ್ಕೆ ಮಳೆ ಹೋದವೋ ಅನ್ನಿಸುತ್ತಿದ್ದ ನಾಡಿಗೆ ನೆರೆಯ ಹಾವಳಿ. ಜೀವ ಜಂತುಗಳನ್ನು ಪೊರೆಯಬೇಕಿದ್ದ ನೀರು ಎಲ್ಲವನ್ನೂ ನಾಶಗೊಳಿಸಿದೆ. ಅನೇಕ ಜಿಲ್ಲೆಗಳ ಜನರ ಬದುಕುಗಳು ದುರ್ಭರವೆನ್ನಿಸಿದೆ. ಸಾಲದ ಹೊರೆ ಹೊತ್ತ ರೈತರ ಆತ್ಮಹತ್ಯೆಗಳಿಗೆ ಈ ಪರಿಸ್ಥಿತಿ ಇನ್ನಷ್ಟು ಇಂಬುಗೊಡುತ್ತಿದೆ. ನಮ್ಮ ಆಡಳಿತ ಯಂತ್ರಗಳು ಇಂಥ ಯಾವ ವಿಕೋಪಗಳಿಗೂ ಸಿದ್ಧಗೊಂಡಿರುವ ಇತಿಹಾಸವೇ ಇಲ್ಲ. ಜೀವಹಾನಿಗಳಾದಾಗ ಹಣದ ಪರಿಹಾರ ಕೊಡುವುದಷ್ಟೇ ತಮ್ಮ ಪಾಲಿನ ಕೆಲಸ ಅಂತ ಭಾವಿಸಿದೆ. ಆದರೆ ನಾಡಿನ ಸಾಮಾನ್ಯ ಜನ ಮತ್ತೊಬ್ಬರ ಸಂಕಷ್ಟಕ್ಕೆ ಸ್ಪಂದಿಸುವ ಔದಾರ್ಯವನ್ನು ಯಾವತ್ತಿನ ಹಾಗೆ ತೋರಿಸಿದ್ದಾರೆ. ನಮ್ಮ ಸರ್ಕಾರಗಳು ಇಂಥ ಪರಿಸ್ಥಿತಿಗಳ ನಿರ್ವಹಣೆಗೆ ತಟ್ಟಾಡುತ್ತವೆ. ಅವುಗಳು ಶೋಧಿಸಿ, ಸ್ಪಂದಿಸುವ ರೀತಿಯೂ ಅಲ್ಲಿನ ಜನರ ಜೀವನಶೈಲಿಗೆ ಪೂರಕವಾಗಿಲ್ಲ. ಮೊದಲಿಗೆ ನೆರೆಸಂತ್ರಸ್ತರು ಭಿಕಾರಿಗಳಲ್ಲ. ಅವರು ತಂತಮ್ಮ ಊರುಗಳಲ್ಲಿ ಘನತೆ, ಸ್ವಾಭಿಮಾನಗಳಿಂದ ಬದುಕಿದ್ದವರು. ಅವರಿಗೆ ಅವರದ್ದೇ ರೂಢಿಗತವಾದ ಉಡುವ, ಉಣ್ಣುವ, ಬದುಕುವ ಜೀವನಶೈಲಿ ಇದೆ. ನಮ್ಮ ನಗರಗಳವರು ಸದುದ್ದೇಶದಿಂದಲೇ ಕಳಿಸಿದ ಅಕ್ಕಿ ಅವರ ಆಹಾರ ಕ್ರಮಕ್ಕೆ ಒಗ್ಗುವುದಿಲ್ಲ. ಜೀನ್ಸ್ ಪ್ಯಾಂಟು, ಚೂಡೀದಾರಗಳು ಅವರು ತೊಡುವ ಬಟ್ಟೆಗಳಲ್ಲ. ಇನ್ನು ಊರುಗಳು- ಮನೆಗಳ ವಿಚಾರಕ್ಕೆಬಂದರೆ, ಅವುಗಳ ಸ್ಥಳಾಂತರ ಹಾಗೂ ಪುನರ್ ನಿರ್ಮಾಣ, ಅದಕ್ಕೆ ಶಂಕುಸ್ಥಾಪನೆ ಇತ್ಯಾದಿ ನಾಟಕಗಳು ನಡೆಯುತ್ತಿವೆ. ಊರು ಎಂದರೆ ಅದೊಂದು ಯೋಜಿತ ನಿರ್ಮಿತಿಯಾ? ಬಾಗಲಕೋಟೆಯ ಹೊಸ ನಗರದ ಬಗ್ಗೆ ಕವಿ ಗೆಳೆಯರೊಬ್ಬರು ಹೇಳಿದ್ದರು. ಹೊಸ ಕಟ್ಟಡಗಳು, ರಸ್ತೆಗಳು ಮುಂತಾದ ಅನುಕೂಲಗಳನ್ನೇನೋ ಕಲ್ಪಿಸಬಲ್ಲಿರಿ. ಆ ಊರಿನ ಹನುಮಪ್ಪನ ಗುಡಿ, ಅದರ ಪಕ್ಕದ ಮರ, ಅದರ ಬಗೆಗಿನ ಜನರ ನಂಬಿಕೆಗಳು, ಪಕ್ಕದ ಮೋಚಿ ಅವನ ಪಕ್ಕದ ಕಮ್ಮಾರ... ಹೀಗೆ ರೂಪುಗೊಂಡು ಬೆಳೆದು ಬದುಕಿನ ಭಾಗವಾಗಿ ಹೋಗಿರುವ ಪೇಟೆ, ಯಾವುಯಾವುದನ್ನು ಹೇಗೆ

ಸ್ಥಳಾಂತರಿಸಲು ಸಾಧ್ಯ. ಹಳ್ಳಿಗಳ ಹಾಗೂ ವಸತಿಗಳ ಸ್ಥಳಾಂತರ ನಾಲ್ಕುಗೋಡೆಗಳ ಮೇಲೊಂದು ಸೂರಿನ ಸ್ಥಳಾಂತರವಲ್ಲ. ಆ ಹಳ್ಳಿಯ ಜನರ ಬದುಕಿನೊಳಗೆ ಹಾಸು ಹೊಕ್ಕಾಗಿರುವ ನೇಯ್ಗೆಯನ್ನು ಅದು ತುಂಡರಿಸುತ್ತದೆ. ಮನವಿಲ್ಲದೆ ಮಾಡುವ, ನಿಜವಿಲ್ಲದೆ ನೀಡುವ ನಮ್ಮ ವ್ಯವಸ್ಥೆಯೆಂಬ ನಿಂತ ನೀರಿನಲ್ಲಿ ಹೆಚ್ಚಿನದ್ದೇನನ್ನು ನಿರೀಕ್ಷಿಸಲು ಸಾಧ್ಯ? ಈ ತಲುಪುವ ಬಿಕ್ಕಟ್ಟುಗಳನ್ನು ಬಗಲಲ್ಲಿ ಹೊತ್ತುಕೊಂಡೇ ಹೊಸ ಬದುಕು ಹೊಸ ಮನೆ ಕಟ್ಟಬೇಕಿದೆ. ಅದಕ್ಕೆ ನಾಡಿಗರೆಲ್ಲರೂ ಮನಃಪೂರ್ವಕವಾಗಿ ಸ್ಪಂದಿಸಬೇಕಿದೆ.

ಹಿಂದ್ ಸ್ವರಾಜ್ ಸಂಚಿಕೆಗೆ ದೊರೆತ ಪ್ರತಿಕ್ರಿಯೆ ಅದ್ಭುತವಾಗಿದೆ. ಹೊಸ ಓದುಗರ ಸೇರ್ಪಡೆಯಾಗುತ್ತಿದೆ. ಈತನಕದ ಸಂಕೋಚ ಬದಿಗೊತ್ತಿ ಪತ್ರಿಕೆಯನ್ನು ಆರ್ಥಿಕವಾಗಿ ದೃಢಗೊಳಿಸಬೇಕಾಗಿದೆ. ಅದಕ್ಕೇ ಚಂದಾ ಬಾಕಿ ಕೇಳಲಾಗಿದೆ. ಈ ಕ್ರಮದಲ್ಲಿ ಕಣ್ತಪ್ಪಿನಿಂದ ಈಗಾಗಲೇ ಚಂದಾ ಕೊಟ್ಟಿದ್ದ ಕೆಲವರನ್ನು ಮತ್ತೆ ಚಂದಾ ಕೊಡಬೇಕೆಂದು ಕೇಳಿದೆ. ಅಂಥವರಿಗೆ ಆದ ಮುಜುಗರಕ್ಕೆ ಕ್ಷಮೆ ಯಾಚಿಸುವೆ. ಈ ಕೊಡು-ಬಿಡುವ ವ್ಯವಹಾರಕ್ಕಿಂತ ಪತ್ರಿಕೆ, ಓದುಗರ ಸಂವಹನೆ - ಸಂವಾದ ದೊಡ್ಡದು.

ಈ ಕ್ಯಾಲೆಂಡರ್ ವರ್ಷದಲ್ಲಿ (ಜನವರಿಯಿಂದ - ಡಿಸೆಂಬರ್, ೨೦೦೯) ಆರು ಸಂಚಿಕೆಗಳು ಪ್ರಕಟಗೊಳ್ಳಲಿದೆ. ಇದು ಐದನೆಯದು.

ನಿಮ್ಮ
ಸಂಪಾದಕ

ಚಂದಾದಾರರಲ್ಲಿ ಒಂದು ಮಾತು

- ಎಂ.ಓ. ಮೂಲಕ ಚಂದಾ ಕಳುಹಿಸುವವರು ಕೌಂಟರ್ ಫಾಯಿಲ್‌ನಲ್ಲಿ ತಪ್ಪದೆ ನಿಮ್ಮ ಹೆಸರು, ವಿಳಾಸ ಬರೆಯಿರಿ. ಹೊರ ಊರಿನ ಚೆಕ್ ಕಳುಹಿಸುವವರು ರೂ. ೩೫/- ಹೆಚ್ಚಿಗೆ ಕಳುಹಿಸಿ. '*ಸಂಚಯ*'ದ ಹೆಸರಿಗೆ ನಿಮ್ಮ ಚೆಕ್, ಡಿ.ಡಿ. ಕಳುಹಿಸಬಹುದು.
- ನಿಮ್ಮ ವಿಳಾಸ ಬದಲಾದಲ್ಲಿ ದಯವಿಟ್ಟು ಒಂದು ಕಾರ್ಡು ಹಾಕಿ. ನಮ್ಮ ಸಮಯ, ಶ್ರಮ ಸುರಿದು ರೂಪಿಸಿದ ಪತ್ರಿಕೆಯ ಪ್ರತಿಗಳು ವ್ಯರ್ಥ ವಾಪಸ್ಸಾಗುವುದು, ಬೇಡದ ಜಾಗಗಳಲ್ಲಿ ಕೊಳೆಯುವುದು ಬೇಡ.
- ಪುಸ್ತಕ ವಿಮರ್ಶೆ/ಪರಿಚಯಕ್ಕೆ ಎರಡು ಪ್ರತಿಗಳನ್ನು ಕಳುಹಿಸಿ.
- ನಿಮ್ಮ ಸ್ನೇಹಿತರನ್ನು, ಗೆಳೆಯರನ್ನು ಆಸಕ್ತಿ ಇರುವವರನ್ನು ಸಂಚಯಕ್ಕೆ ಚಂದಾದಾರರನ್ನಾಗಿ 'ಸಂಚಯ ಸ್ನೇಹವಲಯ' ವಿಸ್ತರಿಸಿ.
- ನಿಮ್ಮ ಬರಹಗಳು ಮತ್ತು ಸಂಚಯ ಕುರಿತ ಅನಿಸಿಕೆ ಅಭಿಪ್ರಾಯಗಳಿಗೆ ಸ್ವಾಗತವಿದೆ.



ದಾದಾ

ಎ.ವಿ. ಗೋಕಾಕ್

ನನ್ನ ಜನ್ಮ ಸಾಂಗಲಿಯಲ್ಲಾಯಿತು. ನಾನು ತಂದೆಗೆ ಒಬ್ಬನೇ ಮಗ. ಪ್ರಪಂಚದ ದೃಷ್ಟಿಯಲ್ಲಿ ನನ್ನ ತಂದೆ, ಖ್ಯಾತ ಅಧ್ಯಾಪಕ, ಸಾಹಿತಿ, ವಿನಯವಂತ, ವಿನಾಯಕ ಕೃಷ್ಣ ಗೋಕಾಕರು. ನನಗೆ ಮಾತ್ರ ಅವರು ದಾದಾ. ನನಗೆ ದಾದಾನ ಪ್ರೀತಿ, ವಾತ್ಸಲ್ಯ ಗಾಢವಾಗಿ ಲಭಿಸಿತು.

ನನಗೆ ಗ್ರಾಮಾಫೋನ್ ಎಂದರೆ ಬಹಳ ಹುಚ್ಚು. ಚಿಕ್ಕವನಿದ್ದಾಗ ನಾನು ಅನೇಕ ರೆಕಾರ್ಡ್‌ಗಳನ್ನು ಹಾಳು ಮಾಡಿರಬೇಕು. ಆದರೂ ದಾದಾ ಕೇಳಿದ್ದನ್ನೆಲ್ಲಾ ತಂದುಕೊಡುತ್ತಿದ್ದರು. ಯಾವುದಕ್ಕೂ ಇಲ್ಲ ಅನ್ನುತ್ತಿರಲಿಲ್ಲ. ರೇಲು ಗಾಡಿಯ ಇಂಜಿನಿನ ಧ್ವನಿ ಕೇಳಿದ ಕೂಡಲೇ ನಾನು ಉತ್ತೇಜಿತನಾಗುತ್ತಿದ್ದೆ. ಯಾವುದೋ ಒಂದು ಸುವರ್ಣ ರಾಜ್ಯದಲ್ಲಿ ಹೋದಂತೆ ಎನಿಸುತ್ತಿತ್ತು ನನಗೆ. ದಾದಾ ಇದರ ಸಲುವಾಗಿ ಒಬ್ಬ ಜವಾನನನ್ನು (ಆಳು ಮಗ) ಗೊತ್ತು ಮಾಡಿದ್ದರು. ಅವನ ಕೆಲಸವೆಂದರೆ, ಪ್ರತಿ ಸಲ ನನ್ನನ್ನು ವಿಶ್ರಾಮ

ಭಾಗ್ ರೇಲುನಿಲ್ದಾಣದಿಂದ ಸಾಂಗಲಿಯವರೆಗೆ ಹಾಗೂ ಸಾಂಗಲಿಯಿಂದ ವಿಶ್ರಾಮಭಾಗ್‌ವರೆಗೂ ತಿರುಗಾಡಿಸಿಕೊಂಡು ಕರೆತರುವುದು. ನನ್ನಕ್ಕ-ತಂಗಿಯರ ಪ್ರಕಾರ ನಾನು ಹಟಮಾರಿಯಾಗಿದ್ದೆ. ಬೇಕಾದ್ದು ಸಿಗದಿದ್ದರೆ ಜೋರಾಗಿ ಅಳುತ್ತಿದ್ದೆ. ದಾದಾ ತಮಾಷೆಗೆ ನನ್ನನ್ನು "Prince of wails'(Not wales) ಎಂದು ಕರೆಯುತ್ತಿದ್ದರು.

ದಾದಾ ಡೆಕ್ಕನ್ ಎಜುಕೇಶನ್ ಸೊಸೈಟಿಯಿಂದ ತೀವ್ರ ಮತ ಭೇದದಿಂದಾಗಿ ಹೊರಬೀಳಬೇಕಾಯಿತು. ೧೯೪೫ರಲ್ಲಿ ಅವರು ಗುಜರಾತದ ವೀಸನಗರಕ್ಕೆ ಪ್ರಾಧ್ಯಾಪಕರಾಗಿ ಹೋದರು. ಅಲ್ಲಿ ಎಂ.ಎನ್. ಕಾಲೇಜಿನ ಪ್ರಿನ್ಸಿಪಾಲರ ಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡರು. ಈ ಸಂಸ್ಥೆಯನ್ನವರು 'The Queen of desert' ಎಂದು ವರ್ಣಿಸುತ್ತಿದ್ದರು. ನನ್ನ ಶಿಕ್ಷಣವನ್ನು ಪಕ್ಕದ ರಾಜಸ್ಥಾನದಲ್ಲಿದ್ದ ಒಂದು Convent ಶಾಲೆಯಲ್ಲಿ ಮಾಡಿಸಿ ಎಂದು ಅನೇಕ ಸ್ನೇಹಿತರೂ ಹಿತಚಿಂತಕರೂ ಸೂಚಿಸಿದರು. ಆದರೆ ಮಕ್ಕಳ ಶಿಕ್ಷಣ ಮಾತೃಭಾಷೆಯಲ್ಲಿ ಅಥವಾ ಪ್ರಾದೇಶಿಕ ಭಾಷೆಯಲ್ಲಿಯೇ ಆಗಬೇಕೆಂಬ ದೃಢ ನಂಬಿಕೆ ದಾದಾನದ್ದಿತ್ತು. ನನ್ನಲ್ಲಿ ಗುಜರಾತಿ ಭಾಷೆಯ ಬಗ್ಗೆ ಪ್ರೀತಿಯನ್ನು ಹುಟ್ಟಿಸಿದರು ದಾದಾ.

ಒಂದು ದಿನ ದಾದಾ ತನ್ನ ಕೆಲಸವನ್ನು ಮುಗಿಸಿ ಬರೋಡಾದಿಂದ ವೀಸ ನಗರಕ್ಕೆ ಹಿಂದಿರುಗಿ ಬರುವಾಗ ಗುಜರಾಥಿ ಕತೆ ಪುಸ್ತಕಗಳ ಒಂದು ಸಂಗ್ರಹವನ್ನು ತಂದುಕೊಟ್ಟರು. ಆ ಪುಸ್ತಕಗಳ ಬೆಲೆ ಆಗಿನ ಕಾಲದಲ್ಲಿ ಸುಮಾರು ನೂರು ರೂಪಾಯಿಯಾದರೂ ಇದ್ದಿರಬೇಕು. ಪುಸ್ತಕಗಳನ್ನು ನೋಡಿ ಆದ ಸಂತೋಷ ನನಗೆ ಇಂದಿಗೂ ನೆನಪಿದೆ.

ವಿಸ್ ನಗರದ ಎಂ.ಎನ್. ಕಾಲೇಜನ್ನು ಬುನಾದಿಯಿಂದ ಕಟ್ಟಲು ಅವರು ಬಹಳ ಕಷ್ಟಪಟ್ಟರು. ಜನಗಳೊಂದಿಗೆ ಒಂದಾದರು. ವೀಸ ನಗರದ ಜನರ ಬಗ್ಗೆ ಅವರಿಗೆ ಆದರ ಮತ್ತು ಪ್ರೀತಿ ಇತ್ತು. ವೀಸ ನಗರದ ಜನ ಕೂಡ ಅವರನ್ನು ತಮ್ಮವರಂತೇ ಕಂಡರು. ೧೯೪೯ರಲ್ಲಿ ಕೊಲ್ಹಾಪುರಕ್ಕೆ ವರ್ಗವಾದ ಕಾರಣ ದಾದಾ ವೀಸ ನಗರವನ್ನು ಬಿಡಬೇಕಾಯಿತು: ದಾದಾರ ವರ್ಗಾವಣೆಯನ್ನು ರದ್ದು ಮಾಡಿಸಿಕೊಳ್ಳುತ್ತೇವೆ ಎಂದು ಆ ಊರ ಜನ ಬಹಳ ಆಗ್ರಹ ಮಾಡಿದ್ದರು. ಆದರೆ ದಾದಾ ಒಪ್ಪಲಿಲ್ಲ ವೀಸ ನಗರ ಬಿಟ್ಟ ದಿನ ಇಂದಿಗೂ ನೆನಪಿದೆ ನನಗೆ. ರೇಲ್ವೆ ನಿಲ್ದಾಣಕ್ಕೆ ಅನೇಕ ಜನ ಬಂದಿದ್ದರು. ನಮ್ಮ ಬೋಗಿಯನ್ನು ಹಾರಗಳಿಂದ ಅಲಂಕರಿಸಿದ್ದರು. ರೇಲ್ವೆ ಇಂಜಿನ್ನಿಗೂ ದೊಡ್ಡ ಹಾರ ಹಾಕಿದ್ದರು. ಯಾವ ಮಾತುಕತೇನೂ ಆಗಲಿಲ್ಲ. ಬರೀ ಮೌನವಿತ್ತು. ಅದರ ತೀವ್ರತೆ ಮತ್ತು ಗಾಂಭೀರ್ಯ ಪ್ರತಿ ನಿಮಿಷಕ್ಕೆ ಹೆಚ್ಚಾಗುತ್ತಿತ್ತು. ಇಂಜಿನಿನ ಸೀಟಿ ಆದ ಕೂಡಲೇ ಜನಗಳ ಕಣ್ಣುಗಳು ಒದ್ದೆಯಾದವು. ಗಾಡಿ ಬಿಟ್ಟ ಮೇಲೆ ಬಹಳ ಹೊತ್ತು ದಾದಾ ಒಂದು ಶಬ್ದವನ್ನೂ ಆಡಲಿಲ್ಲ. ಒಂಬತ್ತು ವರ್ಷದವನಿದ್ದ ನನಗೆ ಇದೊಂದು ಅಭೂತಪೂರ್ವ ಅನುಭವವಾಗಿತ್ತು. ಆಗಿಹೋದ ದಿನಗಳನ್ನು ನೆನಪಿಸಿಕೊಂಡಾಗ ವೀಸ ನಗರ ರೇಲ್ವೆ ನಿಲ್ದಾಣದ ಆ ಪ್ರಸಂಗ ನನ್ನೆದುರು ನಿಲ್ಲುತ್ತದೆ.

ವೀಸ ನಗರವನ್ನು ಬಿಟ್ಟು ಕೊಲ್ಹಾಪುರಕ್ಕೆ ಬಂದ ಮೇಲೆ ನಾನು ಮರಾಠಿ ಭಾಷೆಯಲ್ಲಿ ಕಲಿಯಬೇಕಾಯಿತು. ಕೊಲ್ಹಾಪುರದಲ್ಲಿ ಏಳನೆಯ ತರಗತಿಯ ನಂತರ ಗುಜರಾಥಿಯಲ್ಲಿ ಕಲಿಯುವುದು ಸಾಧ್ಯವಿರಲಿಲ್ಲ. ಶಿಕ್ಷಣದ ಮಾಧ್ಯಮ ಬದಲಾಯಿಸಬೇಕಾದ್ದರಿಂದ ಬಹಳ ತೊಂದರೆಯಾಯಿತು. ಆದರೂ ದಾದಾನ ಹುರುಪಿನಿಂದಾಗಿ ಮರಾಠಿಯಲ್ಲೂ ಅಭ್ಯಾಸ ಮಾಡಿದೆ. ಕೊಲ್ಹಾಪುರದಲ್ಲಿ ರಾಜಾರಾಮ ಕಾಲೇಜಿನ ಪ್ರಿನ್ಸಿಪಾಲರೆಂದು ದಾದಾ ಕೀರ್ತಿಯನ್ನು ಪಡೆದರು. ಅಲ್ಲಿಯ ಒಬ್ಬ ವಿದ್ಯಾರ್ಥಿ ಖಶಾಬಾ

ಜಾಧವ್ ಕುಸ್ತಿಯಲ್ಲಿ ಸಾಕಷ್ಟು ಪ್ರವೀಣನಿದ್ದನು. ಅವನಿಗೆ ದಾದಾ ಸಹಾಯ ಮಾಡಿದರು. ಆತ ಹೆಲ್‌ಸಿಂಕಿಯಲ್ಲಿ ನಡೆದ ಒಲಂಪಿಕ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದನು.

೧೯೫೨ರಲ್ಲಿ ದಾದಾಗೆ ಧಾರವಾಡಕ್ಕೆ ವರ್ಗ ಆಯಿತು. ನಾನು ಕಲಿಯುವ ಕಾಲೇಜಿನ ಪ್ರಿನ್ಸಿಪಾಲನಾದದ್ದಕ್ಕೆ ದಾದಾನಿಗೆ ಬಹಳ ಸಂತೋಷವಾಗಿತ್ತು. ಧಾರವಾಡಕ್ಕೆ ಬಂದ ಮೇಲೆ ನನಗೆ ಕನ್ನಡದಲ್ಲಿ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ. ಎಸ್.ಎಸ್.ಸಿ. ಪರೀಕ್ಷೆಯಾದ ಮೇಲೆ ದಾದಾ ನನಗೆ ಕನ್ನಡ ಕಲಿಯಲು ಹೇಳಿದರು. ತಾಯಿಗೆ ಇಂಗ್ಲೀಷ್ ಅರ್ಥವಾಗುವುದಿಲ್ಲ, ನೀನು ದೊಡ್ಡವನಾದ ಮೇಲೆ ತಾಯಿಗೆ ಯಾವ ಭಾಷೆಯಲ್ಲಿ ಕಾಗದ ಬರೆಯುತ್ತಿ? ಎಂದು ಕೇಳಿದರು. ಮಾತೃ ಭಾಷೆಯ ಜ್ಞಾನ ಮಕ್ಕಳಿಗೆ ಬೇಕೇಬೇಕೆಂದು ದಾದಾರವರ ದೃಢ ನಂಬಿಕೆಯಿತ್ತು. ನನಗೆ ಕನ್ನಡ ಕಲಿಸಲು ಒಬ್ಬ ಶಿಕ್ಷಕನನ್ನು ನೇಮಿಸಿದರು. ಎಸ್.ಎಸ್.ಸಿ. ಪರೀಕ್ಷೆಯಾದ ನಂತರ ಸುಮಾರು ಮೂರು ತಿಂಗಳ ರಜೆ ಇರುತ್ತಿತ್ತು. ದಾದಾರವರ ಇಚ್ಛೆ ಪ್ರಕಾರ ನಾನು ಮೂರು ತಿಂಗಳಲ್ಲಿ ಕನ್ನಡವನ್ನು ಕಲಿತೆ. ಗುಜರಾತಿ, ಮರಾಠಿ ಮತ್ತು ಕನ್ನಡ ಭಾಷೆಗಳನ್ನು ಕಲಿತಿರುವುದರಿಂದ ನನಗೆ ತುಂಬ ಲಾಭವಾಗಿದೆ. ಮಹಾರಾಷ್ಟ್ರ ರಾಜ್ಯದಲ್ಲಿ ಐ.ಎ.ಎಸ್. ಅಧಿಕಾರಿಯಾಗಿ ಹೋದಾಗ ಅದರ ಮಹತ್ವ ಗೊತ್ತಾಗಿದೆ.

ಧಾರವಾಡದಲ್ಲಿ ಇನ್ನೊಂದು ಘಟನೆ ನಡೆಯಿತು. ಅದೆಂದರೆ ನನ್ನ ಉಪನಯನ. ದಾದಾ ಧಾರ್ಮಿಕ ಸಂಸ್ಕಾರಗಳನ್ನು ಮೊದಲು ನಡೆಸಿದರು. ಸಾಯಂಕಾಲ ಒಂದು ವಿಶೇಷ ಸಮಾರಂಭವನ್ನು ಏರ್ಪಡಿಸಿದ್ದರು. ಸುಮಾರು ೨೦೦ ಜನರನ್ನು ಕರೆದಿದ್ದರು. ಆ ಸಮಾರಂಭದಲ್ಲಿ ಬೇರೆ ಬೇರೆ ಧರ್ಮದವರ ಹಿರಿಯರನ್ನೂ ಆಮಂತ್ರಿಸಿದ್ದರು. ಆ ಹಿರಿಯರು ಬೈಬಲ್, ಖುರಾನ್ ಹಾಗೂ ಪಾರ್ಸಿ ಧರ್ಮ ಗ್ರಂಥಗಳಿಂದ ಪ್ರಾರ್ಥನೆಗಳನ್ನು ಓದಿ ತೋರಿಸಿದರು. ನಂತರ ಅವರೆಲ್ಲರೂ ನನ್ನನ್ನು ಆಶೀರ್ವದಿಸಿದರು. ಅಂತ್ಯದಲ್ಲಿ ನನಗೆ ಪಾಂಡಿಚೇರಿಯ ತಾಯಿಯವರ ಪ್ರಾರ್ಥನೆಯನ್ನು ಓದಲು ಹೇಳಿದರು. ನನ್ನ ಉಪನಯನದ ದಿನ ಜರುಗಿದ ಈ ಸಮಾರಂಭ ನನಗೆ ಸರ್ವ ಧರ್ಮ ಪರಿಷತ್ತಿನಂತೆ ಎನಿಸುತ್ತಿತ್ತು.

ದಾದಾ ನನ್ನಲ್ಲಿ ಸಾಹಿತ್ಯದ ಅಭಿರುಚಿಯನ್ನು ಹುಟ್ಟಿಸಿದರು. ಬೆಳಗ್ಗಿನಿಂದ ಸಂಜೆವರೆಗೆ ಶೆಲ್ಲಿ ಮತ್ತು ಕೀಟ್ಸ್‌ನ ಕವನಗಳನ್ನು ಗುಣಿ ಗುಣಿಸುತ್ತಿದ್ದರು. ಅವರು ಶೆಕ್ಸ್‌ಪಿಯರ್, ಶೆಲ್ಲಿ ಕೀಟ್ಸ್‌ರ ವ್ಯಕ್ತಿತ್ವ ಮತ್ತು ಸಾಹಿತ್ಯದ ಬಗ್ಗೆ ಊಟದ ಸಮಯದಲ್ಲಿ ಮಾತನಾಡುತ್ತಿದ್ದರು. ದಾದಾನ ಸಂಗೀತ ಪೂರ್ಣವಾದ ಧ್ವನಿ ಇನ್ನೂ ನನ್ನ ಕಿವಿಗಳಲ್ಲಿ ಕೇಳಿಸುತ್ತಿದೆ, ಕೆಲವು ಸಾಲುಗಳು ನೆನಪಿದೆ. shakespear, shelly, keats ಸಾಹಿತ್ಯದಿಂದ, ಇಂದಿಗೂ ನಾನು ಸಂತೋಷಪಡುತ್ತೇನೆ.

ನಾನು ಬಿ.ಎ. ಪರೀಕ್ಷೆಯಲ್ಲಿ ಬರೀ ಪಾಸು ಆದಾಗ ಪೂರ್ಣವಾಗಿ ನಿರಾಶೆ ಹೊಂದಿದೆ. ದಾದಾ ನನಗೆ ವಿಶ್ವಾಸ ತುಂಬಿದ್ದಲ್ಲದೆ ನನಗಾಗಿ ಕೆಲವು Economics ಪುಸ್ತಕವನ್ನೂ ಓದಿದರು ಮತ್ತು ಹೇಳಿಕೊಟ್ಟರು. ನಾನು ೧೯೬೩ರಲ್ಲಿ ಎಂ.ಎ.ನಲ್ಲಿ First Class ಬಂದಿದ್ದೆ. ೧೯೬೪ರಲ್ಲಿ I.A.S. ಸೇರಿದೆ.

ದಾದಾರವರು ಧ್ಯಾನ ಮಾಡುತ್ತಿದ್ದ ವೇಳೆಯಲ್ಲಿ ಕೆಲವೊಮ್ಮೆ ಅವರಿಗೆ ಅದ್ಭುತವಾದ ಸಂಕೇತಿಕವಾದ ಕನಸುಗಳು ಬೀಳುತ್ತಿದ್ದವು. ಒಮ್ಮೆ ಇನ್ನೂ ಬೆಳಗಾಗಿರಲಿಲ್ಲ, ಇದು ೧೯೬೧ರಲ್ಲಿ ನಡೆದದ್ದು, ನಾನು ಎಂ.ಎ. ಮೊದಲನೇ ವರ್ಷದಲ್ಲಿದ್ದೆ. ದಾದಾರವರಿಗೆ ಸ್ಪಷ್ಟವಾಗಿ ಒಂದು ಧ್ವನಿ ಕೇಳಿಸಿತು. 'Anil Gokak M.A. First Class I.A.S.' ಈ ವಿಷಯ ದಾದಾರವರು ನನಗೆ ತಿಳಿಸಿದಾಗ ನನಗೆ ವಿಶ್ವಾಸವಾಗಲಿಲ್ಲ ಅಸಾಧ್ಯವೆನಿಸಿತು. ಆಗಿನ್ನೂ ನಾನು ಮೊದಲನೇ ವರ್ಷದ ಎಂ.ಎ.ನಲ್ಲಿದ್ದೆ. ಆದರೆ ದಾದಾರವರಿಗೆ ಅವರ

ಒಳ ಧ್ವನಿಯಲ್ಲಿ ಪೂರ್ತಿ ನಂಬಿಕೆ ಇತ್ತು. ನಾನು ನನ್ನ ಕೈಯಲ್ಲಿ ಆದಷ್ಟು ಮಾಡುತ್ತಿದ್ದೆ. ದಾದಾರವರ ಕನಸು ನನಸಾಯಿತು.

ಒಮ್ಮೆ ದಾದಾರವರು English Seminar ಸಲುವಾಗಿ ನನ್ನನ್ನ ಕಾಶ್ಮೀರಕ್ಕೆ ಕರೆದುಕೊಂಡು ಹೋಗಿದ್ದರು. ಕಾಶ್ಮೀರದ ಸೌಂದರ್ಯ ಅವರನ್ನು ಮುಗ್ಧರನ್ನಾಗಿಸಿತ್ತು. ಅವರು ಅಲ್ಲೇ ಬರೆದ ಕವಿತೆ ಇನ್ನೂ ನನ್ನ ನೆನಪಿನಲ್ಲಿದೆ.

'ನಭವ ತೆರೆಯಿತು
ಹಿಮವ ಕರಗಿತು
ಓಡಿ ಬಾ ಕಾಶ್ಮೀರಕೆ
ಇಲ್ಲಿ ಜಹಲಮಾ ತೀರಕೆ'

Central Institute ಸಲುವಾಗಿ ದಾದಾ ಬಹಳಷ್ಟು ಕೆಲಸ ಮಾಡಲು ಪ್ರಯತ್ನಿಸಿದ್ದಾರೆ. ಅವರೇ ಅದರ ಸಂಸ್ಥಾಪಕ ನಿರ್ದೇಶಕರಾಗಿದ್ದರು. ಅಲ್ಲಿ ಆಗ (೧೯೫೯-೬೬) ಭಾರತೀಯರಿಗೂ, ಇಂಗ್ಲಿಷರಿಗೂ ಬಹಳ ಮತಭೇದ ಇತ್ತು. ಇಂಗ್ಲಿಷ್ ಜನರುಗಳು Academic Head ಮತ್ತು Administrative head ಬೇರೆ ಬೇರೆ ಎಂದು ಹೇಳುತ್ತಿದ್ದರು. ಕೊನೆ ನಿರ್ಣಯ ಯಾವಾಗಲೂ ಇಂಗ್ಲಿಷ್(British) ಜನಗಳದ್ದೇ ಆಗಬೇಕು ಎನ್ನುತ್ತಿದ್ದರು. ಭಾರತೀಯರು ಬರೀ Administrative headನ್ನುತ್ತಿದ್ದರು. ಇದು ದಾದಾರವರಿಗೆ ಒಪ್ಪಿಗೆ ಇರಲಿಲ್ಲ. ಎಲ್ಲಾ ತರಹದ ಜವಾಬ್ದಾರಿ Directorದೇ ಇರಬೇಕು ಎಂದು ದಾದಾ ಹೋರಾಡಿದರು. ಮತ್ತು ಕೊನೆಗೆ ಅದನ್ನು ಪಡೆದರು. British ಜನಗಳು ಒಪ್ಪಬೇಕಾಯಿತು. ಮತ್ತು ಪೂರ್ತಿಯಾಗಿ ಸಹಕರಿಸಿದರು.

ದಾದಾ ದೃಢನಿಶ್ಚಿತರು. ಅವರು Deccan Education Societyಯಲ್ಲಿರುವಾಗ ಅವರಿಗೂ ಆಡಳಿತ ಮಂಡಳಿಗೂ ಗಂಭೀರ ಮತಭೇದಗಳುಂಟಾದವು. ಒಂದು ಗುಂಪಿನವರು ದಾದಾರವರನ್ನು ಹೀಯಾಳಿಸುತ್ತಿದ್ದರು. ಒಮ್ಮೆ ಒಂದು Meetingನಲ್ಲಿ ಈ ಗುಂಪಿನವರು ತಮ್ಮ ಹದ್ದನ್ನು ಮೀರಿ ವರ್ತಿಸಿದಾಗ ದಾದಾ ತಮ್ಮಲ್ಲಿದ್ದ Agenda ಕಾಗದದ ಮೇಲೆಯೇ ತಮ್ಮ ರಾಜಿನಾಮೆ ಪತ್ರ ಬರೆದು ಇಟ್ಟು ಹೊರಬಂದರು. ಇನ್ನು ಎಂದಿಗೂ ಈ ಸೊಸೈಟಿಗೆ ಬರಬಾರದು ಎಂದು ನಿಶ್ಚಯಿಸಿ ಹೊರಬಿದ್ದಿದ್ದರು. ಕರ್ವೆ ಎಂಬ ಮಹನೀಯರು ಎಷ್ಟೋ ಸಮಾಧಾನ ಮಾಡಿ ರಾಜೀನಾಮೆ ಹಿಂತೆಗೆದುಕೊಳ್ಳಲು ಕೇಳಿದರೂ ದಾದಾ ಒಪ್ಪಲಿಲ್ಲ. ಒಂದು ವರ್ಷ ಬೇರೆ ಕೆಲಸ ಸಿಗುವ ತನಕ ದಾದಾ ಕಾಯಬೇಕಾಯಿತು. ನಿಜ. ಕಡೆಗೆ ಹೈದರಾಬಾದಿನ Osmania Universityಯಲ್ಲಿ ಕೆಲಸಕ್ಕೆ ಸೇರಿದರು ದಾದಾ.

ಸ್ವಾತಂತ್ರ ಹೋರಾಟದಲ್ಲಿ ತಮ್ಮದೇ ರೀತಿಯಲ್ಲಿ ಭಾಗವಹಿಸಿದ್ದರು ದಾದಾ. ಅವರು ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿದ್ದಾಗ ಪೊಲೀಸ್ ಸೂಪರಿಡೆಂಟರು ವಿದ್ಯಾರ್ಥಿಗಳ ಮೇಲೆ ಗೋಲಿಬಾರ್ ಮಾಡುವವರಿದ್ದರು. ಎಸ್ಪಿಯವರು ಗುಂಡು ಹಾರಿಸಿದ್ದಲ್ಲಿ ಮೊದಲು ತನ್ನ ಮೇಲೆ ಹಾರಿಸಬೇಕು ಎಂದು ದಾದಾ ಮುಂದೆ ನಿಂತರು. – ಪಿ.ಜಿ. ಪಾಟೀಲ್ ಎಂದು ದಾದಾನ ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಜೇಲಿಗೆ ಹೋಗಬೇಕಾಗಿಬಂತು. ಜೇಲಿನಲ್ಲಿ ಆತನ ಅವಶ್ಯಕತೆಗಳೇನೇನು ಎಂದು ವಿಚಾರಿಸಿಕೊಂಡು ಬೀಳ್ಕೊಟ್ಟಿದ್ದರು ದಾದಾ: ಜೇಲಿಗೆ ಪುಸ್ತಕಗಳನ್ನು ಕಳಿಸುತ್ತಿದ್ದರು, ಪತ್ರ ಬರೆಯುತ್ತಿದ್ದರು ಅವರು. ದಾದಾ ತಮ್ಮ ವಿದ್ಯಾರ್ಥಿಗಳಿಗೆ ಸ್ನೇಹಿತ, ಮಾರ್ಗದರ್ಶಕ ಮತ್ತು ತತ್ವಜ್ಞಾನಿಯಾಗಿದ್ದರು.

ದಾದಾನ ಜೀವನದ ಕೊನೆಯ ಹಂತಕ್ಕೆ ಬರುತ್ತೇನೆ. ಕೆಲವು ವಿಷಯ ಮನಸ್ಸಿನಲ್ಲಿ ಹಸಿರಾಗಿ

ಉಳಿಯುತ್ತದೆ. ದಾದಾನ ಆರೋಗ್ಯ ಸರಿಯಾಗಿಯೇ ಇರುತ್ತಿತ್ತು. ಆದರೆ ೧೯೮೭ರಲ್ಲಿ ಇದ್ದಕ್ಕಿದ್ದಂತೆ ಅವರು ಬಹಳ ಸೊರಗಿದರು. ನಾನು ತಕ್ಷಣ ವಿಮಾನದಲ್ಲಿ ಬೆಂಗಳೂರಿಗೆ ಧಾವಿಸಿದೆ. ಅವರು ಹಾಸಿಗೆ ಹಿಡಿದಿದ್ದರು. ನಡೆಯುವುದೂ ಅಸಾಧ್ಯವಾಗಿತ್ತು. ನಾನು Study leave ಮೇಲೆ ಬೆಂಗಳೂರಿನಲ್ಲಿ ಒಂದು ವರ್ಷ ಕಳೆಯುವುದೆಂದು ನಿರ್ಣಯಿಸಿದೆ. ಇದು ಅವರಿಗೆ ಬಹಳ ಸಹಾಯವಾಯಿತು. ಭಾರತೀಯ ಜ್ಞಾನಪೀಠದ ಪರಿಶೀಲನೆಗಾಗಿ ದಾದಾರವರ ಕೃತಿಗಳನ್ನು ಕೇಳಿದ್ದರು. ದಾದಾರವರ ಕೃತಿಗಳ ಬಗ್ಗೆ ಒಂದು ಸಣ್ಣ ಪುಸ್ತಿಕೆ ಸಿದ್ಧಮಾಡಿದೆವು. ಆದರೆ ಪಡಬೇಕಾದ ಸಾಹಸ ಅಷ್ಟಿಷ್ಟಲ್ಲ. ಈಗಿನ ಕಾಲದ ಟೈಪಿಸ್ಟರನ್ನು ದೇವರೇ ಕಾಪಾಡಬೇಕು! ಆದರೆ ನನ್ನ ಗೆಳೆಯ ಘೋರ್‌ಪಡೆ ಸಹಾಯದಿಂದ ಪುಸ್ತಿಕೆಯ ಕೆಲಸ ಮುಗಿಸುವುದು ಸಾಧ್ಯವಾಯಿತು. ಇಡೀ ಹದಿನೈದು ದಿನ ಬೆಳಗ್ಗೆ ಸಾಯಂಕಾಲ ಇದೇ ಕೆಲಸ. ದಾದಾ ೧೯೯೧ರ ಜ್ಞಾನಪೀಠ ಪ್ರಶಸ್ತಿ ಪಡೆದರು. ಮಾಡಿದ ಕೆಲಸ ಸಾರ್ಥಕವಾಯಿತು ಎಂದು ನನಗನಿಸಿತು.

ಎಲ್ಲೆಡೆಯಲ್ಲೂ ಸತ್ಕಾರಗಳು, ಎಲ್ಲೆಡೆಯಲ್ಲೂ ಸನ್ಮಾನಗಳು! ಕರ್ನಾಟಕದ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ರಾಮೇಗೌಡರವರ ಹೃದಯಸ್ಪರ್ಶಿ ಕಾಗದ ಇಂದಿಗೂ ನೆನಪಾಗುತ್ತದೆ. ಅವರ ಆಗ್ರಹ, ವಾತ್ಸಲ್ಯ ಹಾಗೂ ಧಾರವಾಡದ ಜನರ ಆತ್ಮೀಯತೆಯಿಂದ ದಾದಾ ಪುಳಕಿತಗೊಂಡಿದ್ದರು. ಆದರೆ ಅವರ ಆರೋಗ್ಯ ಇದನ್ನೆಲ್ಲ ತಾಳಲಾರದು ಎನ್ನುವ ಅನುಮಾನ ನನಗಿತ್ತು. ಈ ಮುಪ್ಪಿನಲ್ಲಿ ಅವರು ಧಾರವಾಡಕ್ಕೆ ಹೋಗುವುದು ಉಚಿತವಲ್ಲವೆನಿಸಿದರೂ ಈಗಾಗದಿದ್ದರೆ ಎಂದಿಗೂ ಇಲ್ಲ ಎಂಬ ದ್ವಂದ್ವದಲ್ಲಿ ಅವರು ಹೋಗುವುದೇ ಸರಿ ಎಂದು ನಿರ್ಣಯಿಸಿದೆ.

ಕರ್ನಾಟಕ ಕಾಲೇಜು ದಾದಾನ Alma mater. ಮತ್ತೊಮ್ಮೆ ಕರ್ನಾಟಕ ಕಾಲೇಜು ನೋಡುವ ಉತ್ಸಾಹ ದಾದಾಗೆ. ಅದರಲ್ಲೂ ರೇಲ್ವೆ ನಿಲ್ದಾಣದಿಂದ ಕಾಲೇಜನ್ನ ಕಾಣುವುದೆಂದರೆ ಅವರಿಗೆ ಬಹಳ ಪ್ರೀತಿ. ಧಾರವಾಡದ ಊರು ಮತ್ತು ಕರ್ನಾಟಕ ಕಾಲೇಜು ಎರಡನ್ನೂ ಬೇರೆ ಮಾಡುವುದು ಅಸಾಧ್ಯವಾಗಿತ್ತು ಅವರಿಗೆ. ಅವರು ತಮ್ಮ ಒಂದು ಲೇಖನದಲ್ಲಿ 'ಕರ್ನಾಟಕದ ಕಾಲೇಜ್ ಇಲ್ಲದ ಧಾರವಾಡ ಎಂತಹುದು?' ಅಂತ ಬರೆದಿದ್ದಾರೆ. ಅಂತೂ ಧಾರವಾಡದಲ್ಲಿ ಎಲ್ಲಾ ಗೆಳೆಯರನ್ನೂ ಭೆಟ್ಟಿಯಾದರು. ನಾವು ಸಮಾರಂಭಕ್ಕೋಸ್ಕರವಾಗಿ ಹೋಗುತ್ತಿದ್ದ ರಸ್ತೆಯ ಮೇಲೆ ನನಗಾದ ಅನುಭವ ಹೇಳುತ್ತೇನೆ. ಈ ರಸ್ತೆಯನ್ನು ಶುರು ಮಾಡಿದವರೇ ದಾದಾ ಮತ್ತು ಅವರ ವಿದ್ಯಾರ್ಥಿಗಳು. ನಾನು ಕೂಡ ವಿದ್ಯಾರ್ಥಿಯಾಗಿದ್ದಾಗ ಆ ರಸ್ತೆ ಮಾಡಲಿಕ್ಕೆ ದುಡಿದಿದ್ದೆ. ಇಂದಿಗೂ ಆ ರಸ್ತೆಗೆ ಗೋಕಾಕ್ Road ಅನ್ನುತ್ತಾರೆ. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಅವರ ಒಂದು ಕವನ ಹೀಗಿದೆ.

> of a road, and open road
> of a road is all my song.
> the road we made, through sun and shade
> and made so nice and long

ಧಾರವಾಡದಿಂದ ಮುಂಬಯಿಗೆ ಹಿಂದಿರುಗಿದೆವು. ದಾದಾ ಬಳಲಿದ್ದರು. ಮನಸ್ಸು ಪುಲಕಿತವಾಗಿದ್ದರೂ ದೇಹ ಬಳಲಿತ್ತು. ಏಪ್ರಿಲ್ ೧೯೯೨. ದಾದಾರವರ ಆರೋಗ್ಯ ಬಹಳ ಕೆಟ್ಟಿತ್ತು. ಡಾಕ್ಟರ್ ತಕ್ಷಣ ಆಸ್ಪತ್ರೆಗೆ ಸೇರಿಸಬೇಕೆಂದರು. ಆದರೆ ದಾದಾರವರು ಹೋಗಲು ಒಪ್ಪಲಿಲ್ಲ. ಅವರಿಗಾಗಿ ಕೊಠಡಿಗಳನ್ನು ಕಾಯ್ದಿರಿಸಿದ್ದರೂ ಹೋಗಲಿಲ್ಲ. ನನಗೆ ಬಹಳ ಮಹತ್ವದ ಕಾರ್ಯನಿಮಿತ್ತವಾಗಿ ದೆಹಲಿಗೆ ಹೋಗುವುದಿದ್ದರೂ ಅದನ್ನು ರದ್ದು ಮಾಡಿದೆ. ಡಾಕ್ಟರರವರ ಪ್ರಕಾರ ದಾದಾರವರನ್ನು ಇಡೀ ದಿನ

ನಿದ್ದೆ ಮಾಡದಿರುವ ಹಾಗೆ ಇಟ್ಟಿರಬೇಕಾಗಿತ್ತು. ಇಲ್ಲವಾದಲ್ಲಿ ಅವರು ಮೂರ್ಛೆ ಹೋಗುತ್ತಾರೆ ಎಂದಿದ್ದರು. ನಾವೆಲ್ಲಾ, ನನ್ನ ತಾಯಿ, ಹೆಂಡತಿ, ಮಗ ಎಲ್ಲಾ ಸ್ವಲ್ಪ ಸ್ವಲ್ಪ ಕಾಲ ಅವರೊಂದಿಗೆ ಮಾತನಾಡಿ ಎಚ್ಚರಿಕೆಯಿಂದ ಇಟ್ಟಿದ್ದೆವು. ಪಿ.ಜಿ. ಪಾಟೀಲ್ ಮತ್ತು ಶ್ರೀ ಪಾಟೀಲ್ ಸಹ ನಮ್ಮ ಜೊತೆ ಇದ್ದರು.

ನಾನೇನು ಕವಿಯಲ್ಲ. ಕವಿತೇನೂ ಬರೆಯುವುದಿಲ್ಲ. ಆದರೆ ಒಮ್ಮೊಮ್ಮೆ ವಿಮಾನದಲ್ಲಿ ಬಾಂಬೆ, ದೆಹಲಿಗೆ ಹೋಗಿ ಬರುತ್ತಿರುವಾಗ ಕೆಲವು ಸಣ್ಣ ಕವಿತೆ ಬರೆಯುತ್ತಿರುತ್ತೇನೆ. ಇದು ದಾದಾರವರಿಗೆ ಗೊತ್ತಿರಲಿಲ್ಲ. ಆದರೆ ಆ ದಿನ ರಾತ್ರಿ ಮಲಗುವ ಮುನ್ನ ನಾನು ಈ ವಿಷಯ ತಿಳಿಸಿದಾಗ ಅವರಿಗೆ ಆಶ್ಚರ್ಯವೂ, ಸಂತೋಷವೂ ಆಯಿತು. ಒಂದೆರಡು ಓದಿ ತೋರಿಸಿದೆ. ಒಂದು ಕವಿತೆಯ ಕೊನೆಯಲ್ಲಿ ಹೀಗಿದೆ.

The massage rings and rings,
The Poet sings and sings,
Uniting in his rhyme,
The timeless with time.

ಆ ರಾತ್ರಿ ನಾನೇ ಸಾಲುಗಳನ್ನು ಓದಿದೆ. ದಾದಾ ಸಂತೋಷದಿಂದ ಮಲಗಿದರು. ೨೮-೪-೯೨ರ ಆ ರಾತ್ರೆ ಅವರ ಕೊನೇ ರಾತ್ರಿಯಾಗಿರಬಹುದು ಎಂದು ಕನಸು ಮನಸ್ಸಿನಲ್ಲೂ ಎಣಿಸಿರಲಿಲ್ಲ ನಾನು.

ಲೇಖನ ಕೃಪೆ: 'ರುಜುವಾತು-೪೩' ಏಪ್ರಿಲ್-ಜೂನ್ ೧೯೯೬



ಕುವೆಂಪು ‘ದೋಣಿಯ ಹಾಡು’

ಬಿ.ಟಿ. ಗೋವಿಂದಯ್ಯ

೧೯೩೦ರ ಕಾಲ. ನಾನಾಗ ಮೈಸೂರು ಮಹಾರಾಜ ಕಾಲೇಜಿನಲ್ಲಿ ಕೊನೆಯ ವರ್ಷದ ಬಿ.ಎ. ವಿದ್ಯಾರ್ಥಿ. ರಾಷ್ಟ್ರಕವಿ ಕೆ.ವಿ. ಪುಟ್ಟಪ್ಪನವರು ಎಂ.ಎ. ತರಗತಿಯ ವಿದ್ಯಾರ್ಥಿ. ತರುಣಕವಿಯೆಂದು ಪ್ರಸಿದ್ಧರಾಗಿದ್ದರು ‘ಬೊಮ್ಮನ ಹಳ್ಳಿಯ ಕಿಂದರಿಜೋಗಿ’, ಕವನಸಂಗಹ ‘ಕೊಳಲು’, ಕಿರಿಯ ನಾಟಕ ‘ಯಮನಸೋಲು’ ಆ ವೇಳೆಗೆ ಬೆಳಕು ಕಂಡಿದ್ದವು. ‘ಬೆಳೆಯುವ ಪೈರು ಮೊಳಕೆಯಲ್ಲಿಯೇ ತೋರುವುದು’ ಎಂಬ ಗಾದೆಗನುಗುಣವಾಗಿ ಕುವೆಂಪುರವರ ತೇಜಸ್ಸು ಹೊರಹೊಮ್ಮಿ ತೋರುತ್ತಿತ್ತು. ಶುಭ್ರವಾದ ಸರಳ ಬಿಳಿ ಜುಬ್ಬ, ಪಂಚೆ ಕಚ್ಚೆ ಇಲ್ಲವೇ ಬಿಳೀ ಷರಾಯಿ ಪಾದರಕ್ಷೆ, ತಲೆ ತುಂಬ ಗುಂಗುರಾದ ಕಪ್ಪು ಕೂದಲು, ಗೌರ ವರ್ಣ, ಸುಂದರ ಮಂದಸ್ಮಿತ ಮುಖ, ಆಕರ್ಷಣೀಯವಾಗಿದ್ದವು. ವ್ಯಕ್ತಿತ್ವಕ್ಕೆ ಸರಿಯಾದ ನಡೆ-ನುಡಿ. ಮಿತಭಾಷಿ. ಮುಕ್ತ ಸಂಗಿ- ಒಂಟಿಕೊಪ್ಪಲಿನ ಶ್ರೀರಾಮಕೃಷ್ಣಾಶ್ರಮ

ವಸತಿ. ಏಕಾಂತ ನಿವಾಸ. ಸೂರ್ಯೋದಯಕ್ಕೆ ಮುನ್ನ ಎಚ್ಚೆತ್ತು, ಆಶ್ರಮದಿಂದ ಹೊರಟು ಕುಕ್ಕನಹಳ್ಳಿ ಕೆರೆ ದಂಡೆಯ ಕಿರಿದಾದ ನೇರವಾದ ಕಮ್ಮಣ್ಣಿನ ದಾರಿಯಲ್ಲಿ ಕೆರೆಯಂತ್ಯದವರೆಗೆ ಬಿರುಸು ನಡಿಗೆಯ ವ್ಯಾಯಾಮದ ಅಭ್ಯಾಸವಿಟ್ಟುಕೊಂಡಿದ್ದರು. ಮಸುಕು ಮಸುಕಾಗುತ್ತಿರುವ ನನ್ನ ಮನಃಪಟಲದ ಚಿತ್ರವನ್ನೀಗ ಮುಂದಿಡುತ್ತೇನೆ.

ಕಾಲೇಜಿನ ದೋಣಿ ಕಲಾಪ ಮತ್ತು ಈಜುಗಾರಿಕೆಯ ವಿಭಾಗಕ್ಕೆ ನಾನು ಕ್ಯಾಪ್ಟನ್ನಾಗಿದ್ದೆ. ದಿನನಿತ್ಯ ಬೆಳಗಿನ ಜಾವ ಐದು ಗಂಟೆಗೆ ಮುನ್ನ ಎದ್ದು ಸಂಗಡಿಗರೊಡನೆ ಕಾಲೇಜಿನ ಕ್ರೀಡಾಮೈದಾನಕ್ಕೆ ಹೋಗಿ, ಕಟ್ಟಡದ ಬಾಗಿಲು ತೆಗೆದು, ಗೋವಾಲಿಯೆಂಬ ಹೆಸರಿನ ಕಾವಲುಗಾರನ ನೆರವಿನಿಂದ ದೋಣಿಯ ಉಪಕರಣಗಳಾದ ಚುಕ್ಕಾಣಿ, ಹುಟ್ಟು, ಸಟ್ಟುಗ, ಬಾಳದಾಕೃತಿಯ ಸಟ್ಟುಗದ ಕಡಾಣೆಗಳನ್ನು ಕೊಂಡೊಯ್ದು ದೋಣಿಯ ಬೀಗ ಕಳಚಿ, ಉಪಕರಣಗಳಿಂದ ಸಜ್ಜುಗೊಳಿಸಿ ನಮ್ಮ ಉಡುಪು ಕಳಚಿ ಈಜು ಪೋಷಾಕಿನಲ್ಲಿ ಅರೆಬೆತ್ತಲೆ ಬೆಸ್ತರಾಗಿ ದೋಣಿ ಏರುತ್ತಿದ್ದೆವು. ಐದು ಹುಟ್ಟುಗಳ ಕ್ರಮಬದ್ಧವಾದ, ಬಿರುಸಾದ ನೀರಿನ ಮೊಗೆತ, ಅಂಚಿನ ಆಸನದಲ್ಲಿ ಕುಳಿತ ಚುಕ್ಕಾಣಿಯವನ ಚಲನ ನಿಯಂತ್ರಣ, ಈ ರೀತಿ ಶೀತಳ ತಿಳಿನೀರನ್ನು ಸೀಳಿಕೊಂಡು ಅಲೆಯಲೆಯೆಬ್ಬಿಸಿ ದೋಣಿ ವೇಗದಿಂದ ಸಾಗುತ್ತಿತ್ತು. ವಿಶಾಲ ಕೆರೆಯಂಗಳ ಮೇಲೆ ಪ್ರಶಾಂತವಾದ ಅರುಣೋದಯದ ಸಂಧ್ಯಾಕಾಲದಲ್ಲಿ ಏಕೈಕ ದೋಣಿಯಲ್ಲಿದ್ದ ತರುಣ ವಿದ್ಯಾರ್ಥಿಗಳಿಗೆ ಕೊಲರಿಜ್ ಮಹಾಕವಿಯ 'The fair breeze blew, the white foam flew, the furrow followed free' ಎಂಬ ಪ್ರಾಸರಸ ಭರಿತ ಚರಣಗಳು ಸ್ಮರಣೆಗೆ ಬರುತ್ತಿದ್ದವು. ಎತ್ತರದ ಕೆರೆ ದಿಣ್ಣೆಯಿಂದ ಆ ನೋಟ ಬಲು ರಮ್ಯವಾಗಿ ಕಾಣಿಸುತ್ತಿದ್ದಿರಬೇಕು. ನಗರದ ವಿದ್ಯುದ್ದೀಪವಿನ್ನೂ ಆರಿಲ್ಲ. ಭವ್ಯವಾದ ಚಾಮುಂಡಿ ಬೆಟ್ಟದ ಸಾಲು ದೀಪಗಳ ನೋಟ ಕನಕ ಹೂಮಾಲೆಯಂತೆ ಕಾಣುತ್ತಿದೆ. ಅತ್ತ ದೂರತೀರದ ಶಾಂತ ರಾಜರ್ಷಿನವರ ಮನೆ– ಅದರ ಪ್ರಾಕಾರಗಳು ಕೆರೆ ನೀರಿನಲ್ಲಿ ಪ್ರತಿ ಬಿಂಬಿತವಾಗಿವೆ.

ತರುಣ ಕವಿ ಕುವೆಂಪು ನಿಂತು ನೋಡಿದರು – ನಾವೂ ಅವರನ್ನು ನೋಡಿದೆವು. ಗೌರವಾನ್ವಿತ ವ್ಯಕ್ತಿಯಲ್ಲವೇ? "ಬರ್ತೀರಾ ಬನ್ನಿ" ಎಂದು ಕವಿಗೆ ನಾನು ಆಹ್ವಾನವಿತ್ತೆ. ದೋಣಿಯನ್ನು ನಾವಿಕರು ದಂಡೆಯ ಸಮೀಪ ತಂದರು– ಮುಗುಳ್ನಗು ಬೀರುತ್ತಾ ಪುಟ್ಟಪ್ಪನವರು ಮೆಟ್ಟಿಲುಗಳನ್ನಿಳಿದು ಬಂದರು – ನೀರಿನಲ್ಲಿಳಿದು ದೋಣಿಯನ್ನು ಹಿಡಿದು ಅವರಿಗೆ ದೋಣಿ ಏರಲು ನೆರವಾದೆ – ಅಲುಗಾಡುತ್ತಿದ್ದ ದೋಣಿಯಲ್ಲಿ ತಡವರಿಸುತ್ತಾ ಅವರು ಕೊನೆಯಂಚಿನ ಅತಿಥಿ ಆಸನದಲ್ಲಿ ಕುಳಿತರು. ದೋಣಿ ದಡ ಬಿಟ್ಟಿತು – ಅದರ ಚಲನವೇಗ ತೀವ್ರವಾಯಿತು – ಐವರು ಹುಟ್ಟು ಹಿಡಿದವರು ಕ್ರಮ ಬದ್ಧವಾಗಿ ಸಟ್ಟುಗ ಮೊಗೆಯಲಾಗಿ ಕಡಾಣೆಯ ಠಕ್ ಠಕ್ ಸದ್ದು, ಸೀಳುವ ನೀರಿನ ಸುಯ್ಯು, ತಾಳಮೇಳವಾಯಿತು; ಕವಿಯ ಕುಂಡಲಿನಿ ಶಕ್ತಿ ಕುದುರಿತು. ಹೆಚ್ಚಿನ ಮಾತಿಲ್ಲ. ಅವರ ಭಾವೋನ್ಮುಖವಾದ ಶ್ರೀವದನದಿಂದ 'ಗೋವಿಂದಯ್ಯ, ನೋಡಿ, ಹುಟ್ಟುಹಾಕಲು ಈ ಪದಗಳ ನೆರವಾದೀತೇ? **ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ**' ಎಂದರು. ಸಟ್ಟುಗ ಹಿಡಿದು ನೀರು ಮೊಗೆತಕ್ಕೆ ನಾನು ಕುಳಿತೆ. ಕುವೆಂಪು ಧ್ವನಿಗೂಡಿಸಿದರು. ತಾಳ ಸರಿಗೂಡಿತು. 'ಬಲು ಸೊಗಸು ಜೋಡಿ' ಎಂದೆ. ಶ್ರೀಪುಟ್ಟಪ್ಪನವರು ಸುಶ್ರಾವ್ಯವಾಗಿ ಹಾಡುತ್ತಾರೆ. ಹಾಡಿದರು. ಕವಿಯ ಹೃದಯದಲ್ಲಿ ಹೊತ್ತು ಬ್ರಾಹ್ಮೀ ಮುಹೂರ್ತದಲ್ಲಿ ದೋಣಿ ವಿಹಾರ ಪೃಥಪ್ರೋಪೇತವಾಗಿತ್ತು. ಕುವೆಂಪು ಅತಿಥಿಯಲ್ಲ, ಆಗಂತುಕನಲ್ಲ– ನಮ್ಮ ಕೂಟಕ್ಕೆ ಸೇರಿಹೋದವರೆಂದೆನಿಸಿತು. ಆನಂದದ ವಾತಾವರಣದಲ್ಲಿ ನಾವೆಲ್ಲರೂ ಮೈಮರೆಯುತ್ತಿದ್ದೆವು. ಏನೊಂದು ಸಿರಿ!

ಗಂಧದ ಮರವಿದ್ದಲ್ಲಿ ಘಟಸರ್ಪ, ಗಣಿಯಿದ್ದಲ್ಲಿ ಭೂತ, ಕಾಲನಿಗೆ ಅಸೂಯೆಯಿದೆ. ನಮ್ಮ ಆನಂದವನ್ನು ಮೊಟಕುಗೊಳಿಸಿದ. ಕುವೆಂಪು ಚುಕ್ಕಾಣಿ ಹಿಡಿದರು. ಪರಿಣತರಾದರು. ಹುಟ್ಟು ಹಾಕುವುದನ್ನು ಕಲಿಯಬೇಕು. ನಾನು ವಿವರ ಹೇಳಿಕೊಟ್ಟೆ. ಸಟ್ಟುಗ, ನೀರೊಳಗೆ ಸಾಕಷ್ಟು ಅದ್ದಿ ಮೊಗೆತದ ಸೆಳೆತಕ್ಕೆ ಸಿಗಬೇಕು ಇಲ್ಲವಾದರೆ ಕಡಾಣಿಯಿಂದ ಜಾರಿ ದೇಹಕ್ಕೆ ಅಪ್ಪಳಿಸೀತು ಎಂಬ ಎಚ್ಚರ ಕೊಟ್ಟಿದ್ದೆ. ಒಂದೇ ಸಾಲಿನಲ್ಲಿ ಇರ್ವರು ಕುಳಿತು ಎರಡು ಬದಿಯಿಂದಲೂ ಹುಟ್ಟು ಹಾಕಬಹುದಿತ್ತು. ನಾನು ಜತೆ ಕುಳಿತು ಪ್ರಾಯೋಗಿಕ ಅಭ್ಯಾಸಕ್ಕೆ ಅನುವು ಮಾಡಿದೆ. ಪುಟ್ಟಪ್ಪನವರು ಸಟ್ಟುಗ ಹಿಡಿದು ಹುಟ್ಟು ಹಾಕಿದರು. ಸರಿದೋರಿತು. ಕವಿಯ ಬಾಯಲ್ಲಿ ಸ್ವರ ಮೂಡಿತು. 'ಭಾವನಾ ಪ್ರಪಂಚಕ್ಕೇರದೆ ವಾಸ್ತವ ಪ್ರಪಂಚದಲ್ಲಿರಬೇಕು ಪುಟ್ಟಪ್ಪನವರೇ – ಸಟ್ಟುಗ ಆಣಿಯಿಂದ ಜಾರೀತು' ಎಂದು ನಾನು ಹೇಳುವಷ್ಟರಲ್ಲಿ ಕುವೆಂಪು ಹಿಡಿದಿದ್ದ ಸಟ್ಟುಗ 'ಹಿಮಮಣಿ' ಸೆಳೆತಕ್ಕೆ ಆಳದಿಂದ ಹೊರ ಚಿಮ್ಮಿತು. ಬಾಗಿ ಎಳೆಯುತ್ತಿದ್ದ ತರುಣ ಕವಿ ಧೊಪ್ಪನೆ ದೋಣಿಯ ತಳಕ್ಕೆ ಬಿದ್ದರು – ಹಲಿಗೆ ತಾಕಿತು. ತಳದ ಅಡ್ಡಪಟ್ಟಿಗಳಿಂದ ಬೆನ್ನು ಮೂಳೆಗೆ ನೋವಾಯಿತು. ಅವರನ್ನು ಮೇಲೇಳಿಸುವ ಕೆಲಸ ಕೆಲವರಿಗೆ, ದೋಣಿಯನ್ನು ದಂಡೆಗೆ ಒಯ್ಯುವ ಕೆಲಸ ಇತರರಿಗೆ. ಒಬ್ಬನಂತೂ ದಡ ಸೇರುತ್ತಲೇ ದೋಣಿಯಿಂದ ಹಾರಿ, ಓಡಿ ಓಡಿ ದೂರದಲ್ಲಿ ಹಾಯುತ್ತಿದ್ದ ಟಾಂಗಾ ಒಂದನ್ನು ತಂದ. ಕ್ಷೇಮವಾಗಿ ಕವಿಯನ್ನು ದೋಣಿಯಿಂದ ದಂಡೆಗೆ, ದಂಡೆಯಿಂದ ಟಾಂಗಾಕ್ಕೆ ಏರಿಸಿದ್ದಾಯಿತು. ನಾನು ಒದ್ದೆಯಾಗಿದ್ದ ಮೈಗೆ ಉಡುಪು ಧರಿಸಿಕೊಂಡು ಹೊರಟೆ. ಕವಿಯಾಗ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ. ಡಾಕ್ಟರು ಮತ್ತು ನರ್ಸುಗಳು ಗೌರವ ಉಪಚಾರಗಳಿಂದ ಚಿಕಿತ್ಸೆ ಮಾಡಿ ಪುಟ್ಟಪ್ಪನವರು ಗುಣಮುಖರಾದರು. ನನಗೆ ಹೆಚ್ಚಿನ ಮಾಹಿತಿ ದೊರಕಲಿಲ್ಲ. ಕವಿಯಂತೂ ಮರಳಿ ನಮ್ಮ ದೋಣಿಗೆ ಬಂದ ನೆನಪಿಲ್ಲ. ಹೆಚ್ಚಿನ ಬಾಧೆಯಾಗಿರಲಿಲ್ಲ. ಪ್ರಥಮ ಚಿಕಿತ್ಸೆಯಷ್ಟೆ. ಈ ಸನ್ನಿವೇಶ ತುಸು ಕಹಿ! ಸಂದರ್ಭಾನುಸಾರ ನಿರೂಪಣವಿಲ್ಲದೆ ಈ ಘಟನೆಯ ಪ್ರಸ್ತಾಪವಿಲ್ಲಿ ಕವಿಗೆ ಕಳಂಕ ತರುವ ಮಾತಲ್ಲ. ಒದಗಿ ಬಂದ ಅಪೂರ್ವ ಸೌಭಾಗ್ಯವೆಂಬ ಹೆಮ್ಮೆ.

ದೋಣಿ ಮತ್ತು ದೋಣಿ ಹಾಡು ನನ್ನಲ್ಲಿ ಉಳಿಯಿತು. ಜನಪ್ರಿಯವಾಯಿತು. ಸಾರ್ವಜನಿಕ ಸ್ವತ್ತಾಯಿತು. ಸಂಗೀತ ಪರಿಣತರ ಕಂಠ ಸೇರಿತು. ಕ್ರಮೇಣ ದೋಣಿ ನನ್ನಿಂದ ತೊಲಗಿತು. ಹಾಡು ನನ್ನ ಹೃದಯದಲ್ಲಿ ಧ್ವನಿ ಗೂಡಿ ಇಂದಿಗೂ 'ನಾವು ಲೀಲಾ ಮಾತ್ರ ದೇವರು ನಮ್ಮ ಜೀವನ ಲೀಲೆಗೆ' ಎಂದು ನೆನಪಿಸುತ್ತಿದೆ. ದೋಣಿಯು ದೂರ ತೀರದ ನಾಗಿ ಹೋಗುವ ಸೂರ್ಯೋದಯದ ಹೊತ್ತಿನ ಜೀವನ ನೌಕೆಯ ಪಥ ಸ್ವರ್ಗೀಯ. ಇದೇ ನನ್ನ ಕವಿ-ಋಷಿ ನೆನಪು.

ಲೇಖನ ಕೃಪೆ: 'ಅಂಕಣ', ಸಂಪುಟ ೨, ಸಂಚಿಕೆ ೧ ನವೆಂಬರ್ ೧೯೮೦

ಕೆ.ಬಿ. ಸಿದ್ದಯ್ಯನವರ ಕಾವ್ಯ ಒಂದು ಪರಿಶೀಲನೆ

ಎಸ್. ಸುರೇಶ್ ನಾಗಲಮಡಿಕೆ

ಆಧುನಿಕ ಕನ್ನಡ ಕಾವ್ಯ ಪರಂಪರೆಯಲ್ಲಿ ಅಧ್ಯಾತ್ಮವನ್ನು ವಿವಿಧ ಆಯಾಮಗಳಲ್ಲಿ ನೋಡಿದವರಲ್ಲಿ ಕೆ.ಬಿ. ಸಿದ್ದಯ್ಯ ಕೂಡ ಒಬ್ಬರು. ಅವೈದಿಕ ಎನ್ನಬಹುದಾದ ಸಿದ್ಧ, ನಾಥ, ಸೂಫಿ, ಈ ಧಾರೆಗಳನ್ನು ಆಧುನಿಕ ಕನ್ನಡ ಕಾವ್ಯ ೭೦ರ ದಶಕದ ನಂತರ ಒಳಗು ಮಾಡಿಕೊಂಡಿರುವ ಬಗೆಯೇ ಬೇರೆ ರೀತಿಯದು. ಎಚ್.ಎಸ್. ಶಿವಪ್ರಕಾಶ್, ಎಸ್.ಜಿ. ಸಿದ್ಧರಾಮಯ್ಯ, ಕೆ.ಬಿ. ಸಿದ್ದಯ್ಯ, ಲಕ್ಷ್ಮೀಪತಿ ಕೋಲಾರ, ಚಂದ್ರಶೇಖರ ತಾಳ್ಯ ಮುಂತಾದವರು ಅನುಭಾವವನ್ನು ತಮ್ಮ ಕಾವ್ಯದ ಸಿದ್ಧಿಯ ಹಾದಿಯಲ್ಲಿ ದ್ರವ್ಯವಾಗಿಸಿಕೊಂಡಿದ್ದಾರೆ.

ಒಂದು ರೀತಿಯಲ್ಲಿ ಈ ಎಲ್ಲಾ ಕವಿಗಳು ಸಿದ್ಧರೂಪದ, ಸೈದ್ಧಾಂತಿಕ ಚಳುವಳಿಗಳನ್ನು ದಾಟುವ ಕ್ರಮವನ್ನೂ ಸ್ಪಷ್ಟವಾಗಿ ಕಂಡುಕೊಂಡಿದ್ದು ಈ ಸಂದರ್ಭದಲ್ಲೇ ಇರಬೇಕು. ಉಳಿದವರಿಗಿಂತ ಕೆ.ಬಿ.ಯವರಿಗೆ ಹಿಂದಿನ ಪರಂಪರೆಯನ್ನು ಒಳಗು ಮಾಡಿಕೊಂಡು ಎದುರಿಸಬೇಕಾದ ಸವಾಲುಗಳು ಹಿರಿದಾಗಿಯೇ ಇದ್ದವು. ಸಿದ್ದಯ್ಯನವರ 'ಬಕಾಲ' ಮತ್ತು 'ದಕ್ಲಕಥಾದೇವಿ', 'ಅನಾತ್ಮ' ಈ ಮೂರು ಕಾವ್ಯಗಳು ಸಿದ್ದಯ್ಯ ಅವರ ಸೃಜನಶೀಲತೆಯ ಸತ್ವವನ್ನು ಸಂಪೂರ್ಣವಾಗಿ ಹೀರಿವೆ. ಈ ಕಾವ್ಯಗಳ ಶೀರ್ಷಿಕೆಗಳೇ ಕನ್ನಡ ಕಾವ್ಯಕ್ಕೆ ಹೊಸ ರೀತಿಯವು. ಬಕಾಲ ಯಾವುದೇ ವೈದಿಕ ಪುರಾಣಗಳಲ್ಲಿ ಕಾಣ ಸಿಗದ ಹೆಸರು. ಅತ್ಯಂತ ಕೆಳ ಸಂಸ್ಕೃತಿಯ ಗುರುತೆಂದು ಬಕಾಲನನ್ನು ಗುರುತಿಸುತ್ತಾರೆ. ದಕ್ಲಕಥಾದೇವಿ– ದಕ್ಕಲರ ಜೀವನಕ್ರಮವನ್ನು ಮಾಂತ್ರಿಕ ಮತ್ತು ಪವಾಡಗಳ ರೂಪದಲ್ಲಿ

ಚಿತ್ರಿಸಿದರೂ ವಾಸ್ತವವನ್ನು ಮೀರುವುದಿಲ್ಲ. ಈ ನಿಟ್ಟಿನಲ್ಲಿ ಸಿದ್ದಯ್ಯನವರಿಗೆ ಎರಡು ಬಗೆಯ ಸವಾಲುಗಳಿವೆ. ಒಂದು: ತಮ್ಮ ಕಾವ್ಯ ತನ್ನ ಜನಾಂಗದ ನೋವನ್ನು ಹೇಗೆ ಅನಾವರಣಗೊಳಿಸುವುದು ಮತ್ತೊಂದು ಈ ಪರಿಭಾಷೆಗಳ ಹಿನ್ನೆಲೆಯಲ್ಲಿ ಲೋಕಗ್ರಹಿಕೆ, ಕಾಲವನ್ನು ಅರ್ಥೈಸುವುದು. ಕೆ.ಬಿ.ಯವರು ತಮ್ಮ ಕಾವ್ಯದಲ್ಲಿ ಎರಡು ಸವಾಲುಗಳನ್ನೂ ಗಂಭೀರವಾಗಿಯೇ ಸ್ವೀಕರಿಸಿದ್ದಾರೆ.

ಇವರ ಕಾವ್ಯ 'ಬೆಡಗ'ನ್ನು ಮುಟ್ಟಿಸಿಕೊಳ್ಳಲಾರದ ಜನಾಂಗದಿಂದ ಸ್ಪರ್ಶಿಸಿರುವ ಕ್ರಮ ವಿಭಿನ್ನವಾಗಿದೆ. ಇಲ್ಲಿ ಶಿವ-ಪಾರ್ವತಿಯರ ಪೌರಾಣಿಕ ಪರಿಕಲ್ಪನೆಯ ದಕ್ಕಲರ ಸಂಸ್ಕೃತಿಯ ಬೆನ್ನಲ್ಲಿದೆ. ಬಕಾಲದ ಗಿಡಬಾಲೆ ತನ್ನ ಸಂಸ್ಕೃತಿಯ ವಕ್ತಾರಳಾಗಿ ಗೋಚರಿಸುತ್ತಾಳೆ.

ಹಾಗೆಯೇ ಸಿದ್ದಯ್ಯನವರನ್ನು ಗಾಢವಾಗಿ ಆವರಿಸಿರುವ ಬುದ್ಧ ಮತ್ತು ವಚನ ಪರಂಪರೆಯು ವಿವಿಧ ಪರೀಕ್ಷೆಗಳಿಗೆ ಒಳಪಟ್ಟಿದೆ. ಇದು ನಮಗೆ ಕಂಡುಬರುವ ಕಥನಕ್ರಮದ ಹಿನ್ನೆಲೆಯಲ್ಲಿ ಮಾತ್ರವೇ ಅಲ್ಲ ಬದಲಾಗಿ ಲಯ ವಿನ್ಯಾಸದ ವಿಚಾರದಲ್ಲೂ ನಿಜ. ಇಲ್ಲಿನ ಭಾಷೆಯ ಲಯವನ್ನು ಅರ್ಥಮಾಡಿಕೊಳ್ಳುವುದು ಸಂಕೀರ್ಣವಾದರೂ ಅವುಗಳ ಆಂತರ್ಯದಲ್ಲೇ ಸಿದ್ದಯ್ಯನವರ ಆಶಯಗಳ ಬೇರುಗಳು ಅಡಗಿಕೊಂಡಿವೆ.

ಎಪ್ಪತ್ತರ ದಶಕದ ನಂತರ ವಚನ ಪರಂಪರೆಯನ್ನು ವಿವಿಧ ಪ್ರಕಾರಗಳಲ್ಲಿ ಮಡಿಸಿಕೊಂಡ ಕ್ರಮ ಸೋಜಿಗವನ್ನುಂಟುಮಾಡುತ್ತದೆ. 'ನಾಟಕ'ದಲ್ಲಿ ಪ್ರಭುತ್ವವನ್ನು ಮುಖ್ಯ ಭಿತ್ತಿಯನ್ನಾಗಿ ಮಾಡಿ ಕೊಂಡಿರುವುದು ನೋಡಿದರೆ, ಕಾವ್ಯವು ವಚನ ಪರಂಪರೆಯನ್ನು ಕೆಳಸಂಸ್ಕೃತಿಯ ಭಾಗವಾಗಿ ಸ್ವೀಕರಿಸಿತು. ಮೇಲುನೋಟಕ್ಕೆ ಇದನ್ನು ಗುರುತಿಸಬಹುದು. ನವೋದಯಘಟ್ಟದಲ್ಲಿ ಕುವೆಂಪು, ಬೇಂದ್ರೆ, ಮತ್ತು ಮಧುರಚೆನ್ನರು ಜನಪದದ ಸತ್ವವನ್ನು ಹೀರಿಕೊಂಡು ಅರವಿಂದ ಭಕ್ತಿಪಂಥ, ರಾಮಕೃಷ್ಣಪರಮ ಹಂಸರು ನಂಬಿದ ಅಧ್ಯಾತ್ಮವನ್ನು ತಮ್ಮ ಕಾವ್ಯದಲ್ಲಿ ಪ್ರಯೋಗಿಸಿದ್ದು ಈಗಾಗಲೇ ಚರ್ಚಿತಗೊಂಡಿದೆ. ಇವರ ನಂತರ ಬಂದ ಪು.ತಿ.ನ. ಎಕ್ಕುಂಡಿ, ಮಧ್ವ-ಮಾರ್ಕ್ಸ್‌ರನ್ನು ಒಟ್ಟುಗೂಡಿಸಿದ್ದೇ ಕನ್ನಡ ಕಾವ್ಯದ ಮುಖ್ಯಘಟ್ಟ. ಪ್ರಾಯಶಃ ಇವರನ್ನು ಬಿಟ್ಟರೆ ಎಚ್.ಎಸ್. ಶಿವಪ್ರಕಾಶ್, ಎಸ್.ಜಿ.ಎಸ್., ಲಕ್ಷ್ಮೀಪತಿ ಕೋಲಾರ, ತಾಳ್ಯ ಇವರು ದೇಸಿ ಮೂಲದಿಂದಲೇ ಹುಟ್ಟಿ ಬಂದ ವಚನ ಪರಂಪರೆಯನ್ನು ಅದರಲ್ಲೂ ಅಲ್ಲಮನನ್ನು ತಮ್ಮ ಕಾವ್ಯದಲ್ಲಿ ಪ್ರಕಾಶಿಸಿಕೊಂಡ ಬಗೆಯೇ ಭಿನ್ನ ರೀತಿಯದು. ಇವರಲ್ಲಿ ಕೆ.ಬಿ.ಯವರು ತಮ್ಮ ಸಮುದಾಯಗಳ ನೋವುಗಳೊಂದಿಗೆ ತಮ್ಮ ಒಳಗಡೆನೇ ಜನಪದದಂತೆ ಪ್ರಚಲಿತದಲ್ಲಿರುವ ಬಕಾಲ ಮತ್ತು ದಕ್ಕಲರನ್ನು ಕುರಿತು ಕಾವ್ಯ ಕಟ್ಟಿದ್ದು ಮತ್ತು ಅವರನ್ನು ಜಾಗತಿಕ ಹಾಗೂ ಸಮಕಾಲೀನ ಬದುಕಿನ ನಡುವೆ ನೆನಪಿಸುವುದು ಕೇಬಿಯವರ ಕಾವ್ಯಕ್ಕಿರುವ ಮುಖ್ಯ ಆಶಯ. ಈಗ ಬಂದಿರುವ ಮೂರು ಖಂಡಕಾವ್ಯಗಳು ಮೇಲುನೋಟಕ್ಕೆ ಬೇರೆ ಬೇರೆ ಶೀರ್ಷಿಕೆಗಳನ್ನು ಹೊತ್ತು ಬಂದಿದ್ದರೂ ಮೂರು ಕಾವ್ಯಗಳಲ್ಲಿ ಗಟ್ಟಿಯಾದ ಸಾತತ್ಯವನ್ನು ಗುರುತಿಸಬಹುದು. ಭಾಷಿಕವಾಗಿಯೂ ಈ ಮಾತು ನಿಜ. ಜಾಗತಿಕ ಮತ್ತು ರಾಷ್ಟ್ರೀಯ ಸಮಸ್ಯೆಗಳ ನಡುವೆ ಭಾವುಕವಾಗಿ ತಮ್ಮ ಸಮುದಾಯಗಳನ್ನು ಚಿತ್ರಿಸಿದ್ದಾರೆ. ಬಕಾಲ ನಮಗೆ ಕಾಣದೇ ಹೋದರೂ ಕಾಡುವ ಮುನಿಯಾಗಿದ್ದಾನೆ. ದಕ್ಕಲರ ಚರಿತ್ರೆಯೇ ಸೋಜಿಗವನ್ನುಂಟು ಮಾಡುತ್ತದೆ. ಬಕಾಲದಲ್ಲಿ ಭಿನ್ನ ಅವತಾರಗಳಲ್ಲಿ ಬರುವ ಗಿಡಬಾಲೆಯ ಕುಣಿತ ಮುಟ್ಟಿಸಿಕೊಳ್ಳಲಾರದವರ ನೋವಾಗಿದೆ. ಪಾರ್ವತಿ ಮತ್ತು ಗಿಡಬಾಲೆಯರು ಮುಖಾಮುಖಿಯಾದಂತಿದೆ.

ಐದು, ಆರನೇ ಪಾದಗಳಲ್ಲಿ ಶೈವಮೂಲದ ಬೆನ್ನಲ್ಲಿ ಜಲಮೂಲ ಮತ್ತು ಅಗ್ನಿಮೂಲಗಳ ಅನ್ವೇಷಣೆಯ ಕುರುಹು ಕಾಣುತ್ತದೆ. ಈ ಎರಡು ಪಾದಗಳಲ್ಲಿ ಪ್ರಕೃತಿಯ ರೂಪಕಗಳಲ್ಲಿ ನೋವಿನ

ನೆಲೆಗಳ ಹುಡುಕಾಟವಿದೆ. 'ಕಟ್ಟಕುಲದ ಮಕ್ಕಳು ದಿಕ್ಕಾಪಾಲು' ಎಂಬ ಸಾಲು ಮತ್ತೆ ಮತ್ತೆ ಧ್ವನಿಸುತ್ತದೆ. ಈ ಸಂದರ್ಭದಲ್ಲಿ ಬಂದುಹೋಗುವ ಬುದ್ಧನ ಮನಃಪರಿವರ್ತನೆಯ ನಂತರ ಸಂಭವಿಸುವ ಪರಿಣಾಮಗಳು ಗೋಚರಿಸುತ್ತವೆ. ಬಕಾಲದಲ್ಲಿ ಮತ್ತೆ ಮತ್ತೆ ಬರುವ ಗಿಡಬಾಲೆಯ ಚಿತ್ರಣ ದಲಿತನೋವಿನ ಒಂದು ರೂಪಕ ದೃಶ್ಯವಾಗಿದೆ. ಗಿಡಬಾಲೆ ನೋವಿನ ಬದುಕಿನ ನಡುವೆ ಅವತಾರಗಳನ್ನು ಎತ್ತುವುದು ಹಾಗೂ ಪುರಾಣ ಗರ್ಭದಲ್ಲಿ ಲೀನವಾಗಿರುವುದು ಬಕಾಲದ ಮುಖ್ಯ ಆಶಯಗಳಲ್ಲೊಂದು. ಬಕಾಲ ಮುನಿಯು ಕೇಬಿಯವರ ನಂತರದ ಕಾವ್ಯಗಳಲ್ಲೂ ಪ್ರಸ್ತಾಪವಾಗುತ್ತ ಹೋಗುತ್ತಾನೆ. ಸಿದ್ದಯ್ಯನವರ 'ಬಕಾಲ' ಕಾಲದ ಪ್ರತೀಕವಾಗಿ ಗೋಚರಿಸುತ್ತಾನೆ.

ದಕ್ಲಕಥಾದೇವಿಯ ಮೂಲಕ ಕೇಬಿಯವರು ಕನ್ನಡ ಕಾವ್ಯದ ಪರಂಪರೆಯಲ್ಲಿ ಭಾಷಿಕವಾಗಿ ತಳೆದ ನಿಲುವುಗಳು ಗಂಭೀರವಾಗಿ ಚರ್ಚಿತವಾಗಬೇಕಾಗಿದೆ. ಗದ್ಯ-ಪದ್ಯಗಳ ಒಕ್ಕೂಟವೆಂದು ಕರೆಯುವ 'ಚಂಪೂ' ಪ್ರಕಾರವನ್ನು ಕೇಬಿಯವರು ಬೆಡಗಿನ ಭಾಷೆಯ ಹಿನ್ನೆಲೆಯಲ್ಲಿ ಬಳಸಿದ್ದಾರೆ ಎನಿಸುತ್ತದೆ. ಗದ್ಯದಲ್ಲಿ ದಕ್ಕಲರ ಕಥೆಯನ್ನು ನಿರೂಪಿಸಿ, ಪದ್ಯದಲ್ಲಿ ಇಚ್ಛಿತ ಆಶಯಗಳನ್ನು ಮುಂದುವರಿಸುವುದು ಇದರ ಲಕ್ಷಣ. ಇದರ ಮಧ್ಯೆ ದಕ್ಲಕಥಾದೇವಿಯಲ್ಲಿ ನಾಟಕೀಯ ಅಂಶಗಳೂ ಪ್ರವೇಶವಾಗುತ್ತವೆ. ಕೇಬಿಯವರಿಗೆ ಮೌಖಿಕಕಾವ್ಯಗಳು ಬೆನ್ನಲ್ಲಿವೆ. ಬಕಾಲದ ನಂತರ ಬಂದ ಈ ಕಾವ್ಯದ ಆಳದಲ್ಲಿ ದಲಿತ ಚಳುವಳಿಯ ಆಂತರಿಕ ಘರ್ಷಣೆಗಳು ಮತ್ತು ನೋವಿನ ಸಂಕಟಗಳನ್ನು ಕೇಬಿಯವರು ದಕ್ಕಲರ ಮಧ್ಯೆ ಗುರುತಿಸಿದ್ದಾರೆ. ಹೊಲೆ-ಮಾದಿಗರಿಗಿಂತ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ದಕ್ಕಲರು ಮಾದಿಗರ ಸಾಕುಮಕ್ಕಳು. ಇವರು ನಂಬಿರುವ ಪುರಾಣಗಳ ಪ್ರಕಾರ ಜಲದೇವಿಯ ವರದಿಂದ ಮಾದಿಗರ ಮೊದಲನೆ ಮಗ ಜಮ್ಮಮುನಿಯಾದರೆ ಎರಡನೇ ಮಗ ಜಲದೇವಿಯ ತಿರಸ್ಕೃತನಾದಂತೆ ಯಾರಿಗೂ ದಕ್ಕದವನಾಗಿದ್ದರಿಂದ ದಕ್ಕಲನಾದನೆಂದು ಹೇಳುತ್ತಾರೆ. ಆಶ್ಚರ್ಯದ ಸಂಗತಿ ಎಂದರೆ ಜಲದೇವಿಯನ್ನೇ ಪ್ರಾರಂಭದಲ್ಲಿ ದಕ್ಕಲನು ಪ್ರತಿಭಟಿಸುತ್ತಾನೆ. ಅವನೇ ದಕ್ಕದ ಮಹಾಮುನಿ ಎಂದು ದಕ್ಲರ ಗುರುವೆಂದು ಸ್ವೀಕೃತನಾಗಿದ್ದಾನೆ. ಈ ಕತೆಯಿಂದ ಕೆ.ಬಿ.ಯವರು ಹೊಲೆ ಮಾದಿಗ ಸಮುದಾಯಗಳ ಹಾಗೂ ದಕ್ಕಲರ ವರ್ತಮಾನದ ಭೇದ-ಭಾವಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತಾರೆ. ಇದಕ್ಕೆ ಮತ್ತೊಂದು ನಿದರ್ಶನವೆಂಬಂತೆ, ದಕ್ಲಯ್ಯನು ತನ್ನ ಇಬ್ಬರು ಮಕ್ಕಳನ್ನು ಎರಡು ಭುಜದ ಮೇಲೆ ಕುಳ್ಳಿರಿಸಿಕೊಂಡು ಗಾಂಧೀಜಿ ಮತ್ತು ಬಸವಣ್ಣ, ಅಂಬೇಡ್ಕರರ ಕುರಿತು ಹೇಳುವ ಕಥೆ. ಬಲಭುಜದವನಿಗೆ ಗಾಂಧೀಜಿ ಕಥೆ ಹೇಳಿದರೆ ಎಡಭುಜದವನಿಗೆ ಬಸವಣ್ಣೋರ ಕಥೆ ಹೇಳುತ್ತಾನೆ. ಈ ಮೂಲಕ ಕೇಬಿಯವರು ಸಮಕಾಲೀನ ದಲಿತ ಲೋಕದ ಸ್ಥಿತಿಗತಿಗಳನ್ನು ಗಂಭೀರವಾಗಿ ಸ್ವೀಕರಿಸಿದ್ದಾರೆ.

ಬಕಾಲಕ್ಕಿಂತ ದಕ್ಲಕಥಾದೇವಿಯಲ್ಲಿ, ಕೇಬಿಯವರನ್ನು ಕಾಡಿರುವುದು 'ಮುಟ್ಟು', 'ಸೂತಕ' ಎಂಬ ಪದಗಳು. ಕೇಬಿಯವರು ಈ ಪದಗಳನ್ನು ಬೇರೆ ಬೇರೆ ಆಯಾಮಗಳಲ್ಲಿ ನೋಡಿದ್ದಾರೆ. ಮನುಷ್ಯ-ಮನುಷ್ಯನನ್ನೇ ಮುಟ್ಟಲಾರದ ಸಂದರ್ಭಗಳು ದಲಿತರು ಶಾಶ್ವತವಾಗಿ ಈ ಪದಗಳನ್ನು ಬೆನ್ನಿಗಂಟಿಸಿಕೊಂಡಿದ್ದಾರೆ. ಕೇಬಿಯವರು ವಚನ ಪರಂಪರೆಯ ಹಿನ್ನೆಲೆಯಲ್ಲಿ ಇವುಗಳನ್ನು ಮರುಪರಿಶೀಲನೆಗೆ ಒಳಪಡಿಸುತ್ತಾರೆ. ಸಿದ್ದಯ್ಯನವರು ನಂಬಿರುವ ಅನುಭಾವ ಈ ರೀತಿಯದು.

ಜಗವ ತೂಗುವ ದೇವಿ, ಮಗುವ ತೂಗುವ ದೇವಿ
ನಿನ್ನ ಗರ್ಭದಲ್ಲಿ ನನ್ನ ಮರಳಿ ಕರೆದು ಧರಿಸು
ಕಂದನ ಕೈಹಿದು ಯೋನಿ ಗುಹೆಯಿಂದ
ಧ್ಯಾನಿಗುಹೆಗೆ ನಡೆಸು (ಪುಟ-೩, 'ದಕ್ಲಕಥಾದೇವಿ')

ಯೋನಿಗುಹೆಯಿಂದ ಧ್ಯಾನಿ ಗುಹೆಗೆ ಪ್ರವೇಶಿಸುವುದು ಮತ್ತು ಅದರೊಂದಿಗೆ ಸಂಪರ್ಕ ಬೆಳೆಸುವುದು ಕಷ್ಟದ ಕೆಲಸ. ಇದರ ಬಗ್ಗೆ ಅಲ್ಲಮ, ಕನಕದಾಸರು ಹೆಚ್ಚು ಚಿಂತಿಸಿದ್ದಾರೆ. ಸಿದ್ದಯ್ಯನವರು 'ಮುಟ್ಟಿನ' ಪರಿಕಲ್ಪನೆಯನ್ನು ವಚನ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಅದನ್ನು ಮುರಿಯುವ ನಿಟ್ಟಿನಲ್ಲಿ ನುಡಿಯುತ್ತಾರೆ.

ದೇಹವೆಂಬ ದೇಗುಲ
ಮುಟ್ಟಾಗಿ ಮುರಿಯಿತೋ
ಸಿರಿಹೊನ್ನಕಳಶವು
ಕೆಟ್ಟು ಕಳುವಾಯಿತೋ (ಪುಟ-೪, ದಕ್ಲಕಥಾದೇವಿ)

ಹೀಗೆ ಮುಂದುವರೆದು ಮುಟ್ಟಿನ ಪರಿಕಲ್ಪನೆಯು ಪ್ರಕೃತಿಯ ಕಡೆಗೆ ಮುಖಮಾಡುತ್ತದೆ. ಪ್ರಕೃತಿಯ ಅಂತರಾಳದಲ್ಲೇ ಅಸ್ಪೃಶ್ಯವನ್ನು ನೋಡುವ ಕ್ರಮ ಎದುರಾಗುತ್ತದೆ.

ಮುಟ್ಟುಬಾರದ ಜಲವು ಜಲಪ್ರಳಯವಲ್ಲ
ಹೆಪ್ಪುಮುನಿ ಎಂಬುವನು ಹೆಪ್ಪಾಗಿ ಹಿಡಿಯುವನು
ಕಂಡರಿಯದ ನಿಲುವು ಭೂ ಪ್ರಳಯವಲ್ಲ
ಪ್ರಳಯಕ್ಕೆ ಪ್ರಳಯ ಜ್ಯೋತಿಗೆ ಜ್ಯೋತಿ, ಅಸ್ಪೃಶ್ಯ (ಪುಟ-೫ ದಕ್ಲಕಥಾದೇವಿ)

ದಲಿತ ಕಾವ್ಯದ ಮುಖ್ಯ ದನಿಗಳಲ್ಲಿ ಪ್ರಕೃತಿಯನ್ನು ಅವರು ಸ್ವೀಕರಿಸಿದ ಬಗೆ. ಸಿದ್ದಯ್ಯನವರ ಸಮಕಾಲೀನರಾದ ಚೆನ್ನಸ್ವಾಮಿಯವರ 'ನಾನೊಂದು ಮರವಾಗಿದ್ದರೆ' ಕವಿತೆ ಇದಕ್ಕೆ ಮತ್ತೊಂದು ನಿದರ್ಶನ. ಬಕಾಲದಲ್ಲಿ ಗಿಡಬಾಲೆಯ ನೃತ್ಯವಾದರೆ, ದಕ್ಲಕಥಾದೇವಿಯಲ್ಲಿ ದಕ್ಲಕಲಿಯ ನಾಟ್ಯ ಗಮನ ಸೆಳೆಯುತ್ತದೆ. ಇದನ್ನು ಶಿವತಾಂಡವ ನೃತ್ಯಕ್ಕೆ ಸಮೀಕರಿಸಿದಂತೆ ಕಾಣುತ್ತದೆ.

ಚೆಲುವ ಗುಡ್ಡದ ಮೇಲೆ ದಕ್ಲ ಕವಿ ಆಡುತಾನೆ
ನಟರಾಜನಾಂಟ್ಯ
ಎಡಗೈಯಲ್ಲಿ ಹೆಂಡದ ಗಡಿಗೆ
ಬಲಗೈಯಲ್ಲಿ ಬಾಡಿನ ಮಡಿಕೆ
ಹಸುವು ಹಸಿವನ್ನೇ ಉಂಡು... .(ಪುಟ-೨೯, ದಕ್ಲಕಥಾದೇವಿ)

ಹೆಂಡ, ಬಾಡು, ಕೆಳ ಸಂಸ್ಕೃತಿಯ ಆಹಾರ ಕ್ರಮದಲ್ಲಿ ಬೇರೆ ಬೇರೆ ಆಯಾಮಗಳನ್ನು ಪಡೆದುಕೊಂಡಿದೆ. ಶಿವನ ನೃತ್ಯ, ಶೈವ ಸಂಸ್ಕೃತಿಯಲ್ಲಿ ಪ್ರಚಲಿತದಲ್ಲಿರುವ ಮಹತ್ವಕ್ಕೂ ಸಿದ್ದಯ್ಯ ಅವರು ದಕ್ಲ ಕವಿ ಬಳಿ ಆಡಿಸುವ ಕುಣಿತಕ್ಕೂ ಸಾಕಷ್ಟು ವ್ಯತ್ಯಾಸಗಳು ಕಾಣಲಾರವು. ಇದು ಕಾಪಾಲಿಕ, ಕಾಳಾಮುಖ ಆಚರಣೆಗಳಿಗೆ ಪಾತ್ರವಾಗುವಂತೆ ಕಾಣುತ್ತದೆ. ದಕ್ಲಕವಿ ಮುಂದೆ ಗುಡ್ಡಗವಿಯಲ್ಲಿರುವ ಸಿದ್ಧರ ಜುಟ್ಟನ್ನು ಹಿಡಿಯುತ್ತಾನೆ. ಮುಟ್ಟಬಾರದ ಕೂಸು ಮುಟ್ಟುವುದು ಕಾಣುತ್ತದೆ. ಇದರ ಪರಿಣಾಮವಾಗಿ ನವಕೋಟಿ ಸಿದ್ಧರಿಗೆ ಜಾಗವಿಲ್ಲದಂತಾಗುತ್ತದೆ. ಈ ಮೂಲಕ ದಕ್ಲ ಪುರುಷ ನನ್ನು ಸಿದ್ದಯ್ಯನವರು ಮುಖ್ಯವಾಹಿನಿಗೆ ತರುತ್ತಾರೆ. ದಕ್ಲಕಥಾದೇವಿಯಲ್ಲಿ 'ಹಸಿವಿನ' ಪರಿಕಲ್ಪನೆಯು ಬೆಡಗನ್ನು ಮೈಗೂಡಿಸಿಕೊಂಡೇ ಅನಾವರಣಗೊಂಡಿದೆ. ಕಥನಕ್ರಮ, ಗದ್ಯ, ಮುಂಡಿಗೆಯ ಸ್ವರೂಪ, ಇವೆಲ್ಲವನ್ನು ಸಿದ್ದಯ್ಯನವರ ಕಾವ್ಯ ಒಳಗು ಮಾಡಿಕೊಂಡಿದೆ.

ಬಕಾಲ ಮತ್ತು ದಕ್ಲಕಥಾದೇವಿಯ ನಂತರ ಬಂದ 'ಅನಾತ್ಮ' ಬದಲಾದ ಸ್ಥಳೀಯ, ಜಾಗತೀಕ

ಸಮಸ್ಯೆಗಳನ್ನು ಪ್ರಜ್ಞಾಪೂರ್ವಕವಾಗಿಯೇ ಗರ್ಭೀಕರಿಸಿಕೊಂಡಿದೆ. ಭಾಷಿಕವಾಗಿಯೂ ಉಳಿದ ಎರಡು ಕಾವ್ಯಗಳಿಗಿಂತ 'ಅನಾತ್ಮ' ಬೆಡಗಿನ ಪರಿಭಾಷೆಯ ವಿಚಾರದಲ್ಲಿ ಸಡಿಲಗೊಂಡಿದೆ ಎನಿಸುತ್ತದೆ. ಅನಾತ್ಮದಲ್ಲಿ ಇದ್ದಕ್ಕಿದ್ದ ಹಾಗೆ ಅಮೆರಿಕ ಮತ್ತು ಬಾಗ್ದಾದ್ ದೇಶಗಳು ಪ್ರವೇಶಿಸುತ್ತವೆ. ಅಮೆರಿಕಾದ ಕ್ರೌರ್ಯಗಳನ್ನು ಭಾರತಾಂಬೆಯ ಸ್ಥಿತಿಯನ್ನು ಸಿದ್ದಯ್ಯನವರು ಹೀಗೆ ಹೇಳುತ್ತಾರೆ...

ಭಾರತಾಂಬೆಯ ಹೆಣವ ಹೊತ್ತು
ಚಟ್ಟ ಬಂತು ಚಟ್ಟ
ಅಮೆರಿಕದ 'ವೈಟ್ ಹೌಸಿನ'
ಅಟ್ಟ ಇಳಿದು
ಬಾಗ್ದಾದಿನ ಜೀವಗಳನು
ಕೊಂದು ತಿಂದು ರಕ್ತ ಕುಡಿದು
ಊರು ಕೇರಿ ಬೀದಿ ಬೀದಿ
ಊರು ಹೊಲಗೇರಿ ಮೇಲೆ... (ಪುಟ-೧೧ 'ಅನಾತ್ಮ')

ದಲಿತ ಕಾವ್ಯವು ರಾಷ್ಟ್ರೀಯ ಮತ್ತು ಜಾಗತಿಕ ಸಮಸ್ಯೆಗಳನ್ನು ಅನಾವರಣಗೊಳಿಸಿರುವ ಕುರಿತು ಈಗಾಗಲೇ ಚರ್ಚೆಯಾಗಿದೆ. ಸಿದ್ದಯ್ಯ ಈ ದೃಷ್ಟಿಯಲ್ಲಿ ಭಿನ್ನವಾಗಿರುವುದು ಅವರು ನಂಬಿರುವ ಲಯ, ಸಿದ್ಧಾಂತಗಳ ಒಳಗೇನೇ ಈ ಎಲ್ಲಾ ಅಂಶಗಳನ್ನು ತರಬಯಸುವುದನ್ನು ಕಾಣುತ್ತೇವೆ. ತುಮಕೂರು ಪ್ರಾಂತ್ಯದಲ್ಲಿ 'ಸಾಕ್ಷರತಾ' ಎಂಬ ಆಂದೋಲನವು ಉಂಟುಮಾಡಿದ ಪರಿಣಾಮಗಳನ್ನು ಕೇಬಿಯವರು ಏಕಲವ್ಯನ ಹಿನ್ನೆಲೆಯಲ್ಲಿ ಬಿಂಬಿಸುತ್ತಾರೆ. ಮೊನ್ನೆ ನಡೆದ ಸಾಕ್ಷರತಾ ಸಭೆಯಲ್ಲಿ ಎಂದು ಪ್ರಾರಂಭವಾಗಿ–

ಲೋಕದ ಬಯಲಲ್ಲಿ
ಏನು ಅರಿಯದ ಬಾಲಕನಂತೆ
ಕುಣಿದು ಕುಪ್ಪಳಿಸಿ ಕೂಗಿ ಹೇಳಿದ
'ಇನ್ನು ಮುಂದೆ ನನಗೆ ಹೆಬ್ಬೆರಳಿಲ್ಲ
ರುಜು ಮಾಡುವುದು ಕಲಿತೆ'ನೆಂದು
ಮಗನ ಕೈಯಿಡಿದು ತಿದ್ದಿ ಕಲಿಸಿದ
ರುಜು
ರುಜುವೆಂಬ ವಿದ್ಯೆ ಹಿಡಿದು
ಅಪ್ಪನ ಹೆಬ್ಬೆರಳು ಮಗನ
ಕತ್ತರಿಸಿದಂತೆ ತಿದ್ದಿಸಿದ. (ಪುಟ-೪೫, ಅನಾತ್ಮ)

ಸಿದ್ದಯ್ಯ ಅವರು ಅನಾತ್ಮದಲ್ಲಿ ಎತ್ತಿಕೊಳ್ಳುವ ಮತ್ತೊಂದು ಸಮಕಾಲೀನ ಸಂಗತಿ ಎಂದರೆ ಕೇಸರಿ ಬಣ್ಣದ್ದು. ರಾಮನ ಮೂಲಕ ಮೂಲಭೂತವಾದಿಗಳು ಗಿಟ್ಟಿಸಿಕೊಳ್ಳುತ್ತಿರುವ ಪ್ರಚಾರಗಳನ್ನೂ ನಿರೂಪಿಸುತ್ತಾರೆ.


ಅನಾತ್ಮ ತೀರ ಸಮಕಾಲೀನ ಸಮಸ್ಯೆಗಳ ಕಡೆಗೆ ಮುಖಮಾಡಿದಂತೆ ಕಾಣುತ್ತದೆ. ಸೂಳೆಯ ಪ್ರಸಂಗ, ರಾಮ, ಅಕ್ಷರ ಸೂತಕ, ಹಸಿವು, ಮುಂತಾದವುಗಳ ನಡುವೆ ಸಿದ್ದಯ್ಯ ಕಾಲಕ್ಕೆ ತಕ್ಕಂತೆ ನೀಡಿದ ಪ್ರತಿಕ್ರಿಯೆಗಳನ್ನು ಗಮನಿಸಬಹುದು. ಹಸಿವಿನ ಬಗ್ಗೆ ಸಿದ್ದಯ್ಯನವರ ನಿಲುವು ಹೀಗಿದೆ.

ದಹಿಸುವ ದಾಹವನು ತೀರಿಸಲಾರದ
ಬಳಿಕ
ಈ ಧ್ಯಾನ.... ಈ ದೀಕ್ಷೆ
ಪಂಚಭೂತಗಳು ನನಗೆ ಸೂತಕ (ಪುಟ-೪೧, ಅನಾತ್ರ)

'ಸೂತಕ' ಎಂಬ ಪದವನ್ನು ಸಿದ್ದಯ್ಯನವರು ತಮ್ಮ ಮೂರು ಕಾವ್ಯಗಳಲ್ಲಿ ವಿಶ್ಲೇಷಣೆ ಒಳಪಡಿಸುವಾಗ ಆಯಾ ಕಾಲ ಘಟ್ಟಗಳಲ್ಲಿ ಸಂಭವಿಸಿದ ಘಟನೆಗಳನ್ನು ಮರೆಯುವುದಿಲ್ಲ. ಪ್ರಾಯಶಃ ಆಧುನಿಕ ಕಾವ್ಯದಲ್ಲಿ ವಚನ ಪರಿಕಲ್ಪನೆಯೊಂದನ್ನು ಈ ರೀತಿ ದುಡಿಸಿಕೊಂಡವರಲ್ಲಿ ಸಿದ್ದಯ್ಯ ಪ್ರಮುಖರು.

ಇವರ ಕಾವ್ಯವು ಕಾವ್ಯಮೀಮಾಂಸೆಯ ಸಿದ್ಧ ಮಾದರಿಗಳನ್ನು ದಾಟಿದರೂ, ಬೆಡಗಿನ ಮತ್ತು ಮುಂಡಿಗೆಯ ಜಾಡಿನಲ್ಲಿ ಸಾಗಿ ಕೊನೆಗೆ ಜನಪದ ಕಾವ್ಯಗಳ ಸ್ವರೂಪದಲ್ಲೇ ಅಂತ್ಯವಾಗುವಂತೆ ಕಾಣುತ್ತದೆ. ಇದರ ನಡುವೆಯೇ ಸಿದ್ದಯ್ಯನವರು ನಂಬಿದ ಸಿದ್ಧಾಂತಗಳು ಹುಸಿಯಾಗುವುದಿಲ್ಲ. ಅವರೇ ಅಭಿಪ್ರಾಯ ಪಡುವಂತೆ 'ಬೆನ್ನ ಹಿಂದೆ ಅಂಬೇಡ್ಕರ್ ಕೂಗಿದ ಕೂಗು ಒಂದು ಅಂಗೈಯಲ್ಲಿ ಗಾಂಧೀಜಿ ಇನ್ನೊಂದು ಅಂಗೈಯಲ್ಲಿ ಬುದ್ಧ. ಎದುರಿಗೆ ಅಲ್ಲಮಪ್ರಭು. ನಾಲ್ಕು ಮಹಾಜ್ಯೋತಿಗಳ ನಡುವೆ ಹಣತೆ ಧ್ಯಾನಿಸುತ್ತದೆ.' (ಪುಟ-೨ ಅನಾತ್ರ) ಪ್ರಾಯಃ ಈ ಹಣತೆ ಸಿದ್ದಯ್ಯನವರೇ ಆಗಿರಬೇಕು.

ಮೊಬೈಲ್ : ೯೮೮೬೨೭೯೪೪೦



ಹುಬ್ಬಳ್ಳಿಯಾಂವನ ಬೆನ್ನ ಹಿಡಿದು...

ಡಿ.ಆರ್. ಚಂದ್ರಮಾಗಡಿ

ನಮ್ಮೂರಿನಲ್ಲಿ ಮತ್ತು ಅಕ್ಕಪಕ್ಕದ ಊರಿನ ಮಠಗಳಲ್ಲಿ ಶಿವರಾತ್ರಿಯ ಜಾಗರಣೆಗಳೇ ಅಲ್ಲದೆ ಬೇರೆ ಬೇರೆ ಅಹೋರಾತ್ರಿ ಭಜನಾ ಕಾರ್ಯಕ್ರಮಗಳಲ್ಲಿ ತಪ್ಪದೇ ಒಬ್ಬರಿಲ್ಲಾ ಒಬ್ಬರು 'ಇನ್ನೂ ಯಾಕೆ ಬರಲಿಲ್ಲಪ್ಪ ಹುಬ್ಬಳ್ಳಿಯಾವ. ವಾರದಲ್ಲಿ ಮೂರ ಸಾರಿ ಬಂದು ಹೋಗಾವ' ಅನ್ನುವ ಪಲ್ಲವಿ ಇರುವ ತತ್ವ ಪದವನ್ನು ತಂಬೂರಿ, ತಾಳ ಕಂಜರ, ಮೃದಂಗ, ಕೆಲವೊಮ್ಮೆ ಹಾರ್ಮೋನಿಯಂಗಳ ಪಕ್ಕ ವಾದ್ಯದೊಟ್ಟಿಗೆ ಹಾಡುತ್ತಿದ್ದರು. ಬೆಳಗಿನ ಜಾವ ಧನುರ್ಮಾಸದ ಭಜನೆಯ ವೇಳೆ ನಮ್ಮ ತೋಟದ ಕೂಗಳತೆಯ ವ್ಯಾಸರಾಯನ ಪಾಳ್ಯದಲ್ಲಿ ಮಲಗಿದ್ದ ನಮ್ಮನ್ನು ಎಚ್ಚರಿಸುತ್ತಿದ್ದ ಪಕ್ಕವಾದ್ಯದೊಟ್ಟಿಗೆ ಅದರದೇ ಗತ್ತಿನಲ್ಲಿ 'ಅಮ್ಮ ನಿನ್ನ ತೋಳಿನಲ್ಲಿ ಕಂದಾ ನಾನೇ' ಹಾಡು ಕೇಳಿ ಬಂದ ಹಾಗೆ. ಶಿವರಾತ್ರಿ ಜಾಗರಣೆ ವೇಳೆ ತಿರುಮಲೆ ಮಠದಲ್ಲಿ ನಾನು ಚಿಕ್ಕವನಿದ್ದಾಗಿನಿಂದಲೂ 'ಇನ್ನು ಯಾಕೆ ಬರಲಿಲ್ಲವಾ'ವನ್ನು ತತ್ವ ಪದವನ್ನಾಗಿ ಹತ್ತಾರು ಬಾರಿ ಹತ್ತಾರು ತತ್ವ ಪದಗಳ ಮಧ್ಯೆ ಎಲ್ಲರೊಟ್ಟಿಗೆ ಹಾಡುತ್ತಿದ್ದೆವು. ಅರ್ಥವಾಗುವ ವಯಸ್ಸಲ್ಲವಾದರೂ ತಾಳಕ್ಕೆ ಸರಿಯಾಗಿ ಹಾಡುತ್ತಿದ್ದೆ. ಇದೇ ಪದವನ್ನು ಬೆಂಚಕಲ್ಲು ಗುಡ್ಡೆ ಪಾಳ್ಯದ ಜೋಗರ ವೆಂಕಟಾಚಲಯ್ಯ ಮತ್ತು ಅವನ ಹೆಂಡತಿಯ ತಾರಕ ದನಿಯಲ್ಲಿ ಅವರ ಕಿನ್ನರಿ ವಾದ್ಯದೊಟ್ಟಿಗೆ ಹಾಡಿದ್ದು ಕೇಳಿದ್ದೆ.

ಒಮ್ಮೆ ಶಿವರಾತ್ರಿಯ ಜಾಗರಣೆಯಲ್ಲಿ ಈ ತತ್ತ್ವ ಪದದಲ್ಲಿ ಉಂಟಾದ ಜಿಜ್ಞಾಸೆ - ಸನ್ಯಾಸಿಗಳ ಜಾಗರಣೆ, ಸಮಾರಾಧನೆ ಎಲ್ಲದರ ವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದ ನಮ್ಮ ತಂದೆಯನ್ನು 'ಹನುಮಪ್ಪ ಸ್ವಾಮಿ (ಸ್ವಾಮಿ, ಆಗ ಒಬ್ಬರಿಗೊಬ್ಬರು ಗೌರವಿಸುತ್ತಿದ್ದ ರೀತಿ) ಇಲ್ಲೊಂದು ಸಮಸ್ಯೆ ಇದೆ. ಸ್ವಲ್ಪ ಬಿಡಿಸಿ ಹೋಗಿ' ಅಂದದ್ದು, ನಮ್ಮ ತಂದೆ ಅವರ ಮುಂದೆ ಬಂದ ಸಮಸ್ಯೆ ಅವರ ಪರಿಹಾರದ ಪೂರ್ಣ ಪಾಠ ಗೊತ್ತಾಗದ ದಿನಗಳಲ್ಲಿ ಅವರ ಮಾತುಗಳ ಪೈಕಿ 'ಶರಣಸತಿ, ಲಿಂಗಪತಿ, ಅಕ್ಕಮಹಾದೇವಿ, ಇಲ್ಲಿ ಯಾವುದೂ ತಪ್ಪಿಲ್ಲ' ಹೀಗೆ ಸುಮಾರು ಸಮಯ ಈ ತತ್ತ್ವ ಪದದ ಮೇಲೆ ಚರ್ಚೆ ನಡೆದದ್ದು ಈಗಲೂ ನೆನಪಿದೆ.

★

ನಾನು ಹದಿನೇಳು ಹದಿನೆಂಟನೆ ವಯಸ್ಸಿನವನಿದ್ದಾಗ ಸಂಗೀತ ಅನ್ನುವುದಕ್ಕಿಂತ ತತ್ತ್ವ ಪದಗಳ ಗುಂಗು ಇಳಿಯದ್ದರಿಂದ ಅನಿಸುತ್ತದೆ, ನಮ್ಮ ಒಂದು ಗುಂಪು ಭಾವಗೀತೆ ಮತ್ತು ಜನಪದ ಗೀತೆಗಳ ಅಭ್ಯಾಸ ಮಾಡುವ ತರಗತಿ ನಡೆಸಲಾರಂಭಿಸಿತು. ಆಗ ನಾವು ಕಲಿಯುತ್ತಿದ್ದ ಭಾವಗೀತೆಗಳ ಪೈಕಿ 'ಹುಬ್ಬಳ್ಳಿಯಾಂವ'ನೂ ಒಂದು. ನನಗೆ ಆಶ್ಚರ್ಯವೆಂದರೆ, ಈ ಹಿಂದೆಯೇ ಇದನ್ನು ಚೂರುಪಾರು ಬದಲಾವಣೆಯೊಂದಿಗೆ ತತ್ತ್ವ ಪದವಾಗಿ ಹಾಡಿದ್ದೆ, ಕೇಳಿದ್ದೆನಷ್ಟೆ. ಆದರೆ ಅದನ್ನು ವರಕವಿ ದ.ರಾ.ಬೇಂದ್ರೆಯವರು ಬರೆದದ್ದೆಂದು ಆಗ ಗೊತ್ತಿರಲಿಲ್ಲ.

ನಾನು ಹಾಡು ಕಲಿಯುವಾಗ ಈ ಸುಗಮ ಸಂಗೀತದ ಹುಚ್ಚು ಎಷ್ಟಿತ್ತೆಂದರೆ ಮೈ ಎಲ್ಲಾ ಬಾಯಿ ಅನ್ನುವ ಹಾಗೆ, ಬೇಂದ್ರೆಯವರ ಮಾತಲ್ಲೇ ಅದನ್ನು ಹೇಳಬೇಕು – 'ಅಂತರಂಗದಾ ಮೃದಂಗ ಅಂತು ತೋಂತನಾನ, ಚಿತ್ತ ತಾಳ ಬಾರಿಸುತಲಿತ್ತು ಝಣ್ ಝಣನನನಾನ'(ಇದರ ಅರ್ಥ ಸಾಧ್ಯತೆಗಳು ಹಲವಿರಬಹುದು) ಅನ್ನುವ ಹಾಗೆ, ಮೀರಿ ಯಾರ ಮುಂದೆಯಾದರೂ ಹಾಡಬೇಕು ಹಾಡಬೇಕು ಅನ್ನಿಸುತ್ತಿತ್ತು. ಒಮ್ಮೆ ಧಾರವಾಡದ ಮಿತ್ರರ ಮುಂದೆ 'ಹುಬ್ಬಳ್ಳಿಯಾಂವ' ಕವನವನ್ನು ಹಾಡಿದೆ. ಅದೂ ನಾವು ಅಭ್ಯಾಸ ಮಾಡುತ್ತಿದ್ದ ಸುಗಮ ಸಂಗೀತದ ಶೈಲಿಯಲ್ಲಿ. ಅವರು ಹಾಡೆಲ್ಲಾ ಮುಗಿದ ನಂತರ 'ಇದಕ್ಕೆ ಸಂಬಂಧಿಸಿದ ಹಾಗೆ ನಮ್ಮಲ್ಲಿ ಒಂದು ಜಾನಪದ ಗೀತಾ ಐತಿ, ಅದರ ಒನ್ನೆಲಿ ಹೀಗೆ— ನಮ್ಮ ಹಳ್ಳಿಗೆ ಹುಬ್ಬಳ್ಳಿಯಿಂದ ಸಾಹುಕಾರು ಒಂದು ವಾರದ ಬಡ್ಡಿಗೆ ಹಣ ಕೊಟ್ಟು ಹೋಗುತ್ತಿದ್ದರು. ವಾರಕ್ಕೆ ಒಂದು ಸಾರಿ ಬಡ್ಡಿಯ ವಸೂಲಿಗೇಂತ ಸಾಬರನ್ನ ಗೊತ್ತು ಮಾಡಿಕೊಂಡಿದ್ದರು. ಆ ಸಾಬರು ಬಡ್ಡಿಯ ವಸೂಲಿಗೇಂತ ಬರುತ್ತಿದ್ದರು. ನಿಯತವಾಗಿ ಬಂದು ಬಡ್ಡಿ ಹಣ ವಸೂಲಿ ಮಾಡುತ್ತಿದ್ದ, ಅವರು ಬರುವುದು ತಡವಾದರೆ ಹಳ್ಳಿಯ ಹೆಣ್ಣುಮಕ್ಕಳು – ಇನ್ನೂ ಯಾಕ ಬರಲಿಲ್ಲವಾ ಹುಬ್ಬಳ್ಳಿ ಸಾಬಾ ವಾರದಾಗ ಮೂರು ಸರತಿ ಬಂದು ಹೋಗಾವ' ಅಂತ ಗೇಲಿ ಹಾಡುಹಾಡುತ್ತಿದ್ದರು. ಅದನ್ನೇ ಬೇಂದ್ರೆಯವರು ಎಷ್ಟು ಛಂದ ಕವಿತಾ ಮಾಡ್ಯಾರೆ ನೋಡ್ರಿ' ಅಂದರು. ನನಗೆ ಆಶ್ಚರ್ಯವಾದದ್ದೆಂದರೆ ಕವನಕ್ಕೆ ಬೇಕಾಗುವ ವಸ್ತು, ಶಬ್ದ, ಸಾಲು ಯಾವುದನ್ನು ಒಳಗೊಂಡಂತೆ ಮತ್ತು [illegible] ಕವನವಾಗಿ

ರೂಪುಗೊಳ್ಳುವಲ್ಲಿ ಕವಿಯ ಕ್ರಿಯಾಶಕ್ತಿ ಯಾವತ್ತಿನಿಂದ ಯಾವತ್ತಿಗೂ ಕುತೂಹಲ ಹುಟ್ಟಿಸುವ ಸ್ಥಿತಿಯಾಗೇ ಇರುವುದು ಮತ್ತು ಈ ಹಾಡು ಹುಬ್ಬಳ್ಳಿಯಿಂದ ಮಾಗಡಿಯ ಮಠಗಳವರೆಗೂ ಸಮೂಹ ಮಾಧ್ಯಮಗಳಿಲ್ಲದ ಕಾಲದಲ್ಲಿ ಬಂದು ಇಲ್ಲಿ ಜನಜನಿತವಾಗಿರುವುದು.

★

ಕವನವನ್ನು ಅವರವರು ಅರ್ಥೈಸಿಕೊಳ್ಳುವಿಕೆಗೆ ಯೋಗ್ಯವಾಗಿ ಇರುತ್ತದಲ್ಲದೆ ಕವಿಯ ಆಶಯವನ್ನು ತಿಳಿದುಕೊಳ್ಳುವುದಕ್ಕೆ ಹೃದಯ ಶ್ರೀಮಂತಿಕೆ ಇರಬೇಕೆನ್ನುವುದು ಕವನ ವಾಚನದ ಸಂದರ್ಭದಲ್ಲಿ ಮಹತ್ವದ ವಿಚಾರ. ವಿದ್ವಾಂಸ ಗೌರೀಶ ಕಾಯ್ಕಿಣಿ ಅವರು ಬೇಂದ್ರೆಯವರ ಕಾವ್ಯವನ್ನು ಕುರಿತು ಬರೆದ 'ಕಂಟಿನ ಕರೆ'ಯಲ್ಲಿ– ಅವರು ಸುಪ್ರಸಿದ್ಧ ಜನಪ್ರಿಯ ಕವನ 'ಹುಬ್ಬಳ್ಳಿಯಾಂವ' ಓದಿದಾಗೆಲ್ಲಾ, ಹಾಡಿದಾಗೆಲ್ಲಾ ಸಭೆಗೆ ಸಭೆಯೇ ನಗೆಗಡಲಲ್ಲಿ ತೇಲುವುದೂ ಉಂಟು. ಒಮ್ಮೆ ರಸಿಕ ಸಮುದಾಯದ ಈ ಪ್ರತಿಕ್ರಿಯೆ ಕಂಡು ಕವಿಗಳಿಗೆ ತುಂಬಾ ಅಸಹ್ಯವೆನಿಸಿತು. ಅವರು ಸಿಡಿದೆದ್ದರು. ಅವರು ಈ ಕವನವನ್ನು ಹಾಸ್ಯಕ್ಕಾಗಿ ವಿನೋದೀ ಪದ್ಯವಾಗಿ ಬರೆದೇ ಇಲ್ಲ. ಇದು ಅವರ ದೃಷ್ಟಿಯಲ್ಲಿ ಒಂದು ಕಳವಳದ ಕರುಣಗೀತೆ. ತನ್ನ ಪೇಟೆಯ ವಲ್ಲಭ ತನ್ನನ್ನು ಕಾಣಲು ಕೂಡಲು ಬಾರದೆ ವಿರಹದಿಂದ ಹುಚ್ಚೆದ್ದು ಅವನನ್ನು ಹುಡುಕುತ್ತಾ ಹುಡುಕುತ್ತಾ ಕಂಡ ಕಂಡ ಹೆಸರಿಟ್ಟು ಕೇಳುತ್ತಾ ನಡೆದ ಬಸವಿಯ ಮನಃಸ್ಥಿತಿಯ ದಾರುಣ ಚಿತ್ರವಿದು ಎನ್ನುತ್ತಾರೆ.

ಕನ್ನಡ ನವ್ಯಕಾವ್ಯದ ಧೀಮಂತ ಕವಿ ಗೋಪಾಲಕೃಷ್ಣ ಅಡಿಗರು ಹೇಳಿರುವಂತೆ, 'ಭುವನದ ಭಾಗ್ಯ'ದ ಒಂದು ಗಣ್ಯಭಾಗವೇ ಆಗಿರುವ ಅಂಬಿಕಾತನಯದತ್ತರವರ ಸಾಹಿತ್ಯ ಕೃತಿಗಳನ್ನು ವಿವೇಚಿಸಿದ ಡಾ. ಜಿ.ಎಸ್. ಆಮೂರರು ಹೇಳಿರುವಂತೆ– 'ಹುಬ್ಬಳ್ಳಿಯಾಂವ'ದಲ್ಲಿ ನೆನಪೇ ದುಃಖದ ಮೂಲವಾಗಿದೆ. ಬೇಂದ್ರೆಯವರು ಅಲಿಖಿತ 'ಪಂಜು' ನಾಟಕದಲ್ಲಿ ಬರಬೇಕಾಗಿದ್ದ ಈ ಹಾಡಿನ ಭಾವ ಸಂದರ್ಭ ಪ್ರಣಯ ಭಂಗದಿಂದ ಹುಚ್ಚು ಹಿಡಿದ ಸೂಳೆಯೊಬ್ಬಳು ತನ್ನ ಉನ್ಮಾದದಲ್ಲಿ ಈ ಹಾಡನ್ನು ಹೇಳುತ್ತಾಳೆ' ಎಂದಿದೆ. ಈ ಕವಿತೆಯ ಬಾಹ್ಯಭಾಗ ನಾಯಕನ ವರ್ಣನೆಗೇ ಮೀಸಲಾಗಿದೆ. ಅವನ ರೂಪ, ರಸಿಕತೆ, ಸೌಂದರ್ಯ, ದೃಷ್ಟಿ, ಔದಾರ್ಯ, ಉಲ್ಲಾಸ ಪ್ರಕೃತಿ, ಮಾತಿನ ಚತುರತೆ, ಮೋಹಕ ಗುಣ – ಇವುಗಳ ನೆನಪುಮರೆಯಲಾಗದ ನೆನಪಾಗಿ ನಾಯಿಕೆಯನ್ನು ಕಾಡುತ್ತವೆ. ಲೈಂಗಿಕ ಆಕರ್ಷಣೆಯನ್ನು ಮೀರಿದ ಒಂದು ಅನುಭವವನ್ನು ಈ ನಾಯಕನ ಸಹವಾಸದಲ್ಲಿ ನಾಯಿಕೆ ಪಡೆದಿದ್ದಾಳೆ. ಈ ಅನುಭವ ಪ್ರೇಮದ ಅವಸ್ಥೆಯೆಂದು ಖಚಿತವಾಗಿ ಹೇಳುವಂತಿಲ್ಲವಾದರೂ ಅದು ನಾಯಿಕೆಯ ಜೀವನದ ಅಭೂತಪೂರ್ವ ಘಟನೆ ಎನ್ನುವುದು ಮಾತ್ರ ನಿಜ. ಒಂದು ರೀತಿಯಿಂದ ಅವಳು ತನ್ನ ಕಳೆದುಹೋದ ಮುಗ್ಧತೆಯನ್ನು ಈ ಅನುಭವದ ಮೂಲಕ ದೊರಕಿಸಿಕೊಂಡಿದ್ದಾಳೆ ಎಂದು ಹೇಳಿದರೆ ತಪ್ಪಾಗದು. ಆದರೆ ನಾಯಕನಲ್ಲಿರುವ ಭಾವವನ್ನು ಪ್ರೇಮವನ್ನಾಗಿ ಪರಿವರ್ತಿಸಿಕೊಳ್ಳುವ ಸಾಮರ್ಥ್ಯ ಅವಳಲ್ಲಿ ಇಲ್ಲದಿರುವುದರಿಂದ ಉನ್ಮಾದ ಸ್ಥಿತಿಯಲ್ಲಿಯೇ ಅವಳು ಉಳಿದುಬಿಡುತ್ತಾಳೆ' ಎನ್ನುತ್ತಾರೆ.

'ವಿನಯ', 'ಬಾಹತ್ತರ' ಮತ್ತು 'ಒಲವೇ ನಮ್ಮ ಬದುಕು' ಬೇಂದ್ರೆಯವರ ಅತ್ಯುತ್ತಮ ಕವನಗಳನ್ನು ಆಯ್ದು ಮಾಡಿದ ಸಂಗ್ರಹಗಳು. 'ವಿನಯ'ದ 'ಹುಬ್ಬಳ್ಳಿಯಾಂವ' ಕುರಿತಾದ ಟಿಪ್ಪಣಿ ಹೀಗಿದೆ — ಇದೊಂದು ನಾಟ್ಯಗೀತೆ. ನಾಟಕದಲ್ಲಿ ಬಳ್ಳಿ ಹುಚ್ಚಿ ಹೇಳಬಹುದಾದ ಹಾಡು ಇದು.


ಜೀವನದಲ್ಲಿ ಅವಳನ್ನು ಅರಿತು ಜೊತೆಗಿರುವವನನ್ನು ಕಳೆದುಕೊಂಡಾಗ ಅವಳು ಹುಚ್ಚಾಗಿ ಹಾಡಿಕೊಳ್ಳುತ್ತಿದ್ದಾಳೆ ಎಂದು ಕಲ್ಪಿಸಬಹುದು ಅಥವಾ ಇನ್ನೊಬ್ಬಳ ಜೀವನದ ಹಾಡನ್ನು ಅವಳು ಹಾಡುತ್ತಿರಬಹುದು. ಹುಚ್ಚಿಯ ವ್ಯಥೆಯನ್ನು ವರ್ಣಿಸುವಲ್ಲಿ ಈ ಕವನದ ವಿಸ್ತಾರ ವಿಲಾಸ ಇದೆ' ಎಂದು ವಿವರ ನೀಡುತ್ತಾರೆ.

★

ವಿರಹ ಹೃದಯದ ಆಳದಿಂದ ಬರುವ ಒಂದು ಅಪರಿಮಿತ ದನಿ. ಈ ಕವಿತೆಯಲ್ಲಿ ವಿರಹದಿಂದಲೇ ಆರಂಭವಾಗುತ್ತಾ ತನ್ನೆಲ್ಲ ಅನುಭವ - ಸುಖಗಳ ನೆನಪಾಗಿ ಪುನರೂಪಿಸಿಕೊಳ್ಳುತ್ತ ಗೋಳಾಡುವ ಮನಸ್ಸನ್ನು ಜೂರೂ ಅಂದಗೆಡದ ರೀತಿ ಬೇಂದ್ರೆಯವರು ಶಿಲ್ಪವಾಗಿಸಿದ್ದಾರೆ. ಅನುಭವಿಸಿದ ಸುಖಕ್ಕಿಂತ ಅದರ ನೆನಪು ಕೊಡುವ ಸುಖದ ಮಾಧುರ್ಯ ಈ ಕವನದ ಉದ್ದಕ್ಕೂ ನಾಟ್ಯವಾಡುತ್ತಾ ಹೋದರೆ ಕಡೆಯ ನಾಲ್ಕು ಸಾಲುಗಳು ಸ್ಫೋಟಗೊಂಡು ದುಃಖದ ಸ್ಫೋಟಕ್ಕೆ ದಾರಿಯಾಗುತ್ತದೆ.

ಈ ಕವಿತೆಯಲ್ಲಿ ಪ್ರೀತಿ, ನಾಟಕೀಯ ಗುಣ, ವಿರಹ ಇವೆಲ್ಲಾ ಸಮಗ್ರೀಕರಿಸಿಕೊಂಡು ತನ್ನ ಪ್ರಾದೇಶಿಕ ಭಾಷೆಯಲ್ಲಿ ತನ್ನ ಸಮಗ್ರ ಹೇಳಿಕೆಯನ್ನೆಲ್ಲಾ ಕಲಾತ್ಮಕವಾಗಿ ಹೇಳುತ್ತಾ ಹೋಗುವುದರಿಂದ ಇದು ಜಾನಪದ ಸತ್ವ ವ್ಯೆ ತುಂಬಿ, ತನ್ನ ಗೇಯ ಶಕ್ತಿಯಿಂದಾಗಿ 'ಹುಬ್ಬಳ್ಳಿಯಾಂವ'ವನ್ನು ಒಂದು ಸಾರಿ ಕೇಳಿದರೆ ಸಾಕು ನೆನಪಿನಿಂದ ಮರೆಯಾಗುವುದಿಲ್ಲ.

ಹೊಂಬಾಳಮ್ಮನ ಪೇಟೆ, ಮಾಗಡಿ
ಮೊಬೈಲ್: ೯೯೬೪೨೭೧೮೪೯



ಆನಂದ ಝುಂಜರವಾಡರ ಕಾವ್ಯ

ಜಿ.ಕೆ. ರವೀಂದ್ರಕುಮಾರ್

'ಕಾವ್ಯವೇ ಕೈಲಾಸ' ವೆಂಬ ಉತ್ಕಟ ಅನುಭಾವದಲ್ಲಿ ಬರೆಯುವ ಆನಂದ ಝುಂಜರವಾಡ ನಮ್ಮ ನಡುವಿನ ಗಂಭೀರ ಕವಿ. ಜಿಜ್ಞಾಸೆ ಅವರ ಕವಿತೆಗಳ ಮೂಲ ದ್ರವ್ಯ. ಜಿಗುಟುತನ ಅದು ಹೊದ್ದಿರುವ ಆವರಣ. ಕವಿತೆಯೆಂದರೆ ಕೇವಲ ಭಾವ ಎಂದು ಭಾವಿಸಿದವರಿಗೆ ಇಲ್ಲಿಯ ವೈಚಾರಿಕ ಭಾವ ರುಚಿಸುವುದು ಕಡಿಮೆ. ಅದಕ್ಕೆ ಕೇವಲ ವಿಚಾರವೇ ತೊಡಕು ಎಂದು ಹೇಳಲಾಗುವುದಿಲ್ಲ. ಬದಲಾಗಿ ಕವಿತೆಯನ್ನು ಇಡುವ ಕವಿಯ ಕ್ರಮ ಸರಾಗವಾದುದಲ್ಲ. ಓದುವ ಸಿದ್ಧತೆಯನ್ನು ಅದು ಬೇಡುತ್ತದೆ. ಕವಿ ಇದನ್ನು ಬಲವಾಗಿ ನೆಚ್ಚಿಕೊಂಡಿದ್ದಾರೆ. ಸಂವಹನಕ್ಕಿಂತಲೂ ಸೃಜನಶೀಲತೆಯೇ ದೊಡ್ಡ ಸವಾಲು ಕವಿಗೆ. 'ತನ್ನ ಮಾತುಗಳನ್ನು ಜಗತ್ತು ಹೇಗೆ ಕೇಳಿಸಿಕೊಳ್ಳುತ್ತದೆ ಎಂಬುದನ್ನು ಯೋಚಿಸುವ ವ್ಯವಧಾನವನ್ನೇ ಕಳೆದುಕೊಂಡ ತೀವ್ರ ಸೃಜನಶೀಲತೆ ಮಾತ್ರ ನಿಜವಾದ ಕಾವ್ಯ ಸೃಷ್ಟಿಯಲ್ಲಿ ತೊಡಗಬಲ್ಲುದಾಗಿದೆ' ಎಂದು ತಮ್ಮ 'ಗಂಡಭೇರುಂಡ' ಸಂಕಲನದ ಪ್ರಾಸ್ತಾವಿಕ ನುಡಿಗಳಲ್ಲಿ ಅವರು ಹೇಳಿದ್ದು ಸಂವಹನವನ್ನೂ ಮೀರಿದ ಸೃಜನಶೀಲ ಚಟುವಟಿಕೆಯ ಅತ್ತ ಇತ್ತಗಳನ್ನು ಅಂತಹುದೇ ಶ್ರದ್ಧೆಯಿಂದ ನೋಡುವ ಆಹ್ವಾನವನ್ನು ಅದು ನೀಡಿದಂತಾಗಿದೆ. ಬೇಂದ್ರೆ, ಅಡಿಗ, ಮಧುರಚೆನ್ನರ ಪ್ರಭಾವ ಅವರ ಕಾವ್ಯದಲ್ಲಿ ಕಾಣುತ್ತದಾದರೂ ಅಡಿಗ ಮಾರ್ಗ ಅವರಿಗೆ ಪ್ರಿಯವಾದುದು. ಬದಲಾಗುತ್ತಿರುವ ಕಾವ್ಯದ ಭಾಷೆಯ ಸಂದರ್ಭದಲ್ಲಿ ಇಂತಹ ಅನುಲಂಬನವು ಪ್ರಶ್ನೆಗಳನ್ನು ಎತ್ತುವುದಾದರೂ ಕವಿಗೆ ಅಲ್ಲಿಯೂ ಒಂದು ಧೀರಸಂಚಿಕೆ ಇದೆ.

'ದಿಂಡೀ ಮತ್ತು ದಾಂಡೀ' ಸಂಕಲನದ ಪ್ರಾರಂಭದಲ್ಲಿ ಅವರು ಹೇಳುವುದು 'ನನಗೆ ಪ್ರತಿಕ್ಷಣವೂ ಅನನ್ಯ. ಅನ್ಯ ಕವಿಗಳ ತಾಂತ್ರಿಕ ಪ್ರಭಾವದ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ'.

ಝುಂಜರವಾಡರು ಇದುವರೆಗೆ ಆರು ಕವನ ಸಂಕಲನಗಳನ್ನು ಹೊರ ತಂದಿದ್ದಾರೆ. ಅವುಗಳ ಪರಿಧಿಯಲ್ಲಿ (೧೯೭೪), ಖಿನ್ನೋದ್ಯಮ (೧೯೮೦), ಎಲ್ಲಿದ್ದಾನೆ ಮನುಷ್ಯ (೧೯೮೪), ಶಬ್ದ ಪ್ರಸಂಗ (೧೯೯೭), ದಿಂಡೀ ಮತ್ತು ದಾಂಡೀ (೨೦೦೧), ಗಂಡಭೇರುಂಡ (೨೦೦೭). ಮೊದಲ ಮೂರು ಸಂಕಲನಗಳ ನಂತರ ಹದಿಮೂರು ವರ್ಷಗಳ ದೀರ್ಘ ಅವಧಿ ತೆಗೆದುಕೊಂಡು ನಾಲ್ಕನೆಯದನ್ನು ಪ್ರಕಟಿಸಿದ್ದಾರೆ. ಅದು ಅವರ ಕಾವ್ಯ ಪಡೆದುಕೊಂಡ ನಿಜವಾದ ತಿರುವು. 'ಶಬ್ದಪ್ರಸಂಗ' ದ ನಂತರವೇ ಅವರು ಹೆಚ್ಚು ಪ್ರಕಟಗೊಂಡಿರುವುದು.

ಝುಂಜರವಾಡರ ಕಾವ್ಯ ಕರ್ಮದ ಪ್ರಬಲ ಕೇಂದ್ರವೇ ಮನುಷ್ಯ. ತಮ್ಮ ಎಲ್ಲ ಸಂಕಲನಗಳ ಪ್ರಾರಂಭದಲ್ಲಿ ಅವರು ಇದನು ಪ್ರಸ್ತಾಪಿಸಿದ್ದಾರೆ. ತಮ್ಮ ಕಾವ್ಯದ ಕುರಿತು ಅವರಿಗೆ ಅದೆಷ್ಟು ನಂಬಿಕೆಯೆಂದರೆ 'ಮನುಷ್ಯನನ್ನು ಪ್ರೀತಿಸುವ ಎಲ್ಲರೂ ಈ ಕವಿತೆಗಳನ್ನು ಆದರಿಸುವರು' (ಖಿನ್ನೋದ್ಯಮ) ಎಂಬುದಾಗಿ. 'ಇಂದಿನ ಸಾಮಾಜಿಕ ಅವ್ಯವಸ್ಥೆಗೂ ಮನುಷ್ಯನ ಒಳಗಿನ ವಿಷಮತೆಗೂ ಒಂದು ಅವಿನಾಭಾವ ಸಂಬಂಧವಿದೆ' (ಎಲ್ಲಿದ್ದಾನೆ ಮನುಷ್ಯ) ಎಂಬುದಾಗಿ ಅವರು ಭಾವಿಸಿದ್ದಾರೆ. 'ಘೇಂಡಾ ಮೃಗವಾಗುತ್ತಿರುವ ನಾವು ಮನುಷ್ಯರಂತೆ ಉಳಿಯಲು ಕವಿತೆ ಒಂದು ಆಸರೆ' (ದಿಂಡೀ ಮತ್ತು ದಾಂಡೀ) ಎಂಬುದು ಅವರ ನಂಬಿಕೆ. ಮನುಷ್ಯ ನಿರ್ಮಿಸಿಕೊಳ್ಳಬೇಕಾದ ವ್ಯಾಪ್ತ ಚೌಕಟ್ಟುಗಳ ಚಿಂತನೆ ಅವರ ಉಳಿದ ಸಂಕಲನಗಳಲ್ಲಿಯೂ ನಡೆದಿದೆ. ಬಂಡಾಯ ಚಳವಳಿಯ ಸಂದರ್ಭದಲ್ಲಿಯೂ ಕವಿ ಮನುಷ್ಯನ ಬಂಡುಕೋರತನದ ವಿರುದ್ಧವೇ ತಮ್ಮ ಕವನಗಳಲ್ಲಿ ಬಂಡಾಯ ಹೂಡಿದರು ಎಂಬುದು ಗಮನಾರ್ಹ. ತಮ್ಮ ಕಾವ್ಯಪ್ರೇರಣೆಗಳನ್ನು ಕುರಿತು ಬರೆಯುತ್ತ(ಸಂಚಯ - ೨೦೦೩) ಅವರು ಪ್ರತಿಪಾದಿಸಿರುವುದು 'ಮನುಷ್ಯ ಸಂಬಂಧಗಳನ್ನು ಬದುಕಿನ ಅರ್ಥವನ್ನಾಗಿ ಸ್ವೀಕರಿಸಲು ಭಿಕ್ಷೆ ಬೇಡಿದರೂ ಚಿಂತೆಯಿಲ್ಲ, ಅಪ್ರಾಮಾಣಿಕನಾಗಿ ಜಗತ್ತಿನ ಸೌಂದರ್ಯ ಕೆಡಿಸಬಾರದು.' ಹೀಗೆ ಮನುಷ್ಯ ಪ್ರಜ್ಞೆಯನ್ನು ಕೇಂದ್ರವಾಗಿರಿಸಿಕೊಂಡಿರುವ ಕವಿ ಅದನ್ನೇ ಬಗೆ ಬಗೆಯ ಪರಿವೇಶಗಳಲ್ಲಿ ವಿವಿಧ ವಿನ್ಯಾಸಗಳಲ್ಲಿಟ್ಟು ಪರಿಕಿಸಿ ಬೇರೆ ಬೇರೆ ಆಯಾಮಗಳನ್ನು ತಲುಪಿದ್ದಾರೆ. ಅವರ ಈ ಶ್ರದ್ಧಾಪೂರ್ವಕ ಯತ್ನದಲ್ಲಿ ಹಲವು 'ರೂಪಾಂತರ'ಗಳು ಜರುಗುತ್ತವೆ. ಅಂದರೆ ಒಂದೇ ಒಳಮೈಯನ್ನು ಹಲವು ಹೊರಮೈಗಳ ಮೂಲಕ ನೋಡುತ್ತ ನೋಡುತ್ತ ಮನುಷ್ಯನೇ ಕವಿಯಾಗಿ ಕವಿತೆಯಾಗಿ, ಕವಿತೆಯೇ ಕೇಂದ್ರವಾಗಿ ಮತ್ತು ಪರಿಧಿಯೂ ಆಗಿ, ಕಾವ್ಯ ಮೀಮಾಂಸೆಯೂ ಕವಿತೆಗಳ ಒಂದು ಭಾವವಾಗಿ, ಈ ಎಲ್ಲವೂ ಒಂದು ತತ್ತ್ವವಾಗಿ ಮತ್ತು ತತ್ತ್ವ ಎಂಬುದರ ಕವಲಾಗಿ, ತರ್ಕವೆಂಬುದು ಮೂಲವಾಗಿ ಮತ್ತು ಅದನ್ನು ದಾಟುವ ಹೊಳೆಯಾಗಿ ಹೀಗೆ ಅವರ ಸೃಜನಶೀಲತೆಯು ಒಳಗು ಹೊರಗಿನ ಭೇದವನ್ನು ಅಳಿಸಿಹಾಕುತ್ತದೆ. ಈ ಅಂತರತಮ ಅವಿನಾಭಾವದಲ್ಲಿ ಕಾವ್ಯದ 'ಆನಂದಮಾರ್ಗ'ವೊಂದನ್ನು ಕವಿ ಕಂಡುಕೊಂಡಿದ್ದಾರೆ.

ಬಹುರೂಪಿ ಜಿಜ್ಞಾಸೆಯ ಮೂಲಕ ಜೀವನ ದರ್ಶನದ ಬಾಗಿಲು ಮುಟ್ಟುವುದು ಅವರ ಗಮ್ಯ. ಅವರ ಒಟ್ಟು ಕವನಗಳಲ್ಲಿ ಜೀವನ ಮೀಮಾಂಸೆಯೊಂದು ಅರಳುತ್ತಿದೆ. ಕಾವ್ಯ ಮತ್ತು ಸೃಜನಶೀಲತೆ ಕುರಿತ ಅವರ ನಂಬಿಕೆಯ ಹಠ ಮತ್ತು ನಾಸ್ತಿಕ ಅಭಿಪ್ರಾಯವನ್ನು ಈ ಹಿಂದೆ ಪ್ರಸ್ತಾಪಿಸಲಾಗಿದೆ. ಇದು ಅವರ ಆತ್ಮವಿಶ್ವಾಸದ ಪ್ರತೀಕವಾಗಿದ್ದು ಅದಕ್ಕೆ ಸಾಟಿಯಾಗಿ ವಿಮುಕ್ತಶೀಲ ಮನೋಭಾವವಿದೆ. ಹೀಗಾಗಿ ಅಸಲು ಕಸಬುಗಾರಿಕೆಯ ಅಡಿಗತನವನ್ನು ಅವಾಹಿಸಿಕೊಂಡಂತೆ ಅವರು ಬರೆಯುತ್ತಾರೆ.

ಝುಂಜರವಾಡರ ಶಕ್ತಿಯು ಅವರ ಅನುಭವದ ಆಳ, ಜೀವನ ಕುತೂಹಲ, ಪರಂಪರೆಯ ಅರಿವು ಮತ್ತು ಭಾಷಿಕ ಸಾಮರ್ಥ್ಯದಲ್ಲಿದೆ. ಅದಕ್ಕೆ ಸ್ಥಾಯಿಯಾಗಿ ದುಡಿಯುವುದು ತಾತ್ವಿಕ ಪ್ರೀತಿ, ಮನುಷ್ಯ ಪ್ರಜ್ಞೆ, ರಾಜಕೀಯ ಮೌಲ್ಯ ಮತ್ತು ವ್ಯಂಗ್ಯಗಳು. ಇದಕ್ಕಾಗಿ ಅವರು ನೆಚ್ಚಿಕೊಂಡಿರುವುದು ವೈದಿಕ, ಸಾಂಸಾರಿಕ, ಸಂಗೀತ, ಲೈಂಗಿಕ ಮತ್ತು ಕ್ರೌರ್ಯದ ಪರಿಕರಗಳನ್ನು. ಈ ಪ್ರಕ್ರಿಯೆಯಲ್ಲಿ ಕವಿ ಗದ್ಯಗಂಧಿಯಾಗಿದ್ದು ಕಾವ್ಯದ ಅರ್ಥವಂತಿಕೆಯಲ್ಲಿ ಖುಷಿ ಕಾಣುತ್ತಾರೆ. ಇದು ಅವರ ಕಾವ್ಯಕ್ಕೆ ಬಿಕ್ಕಟ್ಟು ತಂದೊಡ್ಡಿದೆ. ಹೀಗಾಗಿ ಅವರ ಕಾವ್ಯ ಸುಲಿದ ಬಾಳೆಯಹಣ್ಣಿನಂತಿರದೆ ಬಿಡಿಸಿ ಬಿಡಿಸಿ ಭೇದಿಸಿ ಪಡೆಯುವ ಹಲಸಿನ ತೊಳೆಯಂತಿದೆ. ಇದರಿಂದ ಝುಂಜರವಾಡರ ಕಾವ್ಯವು ಕಾವ್ಯಕ್ಕಿಂತ ಕಾವ್ಯ ಪ್ರಬಂಧದ ಹಾಗೆ ಕಾಣುತ್ತದೆ. ಅರಿವಿನಲ್ಲಿ ಬೆಳಗುತ್ತ ಪರಿಣಾಮದಲ್ಲಿ ಜಡವೆನಿಸುತ್ತದೆ. ಇದು ಸೋಲು ಗೆಲುವಿನ ಪ್ರಶ್ನೆಯಲ್ಲ. ಸ್ವರೂಪ ವಿವರ. ಅವರು ಕನ್ನಡದ ಗಮನಾರ್ಹ ಕವಿ.

ಇದರ ಹಿನ್ನೆಲೆಯಲ್ಲಿ ಇದಕ್ಕೆ ಇಂಬುಗೊಡುವಂತೆ ಆನಂದ ಝುಂಜರವಾಡರು ತಮ್ಮದೇ ಆದ ಕಾವ್ಯಮೀಮಾಂಸೆಯನ್ನು ಕಟ್ಟಿಕೊಳ್ಳುತ್ತಿದ್ದಾರೆ. ತಮ್ಮ ಕಾವ್ಯರಚನೆಯ ಆರಂಭದಿಂದ ಇಂದಿನವರೆಗೂ ಕವಿತೆಯ ಕುರಿತ ಅವರ ಧ್ಯಾನ ನಡೆದಿದೆ. ಇಪ್ಪತ್ತಕ್ಕೂ ಹೆಚ್ಚು ಕವನಗಳಲ್ಲಿ ಅದನ್ನು ಸಮರ್ಥವಾಗಿ ವಿವರಿಸಲು ಯತ್ನಿಸಿದ್ದಾರೆ. ಕೆಲವು ಬಾರಿ ಗುರುವಂತೆ ಮತ್ತೆ ಕೆಲವು ಸಲ ವಿದ್ಯಾರ್ಥಿಯಂತೆ ಮೊಗೆದು ನೋಡಿದ್ದಾರೆ. ಕವಿ, ಕವಿಯ ನಶ್ವರತೆ, ಶಬ್ದಮಿತಿ, ಶಬ್ದಸಾಧ್ಯತೆ, ಬರೆಯುವ ಕೈಂಕರ್ಯ, ಬಂಧದ ಗುಟ್ಟು, ಕವಿಯ ಬದುಕು, ಹೊಸಕವಿಯ ಜವಾಬ್ದಾರಿ ಹೀಗೆ ಎಲ್ಲವೂ ಚರ್ಚಿತವಾಗಿವೆ.

ಕವಿತೆಯ ಬೆಟ್ಟದಲ್ಲಿ ಭಾಷೆಯ ಬಂಡೆ ಬಂಡೆ
ಮೈತೆರೆದು ಬಿಟ್ಟಿವೆ ಅನಂತ ಪ್ರತಿಮೆಗಳ ಒಳಗಿಟ್ಟುಕೊಂಡೇ
ಜಾಣ ಸುತ್ತಿಗೆಯಿಂದ ಅರ್ಥಹೀನತೆಯ ಕಡಿಯುತ್ತ
ಹೋಗುವುದೊಂದೇ ಕವಿಯ ಕೆಲಸ

(ಅಡಿಗರನ್ನು ನೆನೆದು - .ಶಬ್ದಪ್ರಸಂಗ)

ಇದಕ್ಕೆ ಬೇಕಿರುವುದು ಸೋಲಿಗೆ ಹೆದರದ ಪ್ರಯತ್ನಶೀಲ ಮನೋಭಾವ. ಬೇರೆ ಬೇರೆ ಕವನಗಳಲ್ಲಿ ಅವರು ಅದನ್ನು ಹೀಗೆ ಕಂಡುಕೊಂಡಿದ್ದಾರೆ. ಅವರವರ ಲಟಪಟ ನೇಯ್ಗೆಯಲ್ಲಿಯೇ ಅವರವರ ಉದ್ಧಾರ ಎಂಬುದು ಅವರ ಖಚಿತ ಅಭಿಪ್ರಾಯ.

ತಗದ ಒಗೀರಿ ಇನ್ನರೇ ಆ ನಿಮ್ಮ ಫೋರ್ಮ್ ಸ್ಟ್ಯಾನ
ಈ ಕೈಲೆ ಮಾಡಿದ್ದನ್ನ ಇದಾ ಕೈಲೆ ಉಣ್ಣಾನು

(ಕಾವ್ಯ ಅಂದ್ರ - ಶಬ್ದಪ್ರಸಂಗ)

ನನ್ನ ಪಟ್ಟ್ಯಾಗ ನಾ ಹಾಕಬೇಕ ನನ್ನದೇ ಬೀಜ

(ಮಾರವಾಡಿ - ಗಂಡಭೇರುಂಡ)

ಬೆಳಕಿನ ಪಾರಿವಾಳ ಫಡಫಡಿಸಿತು; ಹಿಡಿಯಹೋಗಿ
ಕಾಲುಜಾರಿ ಬಿದ್ದೆ ಆಳ ಕಂದಕಕ್ಕೆ. ಹುಚ್ಚೆದ್ದು ಕುಣಿದು
ಪದ್ಯವನ್ನಾವರಿಸಿದವು ಶಬ್ದಗಳು *(ಶಬ್ದಗಳು - ಗಂಡಭೇರುಂಡ)*

ಶಬ್ದಗಳನ್ನು ದ್ವೇಷಿಸಲೂ ಶಬ್ದಗಳೇ ಬೇಕು ಪ್ರೀತಿಸಲೂ ಸಹ
ಶಬ್ದಾತೀತವಾಗುವವರೆಗೆ ಶಬ್ದಗಳು ಬೆನ್ನತ್ತುವುವೇ ಹೀಗೆ

(ಹೀಗೆ - ಶಬ್ದಪ್ರಸಂಗ)

ಅರ್ಥವಾಗಲೀ ಶಬ್ದವಾಗಲೀ ತಂದು ಜೋಡಿಸುವ ಕಾಯಕಕ್ಕಿಂತಲೂ ಅವುಗಳ ಅರ್ಥಹೀನತೆಯನ್ನು ನಿವಾರಿಸಿಕೊಂಡು ಹೋಗುವ ವಿಶಿಷ್ಟ ಮನೋಗತದ ಹಿಂದಿನ ಉದ್ದೇಶ ಸೋಸಿ ತೆಗೆಯುವ ಅಪರಂಜಿ ವಿದ್ಯೆಯೇ. ಇದರ ಮೂಲಕ ಉಳಿಯಬೇಕಿರುವುದು ಸಾಂದ್ರ ಭಾವವೇ. ತಾನು ಏನನ್ನೇ ಹೇಳಲಿ ಅದು ತೀರ್ಥಸ್ವರೂಪಿಯಾಗಿ, ಸೂತ್ರಸ್ವರೂಪಿಯಾಗಿ ಇರಬೇಕೆಂಬ ಅಚಲ ವಿಶ್ವಾಸ ಕವಿಯದು.

ಖಂಡಿತ ಇಂದಲ್ಲ ನಾಳೆ ಖಣಿಯಲ್ಲಿ ಹಾರಿ ಗುದ್ದಲಿಯಿಂದ
ಜವರು ನೆತ್ತರು ಸುರಿಸಿ ಜಿರುಸು ಚೂರು ಕಲ್ಲುಂತೆಗಳನ್ನೆಲ್ಲ
ಸಂಸ್ಕರಿಸಿ ಬಲಿಷ್ಠ ಕವನ ಹುಟ್ಟುತ್ತದೆ. *(ಖನನೋದ್ಯಮ)*

ಈ ಬಲಿಷ್ಠದ ಬಯಕೆ ಕವಿಯ ತಾತ್ವಿಕ ಅಭಿಪ್ರಾಯವಿರಬಹುದೇನೋ. ಪದ, ಭಾವ, ಅರ್ಥ, ರೂಪಕ ಹೀಗೆ ಯಾವುದೇ ಹಂತದಲ್ಲೂ ಈ ಪರಿಕಲ್ಪನೆಗೆ ಊನವಾಗದಂತೆ ಕಾಯ್ದುಕೊಂಡು ಬರುವ ಕೆಲಸವನ್ನು ಬಲವಂತವಾಗಿಯಾದರೂ ಝುಂಜರವಾಡರು ಮಾಡಿದ್ದಾರೆ. ತಮ್ಮ ಅನುಭವಗಳನ್ನು 'ಸಿಗದಿರುವುದೂ ಒಂದು ಅನುಭವ' ಎಂಬ ತಾದಾತ್ಮ್ಯದಿಂದ ಧಾರೆಯೆರೆದಿದ್ದಾರೆ. ಹೊಲಗದ್ದೆಯಿರಲಿ, ಕಛೇರಿಯಿರಲಿ, ಪೂಜೆ ಅಡಿಗೆಯಿರಲಿ, ಲೈಂಗಿಕ ವಿವರವಿರಲಿ, ರಾಜಕೀಯವಿರಲಿ, ಸಾಮಾಜಿಕವಿರಲಿ ತಾವು ಹೇಳಬೇಕಿರುವುದನ್ನು ಅವರ ಅತ್ಯಂತ ಸ್ಪಷ್ಟ ವಿವರಗಳೊಡನೆ ದಾಖಲಿಸುವುದು ಕವಿಯ ಅಭ್ಯಾಸ. ಅವರ ಜೀವನ ಕುತೂಹಲವೇ ಇದಕ್ಕೆ ಕಾರಣ. ಶಬ್ದದ ಲಜ್ಜೆಯಿರುವಂತೆ ಅನುಭವದ ಲಜ್ಜೆಯೂ ಇರುತ್ತದೆಯಲ್ಲವೇ?' ಎಂದು ಒಂದೆಡೆ ಅವರು ಕೇಳಿಕೊಂಡಿದ್ದಾರೆ. ಅವರ ಅನುಭವಿಕ ಮಿಂಚಿನ ಸಾಲುಗಳು ಅಲ್ಲಲ್ಲಿ ಓದುಗರನ್ನು ಆವರಿಸಿಕೊಳ್ಳುತ್ತವೆ.

ಒಂದು ಚಮಚ ಬೆಳಕು ಒಂದು ಚಮಚ ಕತ್ತಲೆ ಸಂಜೆಯೊಲೆಯಮೇಲೆ
ಕುದಿವ ಕಂದು ಬಣ್ಣದ ಚಹದಂತೆ ಧರ್ಮ ಪ್ರೀತಿ ವ್ಯವಹಾರ
(ಮನಹಳ್ಳಿ - ಗಂಡಭೇರುಂಡ)

ಒಂದು ವಯಸ್ಸಿಗೆ ಎಲ್ಲ ದ್ವಂದ್ವಗಳೂ ಜುಗಲ್‌ಬಂದಿಯಂತೆ ಕೇಳುತ್ತವೆ
(ಏಕಾಂತ - ದಿಂಡಿ ದಾಂಡಿ)

ಮೈಸೂರಿನಾಗ ಇರೋತನಕ ಮಹಿಷಾಸುರ ಎತ್ತ ಕಾಣಿಸ್ತಾನ
(ಗೆಳೆಯರೊಂದಿಗೆ ಒಂದು ಸಂಜೆ - ದಿಂಡಿದಾಂಡಿ)

ತಮ್ಮ ಅನುಭವದ ಹಲವು ಮೂಲಗಳನ್ನು ಆನಂದರು ಪರಂಪರೆಯಲ್ಲಿ ಗುರುತಿಸಿಕೊಂಡಿದ್ದಾರೆ. 'ಮನುಷ್ಯ ಸೃಷ್ಟಿಯೇ ಅಸ್ವತಂತ್ರ ಎಂಬ ಅರಿವೇ ಗುರುವಾದ ದೇಶದವ ನಾನು' ಎಂದು ನಿರ್ದಿಷ್ಟ ಒಲವನ್ನು ಕವಿ ಒಂದೆಡೆ ಹೇಳಿದ್ದಾರೆ. ಇದು ಅವರ ತಾತ್ವಿಕ ಬದ್ಧತೆ. ಬುದ್ಧ, ಕಾಮೂ, ಶಂಕರ, ಮಧ್ವ, ಅರವಿಂದ, ರಮಣ, ಪರಮಹಂಸ, ಗಾಂಧಿ ಇತ್ಯಾದಿಗಳು 'ಸ್ವರಮಾಲೆ' ಎಂಬ ಕವನದಲ್ಲಿ ಮುಖಾಮುಖಿಯಾಗುತ್ತಾರೆ. 'ಗೆಳೆಯರೊಂದಿಗೆ ಒಂದು ಸಂಜೆ' ಎಂಬ ಜಾಣತನದ ಕವನದಲ್ಲಿ ಮಾರ್ಕ್ಸ್, ರಸೆಲ್, ಫ್ರಾಯ್ಡ್, ಲಾವ್ಜೋತ್ಸು, ಬಸವ, ಜೀಸಸ್, ಮಧ್ವ, ಪುರಂದರರೆಲ್ಲ ಪಾತ್ರಗಳಂತೆ ಬರುತ್ತಾರೆ. ಗಮನಿಸಬೇಕಿರುವುದು ಈ ಯಾರೇ ಬಂದರೂ ಅವರ ವಿಚಾರಧಾರೆಯ ಮೂಲಕವೇ ಬರುತ್ತಾರೆ ವಿನಾ ಕೇವಲ ಆಭರಣಗಳಂತೆ ಅಲ್ಲ. ಇದು ಮೆಚ್ಚಬೇಕಾದ ಸಂಗತಿ. ಈ ಮೂಲಕ ಜಿಜ್ಞಾಸೆಗಳ

ಮಾಲೆಯನ್ನೇ ಕವಿ ಹೆಣೆದಿದ್ದಾರೆ. ಕಡೆಗೂ ಕವಿಯ ಸತ್ವ ಮತ್ತು ಸತ್ಯಗಳಿರುವುದು ವೈದಿಕ ಪುರಾತನತೆ ಮತ್ತು ತತ್ವದಲ್ಲಿ. ಇದೊಂದು ಮುಖ್ಯ ಭೂಮಿಕೆಯಂತೆಯೇ ಕೆಲಸ ಮಾಡುತ್ತದೆ. ಅವಭೃತ ಸ್ನಾನ, ವೈಚಾರಿಕ ಪಶ್ಚಾಂತಿ, ಜರಾಜೀರ್ಣಕಾಯ, ಅಗ್ನ್ಯಲಂಕರಣ ಸಂಲಗ್ನತೆ, ಆದಿಭೌತಿಕ ಪ್ರಪಾತ, ನವರಂಧ್ರ ಬಂಧನ, ಶತುಕ್ರುತತ್ವ, ಕ್ಷುರಸ್ಯದ್ವಾರ... ಹೀಗೆ ಕವಿಯು ತೋರುವ ಜಾಡಿನಲ್ಲಿ ದಾರಿ ತಪ್ಪುವವರೇ ಬಹಳ. ಸಂವಹನದ ಪ್ರಶ್ನೆ ಮತ್ತೆ ಇಲ್ಲಿ ಏಳುತ್ತದೆ. ಕೊನೆಗೂ ಸಾಧಿತವಾಗದ ತೊಡಿಕೆಗಳಿಂದ ಏನು ಪ್ರಯೋಜನ?

ಕವಿಯ ಶಕ್ತಿ ಮತ್ತು ಹಠಗಳು 'ಓದುಗನ ದಾರಿಗೆ ಮುಳ್ಳಾಗತೊಡಗಿದರೆ? ಇಂತಹ ಪಾರಂಪರಿಕ ಒಲವುಗಳು ನಿರ್ಮಿಸುವ ಆವರಣಗಳಿಂದ ಕವಿಗೆ ಭಕ್ತಿ ಪಂಥದ ಮಾಲೆ ಹಾಕುವುದು ಸುಲಭ. ಆದರೆ ವಾಸ್ತವದಲ್ಲಿ ಅದು ಹಾಗಲ್ಲ. ಕಾವ್ಯದ ಗುರಿ ಮತ್ತು ಭಾಷೆಗಳನ್ನು ಗ್ರಾಮ್ಯ ಮತ್ತು ಜನಪದೀಯ ಅಂಶಗಳು ಕಳೆದ ಎರಡು ಮೂರು ದಶಕಗಳಲ್ಲಿ ಸೆಳೆದಿದ್ದು ಉಪಸಂಸ್ಕೃತಿ ಮತ್ತು ಪ್ರತಿಸಂಸ್ಕೃತಿಗಳು ದಟ್ಟವಾಗಿವೆ. ಇವು ಕಟ್ಟಿಕೊಟ್ಟಿರುವ ಪ್ರಾದೇಶಿಕ ಭಾಷೆ, ಸಂಸ್ಕೃತಿ, ವಿನ್ಯಾಸಗಳೂ ಕೂಡ ಅಪರಿಚಿತ ನೇಯ್ಗೆಗಳೇ. ಸಮುದಾಯನಿಷ್ಠ ಸಾಂಸ್ಕೃತಿಕ ಹೆಗ್ಗಳಿಕೆಗಳು ತಮ್ಮ ಕ್ಲಿಷ್ಟತೆಯ ಜೊತೆಗೇ ಅಭಿವ್ಯಕ್ತವಾಗುತ್ತಿರುವ ಈ ಸಂದರ್ಭದಲ್ಲಿ ರಘುನಂದನರಾದರು ತಮ್ಮ ವೈದಿಕ ಪ್ರತಿಮೆಗಳ ಮೂಲಕ ಅವುಗಳಿಗೆ ಎದಿರಾಗುತ್ತಿದ್ದಾರೆಯೇ? ಇದು ಮಾರ್ಗ ಸಂಸ್ಕೃತಿಯು ತನ್ನ ಹೆಣಗುವಿಕೆಯ ಮೂಲಕ ಕೊಡುತ್ತಿರುವ ಉತ್ತರವಿರಬಹುದೇ? ಇದರಿಂದ ಸಾಹಿತ್ಯದ ಸಂಸ್ಕೃತಿ ಬಲಗೊಳ್ಳುವುದು ನಿಜ. ಆದರೆ ಅದು ಯಾರಿಗೆ ಮತ್ತು ಹೇಗೆ ಎಂಬ ಪ್ರಶ್ನೆ ಎಲ್ಲರ ಮುಂದೆಯೂ ಉಳಿಯುತ್ತದೆ.

ಈ ಗುಣಗಳ ಪ್ರತಿಮೆಯಂತೆ ಅವರ ಭಾಷೆ ದುಡಿಯುತ್ತದೆ. ಪ್ರತಿಪದವೂ ತನ್ನ ಅಗ್ನಿದಿವ್ಯವೇನೋ ಎಂಬಂತೆ ಪ್ರಯೋಗಕ್ಕೆ ತೊಡಗುವ ಕವಿ ಭಾಷೆಯ ಜಾಯಮಾನವನ್ನು ಗುರುತಿಸಿಕೊಂಡೇ ಅದರ ವ್ಯಾಕರಣ ಮೀರತೊಡಗುತ್ತಾರೆ. ಅವರ ಉಡಿಗೆ ತೊಡಿಗೆಗಳಿಗೆ ಉಲ್ಲಂಘನೆಯ ಘನಸ್ತಿಕೆ ಕೊಟ್ಟು ಕಾಡಿನ ಮಧ್ಯೆ ದಾರಿ ಮಾಡಿಕೊಂಡು ಹೋಗುವ ಛಾತಿ ತೋರುತ್ತಾರೆ. ಇದು ಉಂಟು ಮಾಡುವ ಪ್ರಮೇಯಗಳು ಹೀಗೆ.

> ಚಿತ್ತಭಿತ್ತಿಯ ಚುಕ್ಕಿ ಚಿತ ಸ್ಥೈರ ವೃತ್ತ ಭಿತ್ತಿಯ ಧ್ವನಿಚಿತ್ತದಲ್ಲಿ ಗುಣೀಭೂತವೇ ಗೌಣ
> ಯಾದೃಚ್ಛಿಕವೇನಲ್ಲ ಕಣ್ಣಾ ಹವಣು ಹಣಾಹಣೆ ಸೆಣಸಾಟದಲ್ಲಿ ಸಮಾಧಿಯಾಗುವವರೆಗೆ

★

> ವಿಶ್ವಸತ್ಯತತ್ವದ ಪ್ರಮಾಣಿತ ಹೊಲ ಭಾಷ್ಯ ಟೀಕೆ
> ಮಂಡೋಪಕಾರಿಣೆಗಳ ಜಟಿಲ ಬೆಳೆ ಜಠರಾಗ್ನಿಗೆ
> ಜಡ ಸಂಕರದ ಛಪ್ಪರದಲಿ ದೇವಭಾಷೆಗೆ ದೇಶ್ಯಭಾಷೆಯ
> ಬೀಗತನ ಕೂಡಿದರೆ ಬೀಗದೆ ಹೆಜ್ಜೆ ನಡೆಸಿದಿರಿ

(ಆಚಾರ್ಯ - ಗಂಡಭೇರುಂಡ)

ಅರ್ಥ ದಕ್ಕುವಾಗ ಭಾಷೆ ದಾರಿ ತಪ್ಪಿಸಿ, ಭಾಷೆ ಸಿಕ್ಕಾಗ ಅದರ ಧ್ವನಿ ಕೈಕೊಟ್ಟು ಕವಿತೆಯನ್ನು ಪರಿಭಾವಿಸುವ ಹಠಯೋಗಕ್ಕೆ ಸಹೃದಯರನ್ನು ಆನಂದರು ಆಹ್ವಾನಿಸುತ್ತಾರೆ. ಕವಿ ಭಾಷೆಯನ್ನು

ಬಲ್ಲವರು. ಆದರ ಸಾಧ್ಯತೆಯನ್ನು ಆನಂದಿಸಬಲ್ಲರು. ಪ್ರತಿಭಾಷೆಯೂ ಸಮಕಾಲೀನತೆಯೊಂದಿಗೆ ಬೇರೆ ಬೇರೆ ಕಾರಣಗಳಿಗಾಗಿ ಸೆಣೆಸುತ್ತಿರುತ್ತದೆ. ಇಂತಹ ಪ್ರತಿ ಸಂದರ್ಭದಲ್ಲಿಯೂ ಅದರ ತೋರುಗಾಣಿಕೆ ಬದಲಾಗುತ್ತಿರುತ್ತದೆ. ವಸ್ತು ಪ್ರತಿರೂಪದಲ್ಲಿ ಸಾಧ್ಯವಾಗುವ ಸಮಕಾಲೀನತೆಯು ಕಾವ್ಯದ ಉಳಿದ ಮುಖದಲ್ಲಿಯೂ ಸಾಧಿತವಾಗಬೇಕು. ಇಲ್ಲವಾದಲ್ಲಿ ಅದು ಬೆರಳೆಣಿಕೆ ಮಂದಿಯ ಧರ್ಮ ಪ್ರೀತಿ ವ್ಯವಹಾರವಾದೀತು. 'ಖಿನ್ನೋದ್ಯಮ' ಸಂಕಲನದ 'ಎಲೆಮನಸುಗಳೇ' ಕವಿತೆಯಲ್ಲಿ ಕವಿ ಮಗುವಿಗೆ ಹೇಳುತ್ತಾರೆ.

ಮಗು ನೋಡು, ಪದಾರ್ಥ ಪ್ರಪಂಚವೆಲ್ಲ ಉಸಿರಾಟ ತತ್ತರ
ದಿಗ್‌ಭ್ರಮೆಗೊಳಿಸದಿರುವುದೇ ದಿಕ್ಕು ದಿಕ್ಕುಗಳ ಅಬ್ಬರ
ಗಡಚಿಕ್ಕುವುದು ಕೂಡ ಸಹಜ ಗುಹ್ಯಾಂತರಾಳಗಳ ಗಹ್ವರ...

ಇಲ್ಲಿಯ ಭಾವ ಅರ್ಥವಾಗಬೇಕಾಗಿರುವುದು ಮಗುವಿಗೋ, ಓದುಗರಿಗೋ? ಈ ಪ್ರಶ್ನೆ ಅವರದೇ ಮಾತಿನಲ್ಲಿ ಹೇಳುವುದಾದರೆ 'ಸ್ವರ್ಥಪಾಠಾಂತರಗಳಷ್ಟೇ ಉತ್ಕಂಠಿತ ಮೂಲ ಪ್ರಶ್ನೆಯಲ್ಲವೇ? ಗೋಪಾಲಕೃಷ್ಣ ಅಡಿಗರು ಹೀಗೆ ಬರೆದಾಗ ಅದನ್ನು ಅರ್ಥಮಾಡಿಸುವ ಮನೆ ಪಾಠಗಳಿದ್ದುವು. ಕವಿಯ ಭಾಗ್ಯವೊಂದು ಅಲ್ಲಿ ಉದಯಿಸಿತು. ಈಗಲೂ ವಿಮರ್ಶೆಯ ಅದೇ ಬೇರುಗಳಿಗೆ ಒಪ್ಪುವಂತೆ ಬರೆಯುವುದು ಸಮಕಾಲೀನತೆಯ ದೃಷ್ಟಿಯಿಂದ ಪ್ರಶ್ನಾರ್ಹ. ಆದರೆ ಅದು ಕವಿಯ ಸ್ವಾತಂತ್ರ್ಯ.

ಆನಂದ ಝುಂಜರವಾಡರ ಬರವಣಿಗೆಯ ಮುಖ್ಯ ಶೈಲಿ ಇದು. ಇದರ ಹೊರತಾಗಿ ಅವರಿಗೊಂದು ಅನುಕೂಲಕರ ಶೈಲಿಯ ವರವೂ ಇದೆ. ಅದು ಉತ್ತರ ಕರ್ನಾಟಕದ ಆಡು ಮಾತಿನ ಲಯ. ಇಲ್ಲಿ ಅವರು ಗೆಲ್ಲುತ್ತಾರೆ. ಚೇಂದ್ಯವನ್ನು ಸೆಣಿಸುತ್ತಾ ಸಾಗುತ್ತಾರೆ. ಆ ಭಾಷಾ ಲಯದ ಸಕಲ ಒಳ ಮುರಿಗೆಗಳನ್ನೂ ಬಳಸಿಕೊಂಡು ಬೆಳೆಯುತ್ತಾರೆ. ಅದೇ ಒದಗಿಸಿಕೊಡುವ ಅರ್ಥ ಮತ್ತು ಭಾವ ಲಯಗಳು ಕವಿತೆಯನ್ನು ಬೇರೆ ಬೇರೆ ಸ್ತರಗಳಿಗೆ ಒಯ್ಯುತ್ತವೆ. ಪ್ರಾತಿನಿಧಿಕವಾಗಿ ಒಂದು ಉದಾಹರಣೆ ನೋಡಬಹುದು.

ಸನಾದಿ ಹಲಗಿ ಕಾಸಾಕತ್ತ್ಯಾರ ಬಲೆ ಸಂಪಿಗಿಯ ನಾದ
ನಿನ್ನ ಮ್ಯಾಲ ಹಾಲ್ಯಾಕ ಗೊಳ್ಳ ಚುರಮುರಿ ಟೀನ ಇಟ್ಟಿ ಹುರದ
ಬಲೇ ಹೇಸಿಲೆ ಅಳತಾರ ಕೂಡಿ 'ನಮ್ಮಿಧ್ಯಾಂಗ ಮುಂದ'?
ಉಣ್ಣಾಕ್ಕೆಬ್ಬಸತಾರ ಓಣ್ಯಾನ ಮಂದಿ ಮಣ್ಣ ಕೊಟ್ಟಬಂದ
ಕರದ , ಕುಂಡಲಿಕ ನೀಡಿ ಈ ಬಿಣಗೇಡಿ ಜೀವಕ್ಕ ಎಷ್ಟ್ಯಾದರ
ಕೊಗೊಣ್ಣು ಮೊದಲ ಒಂದ ತುತ್ತು
ಸುಕಾ ಅನ್ನದ್ಯೊಂದ ಸುಡುಗಾಡ ದೇವ್ರು, ಸುತ್ತತೈತಿ ನಮ್ಮ ಸುತ್ತಮುತ್ತ
ಹಾದಿ ತಪ್ಪಿ ಹುಡುಕಾಕತ್ತೈತಿ ಇಲ್ಲದಲ್ಲೀನ ಮತ್ತ ಮತ್ತ

(ಸುಕಾ - ದಿಂಡಿ ದಾಂಡಿ)

ಇದು ಸಂಪೂರ್ಣ ಭಿನ್ನ ಅಭಿವ್ಯಕ್ತಿ. ಈ ಕವಿತೆಯಲ್ಲಿ ಸಾಧಿತವಾದ ಯಶಸ್ಸು ದೊಡ್ಡದು. ಇದೊಂದು ಸ್ವಾರಸ್ಯವೆಂದರೆ ಆಡು ಮಾತಿನ ಲಯಕ್ಕೆ ಹೊರಳಿದಾಗ ಕವಿ ವಾಚ್ಯವಾಗತೊಡಗುವುದು. ಇದೊಂದು ಕುತೂಹಲಕರ ವಿದ್ಯಮಾನ. ಇದನ್ನೆಲ್ಲ ಅರಿತವರಂತೆ ಕವಿ ತಮ್ಮ 'ಶಬ್ದ ಪ್ರಸಂಗ' ಸಂಕಲನದಲ್ಲಿ ಓದುಗನಿಗೆ ಹೇಳುವುದು–

ನನ್ನ ರಸಿಕನಿಗೆ ತಬ್ಬಲು ಮುಗಿಲಂಗಳಕೆ
ನಿಲುಕುವ ಸೂಚಿಪರ್ಣ ತೋಳುಗಳಿರಲಿ
ತನ್ನ ಚಿತೆಯ ಕಾವಿನಲ್ಲೂ ನಲ್ಲೆಯ ಮೊಲೆಗಾವು
ಹುಡುಕುವ ನಲ್ಲನ ಉನ್ಮತ್ತ ವಾಂಛೆ ಇರಲಿ
ತನ್ನಲ್ಲಿ ಶೂನ್ಯ - ಏಕಾಂತಗಳನ್ನೂ ನಡು - ಸರೋವರದಲಿ
ಅಡಗಿ ಗೆಲ್ಲುವೆನೆಂಬ ಪ್ರಾಕೃತಿಕ ಛಲವಿರಲಿ

ಆನಂದ ಝುಂಜರವಾಡರ ಕಾವ್ಯದಲ್ಲಿ ಜರುಗಿರುವುದೂ ಯಾವುದೇ ಒಳ್ಳೆಯ ಕವಿಯಲ್ಲಿ ಜರುಗಬಹುದಾದ ಜೀವಿತದ ಅರ್ಥದ ಪರಿಶೋಧ. ಇಲ್ಲಿ ಅದು ತಾತ್ವಿಕ ನೆಲೆಯಲ್ಲಿ ಗಂಭೀರವಾಗಿ ನಡೆದಿದೆ. ಕವಿತೆಯ ಸೋಲು ಗೆಲುವುಗಳನ್ನು ಮೀರಿ ಅದರ ಸಂವೇದನೆ ಮಿಡಿಯುತ್ತಿರುತ್ತದೆ. ಈಗಾಗಲೇ ಹೇಳಿದಂತೆ ಯಾವುದೇ ಸಂಗತಿಯ ಸ್ಥಾನಾಂತರದ ಮೂಲಕ ಇಲ್ಲವೇ ರೂಪಾಂತರದ ಮೂಲಕ ಅದರ ಅನಂತತೆಯನ್ನು ಹಿಡಿಯಲು ಕವಿ ಯತ್ನಿಸಿದ್ದಾರೆ. ಇದೊಂದು ಕೇಂದ್ರ. ಪರಿಧಿಯ ಸಾಮಯಿಕ ಶೋಧ. ಪಲ್ಲಟಗೊಳ್ಳುವ ಒಳಿತು-ಕೆಡುಕುಗಳ ಮೂಲಕವೇ ಬದುಕಿನ ಅಸ್ತಿತ್ವದ ಅರ್ಥಪೂರ್ಣತೆಯನ್ನು ಗುರುತಿಸುವ ಪರಿ. ಇದಕ್ಕಾಗಿ ಕವಿ ಪ್ರತಿ ಸಂದರ್ಭವನ್ನೂ ಅದರ ತಾತ್ವಿಕ ಇಲ್ಲವೇ ಸ್ವರೂಪ ಸುಳಿಯಲ್ಲಿ ಇಟ್ಟು ಅರ್ಥ ಪ್ರವೇಶಿಕೆಗೆ ಸಿದ್ಧಗೊಳ್ಳುತ್ತಾರೆ. ಕೆಲವೊಮ್ಮೆ ವಸ್ತುವೂ ನಿಮಿತ್ತಗೊಂಡು ಅರ್ಥ ಅತ್ಯಂತಿಕವಾಗುವುದು. ತಾತ್ವಿಕ ನೆಲೆಯಲ್ಲಿ ಕಂಡುಕೊಳ್ಳುವ ಉತ್ತರಗಳು ನಿಯತಿಯ ನೆಲೆಯಲ್ಲಿ ಅರ್ಥಹೀನವೆನಿಸಬಹುದು. ನಿರರ್ಥಕ ಬೀಜದಲ್ಲಿ ಅರ್ಥದ ಭಾವವರಳುವ ಬದುಕಿನ ಸ್ತೋತ್ರ ಕವಿಯನ್ನು ಕಾಡಿದೆ–

ಎಲ್ಲ ತಿಳಿವಿನ ಮೂಲವೂ ಅಲ್ಲಿಯ ತಿಳಿವಿಲ್ಲದ ಮೂಲದಲ್ಲೇ
ಇರುತ್ತೆ ಜ್ಞಾನದ ಮೂಲವೂ ಅಜ್ಞಾನದಲ್ಲಿ ಎಂಬಂತೆ

(ತಿಳಿವು - ಗಂಡಭೇರುಂಡ)

ಮಾತು ವ್ಯರ್ಥವೆನಿಸುವ ಮಾತೇ ಮಾತಿನ ಉಸಿರಾಗಿದೆ

(ಹೂವಿಗಾಗಿ ಹಣ್ಣಿಗಾಗಿ - ಗಂಡಭೇರುಂಡ)

ಶಬ್ದಗಳನ್ನು ದ್ವೇಷಿಸಲೂ ಶಬ್ದಗಳೇ ಬೇಕು ಪ್ರೀತಿಸಲೂ ಸಹ

(ಹೀಗೆ -ಶಬ್ದಪ್ರಸಂಗ)

ನನ್ನ ಕೊಲ್ಲುವ ಶಕ್ತಿಯನ್ನು ನನ್ನಿಂದಲೇ ಹೀರುತ್ತದೆ ಪ್ರತಿಯೊಂದು ನಾಳೆ

(ನೈಯಾಯಿಕ -ಎಲ್ಲಿದ್ದಾನೆ ಮನುಷ್ಯ)

ಹೀಗೆ ಇಂದು ನಾಳೆಗಳನ್ನು ಒಟ್ಟಿಗೆ ಕ್ರಮಿಸುತ್ತಲೇ ತಮ್ಮ ಕನಸಿನ ಮೂಲ ಮೂರ್ತಿಯ ಕಾಣ್ಕೆಯನ್ನು ಹಿಡಿಯಲು ಹೊರಡುತ್ತಾರೆ. ಲೌಕಿಕದ ಅಧ್ಯಾತ್ಮ ಮತ್ತು ಅಲೌಕಿಕದ ಅಧ್ಯಾತ್ಮಗಳು ನೆಲ ಮುಗಿಲುಗಳ ಒಂದು ಹಂತದಲ್ಲಿ ಸಮೀಕರಣಗೊಳ್ಳುವ ವಾಸ್ತವದಲ್ಲಿ ಜಗತ್ತಿನ ಓಂಸೆಯನ್ನು ಇಟ್ಟು ನೋಡುತ್ತಾರೆ. ಹಾಗಾದರೆ ಅದರ ಮೂಲ ಯಾವುದು? ಹುಡುಕುವ ಮನುಷ್ಯನಲ್ಲಿ ಎರಡೂ ಕೇಂದ್ರಗಳಿವೆಯೇ? ಕವಿಯ ದಿಂಡಿ - ದಾಂಡಿನ ಉಪಮೆಯೂ ಇದನ್ನು ಹೇಳಲು ಹೆಣಗುತ್ತದೆ. ದಾಂಡಿಯು ಆಧುನಿಕತೆಯನ್ನು ವಿಮರ್ಶಿಸುತ್ತದೆ. ದಿಂಡಿಯು ಪಾರಮ್ಯದ ಅಸ್ಪಷ್ಟತೆಯನ್ನು ಗುರುತಿಸುತ್ತದೆ. ಗಂಡ

-ಭೇರುಂಡದ ದ್ವಿಮುಖಿ ಸತ್ಯದಲ್ಲಿ ಕವಿ ಪ್ರತೀಕವನ್ನು ಹುಡುಕುತ್ತಾರೆ. ಹಾಗಾದರೆ ಭೇದವೂ ಅಭೇದವೇ? ದ್ವೈತವೂ ಅದ್ವೈತವೇ? ಕವಿ ನಿಲ್ಲುತ್ತಾರೆ. ಅವರ 'ಸ್ವರಲೀಲೆ' ಕವಿತೆ ಹೇಳುವ ಉತ್ತರ

ಸನ್ಯಾಸಿ ಬಾಗಿಲು ಮುಚ್ಚಿಕೊಂಡೇ ಮಾಡಬೇಕಾದ ಕರ್ಮ ಮಾಡುತ್ತಾನೆ
ಅನುಭಾವಿ ಯಾವ ಕ್ರಿಯೆಗಳಿಗೂ ಬಾಗಿಲು ಮುಚ್ಚಿಕೊಳ್ಳದೆ ತೊಡಗಿಸಿಕೊಳ್ಳುತ್ತಾನೆ
ಹೊಸ್ತಿಲನ್ನು ಎಡವಬಾರದೆನ್ನುವವರಿಗೆ ಇವೆರಡೇ ದಾರಿ

ಕವಿಯ ನಿಲುವು ಯಾವತ್ತಿಗೂ ನಿಮಿತ್ತವೇ. ಯಾಕೆಂದರೆ ಅದು ಬೇರೆ ಬೇರೆಯಾಗಿಯೂ ಕೇಳಿಸುತ್ತದೆ. ಇಂತಹ ಶೋಧದಲ್ಲಿ ತಾತ್ವಿಕತೆಯನ್ನು ಸಾರ್ಥಕವಾಗಿ ಕವಿ ಆಸರೆಯಾಗಿಸಿಕೊಂಡಿದ್ದಾರೆ. ಇದರ ಜೊತೆಗೇ ಕವಿ ಸಾಮಾಜಿಕಗೊಳ್ಳುವ ಸಂದರ್ಭದಲ್ಲಿ ವ್ಯಂಗ್ಯ ವಿಡಂಬನೆಯನ್ನು ಆಶ್ರಯಿಸಿದ್ದಾರೆ. ಇದನ್ನು ಜೀವನದ 'ರಾಜಕೀಯ'ದಲ್ಲಿ ಒಂದು ನೇತ್ಯಾತ್ಮಕ ಮೌಲ್ಯವನ್ನಾಗಿಯೇ ಕವಿ ಕಂಡುಕೊಂಡಿದ್ದಾರೆ. ಅಪರಿಚಿತ ರೂಪಕ ಅನಿರೀಕ್ಷಿತ ಉದಾಹರಣೆಗಳ ಮೂಲಕ ಗಮನ ಸೆಳೆಯುವ ಕವಿ ಇಲ್ಲಿ ವಾಚ್ಯಗೊಂಡಿರುವುದೇ ಹೆಚ್ಚು. ಸಮಾಜವಾದ, ಮಾರ್ಕ್ಸ್‌ವಾದದ ಬಗ್ಗೆ ತೀವ್ರ ಅಪನಂಬಿಕೆ ಅನೇಕ ಕವನಗಳಲ್ಲಿ ವ್ಯಕ್ತಗೊಂಡಿದೆ.

ಸಮಾಜವಾದದ ರಕ್ತ ರಾಷ್ಟ್ರೀಯ ಹೆದ್ದಾರಿಗಳಲ್ಲಿ ವೇಗವಾಗಿ ಸಂಚರಿಸುತ್ತದೆ
(ಹೊತ್ತು - ಶಬ್ದಪ್ರಸಂಗ)

ಸಮಾಜವಾದಿ ಕೃತಿಯ ಕಾಂಪೌಂಡ್ ಮೇಲೆಲ್ಲಾ ಚೂಪಾದ
ಚೂರುಗಳು ನೆಟ್ಟಿರುವಾಗ, ಸೂರ್ಯೋದಯದ ಬೆಳದಿಂಗಳು
ಹುದು ಒಳ ಬರುವುದಾದರೂ ಹೇಗೆ
(ಹಬ್ಬದ ಕಸ - ದಿಂಡಿ ದಾಂಡಿ)

'ಆಟಾ' ಎಂಬ ಪದ್ಯ ಪ್ರಸಂಗಗಳನ್ನು ಲೇವಡಿ ಮಾಡುತ್ತದೆ. 'ಜೆ.ಪಿ. ಜೊತೆ ಮಾತು, ಕೀರ್ತಿ ಸ್ಟಾಲಿನ ಗಿಡ ಮೂಲಿಕೆಗಳು' ವ್ಯಂಗ್ಯದಲ್ಲಿಯೇ ಮುಗಿವೆ. 'ದಾಂಡಿ' ಕವನದಲ್ಲಿ ಘೂಗೋಳ ಅವತಾರ ಕಲ್ಪನೆಗಳಿಂದ 'ಕಲಿನಲಿ' ಯೋಜನೆಗೆ ಜಂಪ್ ಆಗುವುದು; ಥೋಳೆ ಅಡಿಗರನ್ನು ಕಾಣುತ್ತ ಅನಂತಮೂರ್ತಿಯವರಲ್ಲಿ ಭಾರತೀಪುರದ ಅನಂತ ಬುದ್ಧಿವಂತರನ್ನು ಕಾಣುವುದು; ವಿಚಾರ ಸಂಕಿರಣ, ಕವಿಗೋಷ್ಠಿ ಇವುಗಳ ಸತತ ಲೇವಡಿ ಇತ್ಯಾದಿ. ವ್ಯಂಗ್ಯದ ಸಂದರ್ಭದಲ್ಲಿ ಝುಂಜರವಾಡರು ಗೆಲುವು ಸಾಧಿಸಿರುವುದು ಕಡಿಮೆ. ಅವರ ಗಂಭೀರ ನಡಿಗೆಯ ಜೊತೆಗಿನ ವ್ಯತಿರಿಕ್ತ ನಡಿಗೆಯಂತೆ ಇವು ಕಾಣುತ್ತವೆ. 'ಬಲಿಷ್ಠ'ದ ಕುರಿತ ಅವರ ಪ್ರೀತಿ ವ್ಯಂಗ್ಯದ ವಿಷಯದಲ್ಲೂ ಅವರ ತೀವ್ರತೆಯು ಅತಿ ಪ್ರತಿಕ್ರಿಯೆಗೆ ಎಡೆಮಾಡಿಕೊಟ್ಟಿದೆ. ಲೈಂಗಿಕ ಇಲ್ಲವೆ ಕ್ರೌರ್ಯದ ವಿವರ ದಾಖಲಿಸುವಾಗಲೂ ಅವರ ಪುಷ್ಟೀಕರಣದಲ್ಲಿ ಮೈ ಮರೆಯುತ್ತಾರೆ. 'ನಾಪೀಗ' ಎಂಬ ಕವನ ಭೀಭತ್ಸಗೊಂಡಿದೆ.

ಆನಂದ ಝುಂಜರವಾಡರ ಯಶಸ್ಸಿರುವುದು ಮಾನವೀಯ ನೆಲೆಯಲ್ಲಿ ವಾಸ್ತವವನ್ನು ನೋಡುವುದರಲ್ಲಿ ಮತ್ತು ಜೀವನಕ್ಕೊಂದು ವಿಮುಕ್ತಿಯ ಭೂಮಿಕೆಯನ್ನು ಕಾವ್ಯದ ಮೂಲಕ ನಿರ್ಮಿಸಿಕೊಡುವಲ್ಲಿ. ಈ ಕ್ರಿಯೆಯೂ ಜೀವಿತದ ತತ್ವವೇನೋ ಎಂಬ ತನ್ಮಯ ಶ್ರದ್ಧೆಯಲ್ಲಿ ಅವರ ತತ್ತ್ವ, ಕಾವ್ಯವನ್ನು ಜೀವನ್ಮುಖಿಯನ್ನಾಗಿಸಿದೆ. ತನ್ಮಯತೆ ಅವರ ಆಕೃತಿಯನ್ನು ಕಲ್ಪಿಸಿದೆ. ತಮ್ಮ ಕವಿತೆಯೊಂದರಲ್ಲಿ ' ಮಾತಿನಿಂದ ಬಾಧಿತವಾದ ತನ್ಮಯತೆ' (ಸಂತ) ಎಂದು ವರ್ಣಿಸಿದ್ದಾರೆ. ಅವರ ತನ್ಮಯತೆಗೆ ಎರಡೂ ಮಗ್ಗುಲುಗಳಿವೆ-

ಕವಿ ಸತ್ತರೂ ಕಾವ್ಯ ಸಾಯದಂತೆ ಹೇಗೆ ತಾಳಿಕೆ ಬಂದೀತು
ಕಾವ್ಯವನ್ನೇ ಉಣ್ಣು ತಿನ್ನು ಉಸಿರಾಡು
ಮತ್ತೆ ಹುಟ್ಟುತ್ತವೆ ನೂರಾರು ಮಕ್ಕಳು

ಜೀವಿತವನ್ನೇ ಕವಿತೆಯಾಗಿಸುವ ತನ್ಮಯತೆಯು ಜಟಿಲ ಆವರಣ ನಿರ್ಮಿಸಿದಲ್ಲಿ ಮಾತಿನಿಂದ ಬಾಧಿತವಾದ ತನ್ಮಯತೆ ಲಘುವಾಗುತ್ತದೆ. ಈ ಎರಡೂ ಕವಿಯ ಮುಂದಿರುವ ಸವಾಲು. ಬೇಂದ್ರೆಯವರ ಆಡು ಭಾಷೆಗೆ ನಾದ ಬಲವಿತ್ತು, ಗೇಯದ ಬೆಂಬಲವಿತ್ತು. ಅನಂದರ ಗದ್ಯಾತ್ಮಕತೆ ಅದಕ್ಕೆ ಅವಕಾಶ ನೀಡಿಲ್ಲ. ಇನ್ನು ಜಟಿಲ ಶಿಲ್ಪದ ಈ ಸೂತ್ರಕಾವ್ಯದಲ್ಲಿ ಕವಿಯನ್ನು ಮೀರಿಸುವ ಚಿಂತಕನೊಬ್ಬ ಬೆಳೆದು ನಿಂತಿದ್ದಾನೆ. ಅದು ಅಯಾಚಿತವಾಗಿ ನಡೆದಿದೆ. ಭಾಷೆ , ಕಲ್ಪನೆ, ಛಂದಸ್ಸು, ಪ್ರತಿಮೆ, ರೂಪಕ, ಕಾಣ್ಕೆ, ಹಠ, ನಂಬಿಕೆ, ಎಲ್ಲವೂ ಪ್ರಬಲವೇ. ಅದು ತನ್ನಿಂದ ಸೂಸುವ ಬೆಳಕಾಗಿರುವುದು ಇಲ್ಲವೇ ತನ್ನ ಭಾರಕ್ಕೆ ತಾನೇ ಕುಗ್ಗುವ ಕೃಷ್ಣರಂಧ್ರವಾಗುವುದು ಅಲ್ಲಿಯೇ ಇದೆ. ಸಹೃದಯರಿಗೆ ಮೊದಲನೆಯದು ಅಪೇಕ್ಷೆ. ಎರಡನೆಯದು ಆತಂಕ.

(ಮೈಸೂರಿನ 'ಚಿಂತನ ಚಿತ್ತಾರ' ವೇದಿಕೆಯು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಚಿಂತನೆಗಳು- ೨೧.೧೨.೨೦೦೮)

ಕಾರ್ಯಕ್ರಮ ನಿರ್ವಾಹಕರು
ಆಕಾಶವಾಣಿ - ಮಡಿಕೇರಿ
ಮೊಬೈಲ್: ೯೪೪೮೪ ೬೪೨೦೧



ನೀರಪಾತ್ರ

ಕೆ.ಎನ್. ಲಾವಣ್ಯಪ್ರಭಾ

ಭೂತಳದ ಕೊರಕಲ್ಲಿನ ರಂಧ್ರ
ದೊಳಗಿಂದ ಹನಿದ ನೀರಬುಗ್ಗೆ
ಹುಟ್ಟುತ್ತಲೇ ಹರಿವ ಆತುರ
ವಿಸ್ಮಯದ ಪುಟ ತೆರೆದ ನೀರ ಪಾತ್ರ.

ಸಂದುಗೊಂದು, ಕಾಡುಮೇಡು,
ಬಯಲು, ಜಲಪಾತಗುಂಟ
ಹಾದಿ ಸಿಕ್ಕಲ್ಲೆಲ್ಲಾ ಹರಿವ
ಜಂಗಮ ಪ್ರಕ್ರಿಯೆ ಇವನದ್ದು.

ಮಲ್ಲಿಗೆ, ಗುಲಾಬಿ, ಜಾಜಿ
ಕೆಂದಾವರೆಗಳ ದಳ ಚಿಗಿತು
ಸುಗಂಧ ಗಾಳಿ ಪೂಸಿದರೂ
ನಿರ್ಗಂಧ ಉಳಿದ ಅಚಾಂಚಲ್ಯ ವಿರಕ್ತ.


ಹಸಿರು ಬನದ ತುಂಬೆಲ್ಲಾ
ಹೋಹೋಳಿಯಾಟಕ್ಕೆ ಕೆಂಪು, ಕೇಸರಿ,
ಜಿಳಿ, ನೇರಳೆ ಬಣ್ಣ ಕಲೆಸಿ ಲೇಪಿಸಿ-
ದರೂ ನಿರ್ಮಲ ನಿರ್ವರ್ಣ ಉಳಿದ ಸಂತ.

ಗಾಯತ್ರೀ ಮಂತ್ರಕ್ಕೆ ಬೊಗಸೆ ನೀರು,
ಕೊನೆಯ ದಾಹಕ್ಕೆ ಕುಡಿಕೆ ಹನಿ,
ಪಾಪನಾಶಿನಿಗೆ ಶಂಬಿದೊಳಗಿನ ತೀರ್ಥ
ಪಾತ್ರೆ ಹಿಡಿದಷ್ಟೂ ತಳೆದ ಆಕಾರ,
ಬಿಟ್ಟರೆ ನಿರಾಕಾರ ಪರಬ್ರಹ್ಮ.

ನಿರ್ಗಂಧ, ನಿರ್ವರ್ಣ, ನಿರಾಕಾರ
ನಿಗರ್ವಿ ಹರಿನೀರು ಹರಿಯುತ್ತಲೇ
ಜೀವ ತುಂಬುತ್ತ ಜೀವಿಸುವ ಬಗೆ
ಇಲ್ಲಿ ಅನನ್ಯ.

೧೨, ೪ನೇ ಬ್ಲಾಕ್, ಎಸ್‌ಬಿಎಂ ಲೇಔಟ್
ಶ್ರೀರಾಂಪುರ ೨ನೇ ಘಟ್ಟ,
ಮೈಸೂರು - ೨೩
ದೂರವಾಣಿ : ೬೪೫೩೨೩೯

ಗೂಢ



ಬಸವರಾಜ ವಕ್ಕುಂದ

ಮೂಲಾಕ್ಷರಗಳ ಕಲಿಯಲು ಹೆಣಗುತ್ತಿದ್ದ
ತುಂಟ ಹುಡುಗನೊಬ್ಬ
ಆಕಾಶದಂಗಳದಲ್ಲಿ ಸೊನ್ನೆಗಳ ಸುತ್ತಿದ

ಅವನು ಸುತ್ತಿದ ಹಾಗೆಯೇ ಅವು ಸುತ್ತತೊಡಗಿ
ಬೆಳಕಿನ ಪಂಜುಗಳಾದವು

ತಮ್ಮನ್ನು ಬಯಲಲ್ಲಿ ಬಿಸಾಕಿ ಹೋದ ಕಿಲಾಡಿಯನ್ನು
ಮೈಯೆಲ್ಲಾ ಕಣ್ಣಾಗಿ ಅವು ಹುಡುಕುತ್ತಿವೆ
ಅಪರಿಮಿತ ವೇಗದಲ್ಲಿ ಅಪರಂಪಾರ ಬಯಲಿನಲ್ಲಿ

ಅವುಗಳ ಹೆಜ್ಜೆ ಮೂಡಿದಲ್ಲೆಲ್ಲ ಹಾಲು ಹಾದಿ ತೆರೆದಿವೆ
ಆ ತುಂಟ ಮಾತ್ರ ಕಾಣುತ್ತಲೇ ಇಲ್ಲ

ಬದಲಾಗಿ ಎಲ್ಲೋ ಬಚ್ಚಿಟ್ಟುಕೊಂಡು
ಬಯಲ ತುಂಬ ಕತ್ತಲೆಯ ಮಸಿ ಸುರುವಿ
ಹಾದಿಗಳನ್ನೆಲ್ಲ ಮುಚ್ಚಿಬಿಡುತ್ತಾನೆ

ಪೂರ್ಣಾಕ್ಷರಗಳ ಬಲ್ಲ ಪಂಡಿತರೆಲ್ಲ
ಈ ಅಸಂಬದ್ಧ ಸೊನ್ನೆಗಳ ಗೂಢ ತಿಳಿಯದೆ
ಅಕ್ಷರದ ಸಿಕ್ಕುಗಳಲ್ಲಿ ಸಿಕ್ಕು ಕಕ್ಕಾಬಿಕ್ಕಿಯಾಗಿ ಕೂತಿದ್ದಾರೆ.

...ಈ ತನಕ

ಅರೀಫ್ ರಾಜಾ

ಈ ತನಕ ಬಿಳಿಯ ಹಾಳೆಯ ಮೇಲೆ ಬಿದ್ದ ಕಣ್ಣಹನಿಗಳನೆಲ್ಲಾ
ನೆನಸಿಕೊಳ್ಳಲು ಒಂದೊಂದೇ ಅಕ್ಷರಗಳು ಸಾಲಾಗಿ ಬಂದು ನಿಂತವು
ಎದೆಯ ತಲೆಯಲಿ ಒಂದಿಷ್ಟು ಕವಿತೆ ಕಂಬನಿಗಳು
ನಮ್ಮ ನಿದ್ದೆಯಲ್ಲಿ ಉಪವಾಸವಿರುವ ಕನಸುಗಳು ಊಳಿಡುವ ಸದ್ದು ಕೇಳಿ ಸುಖ ಬೆಚ್ಚಿಬಿದ್ದೆ

ಕಾಲದ ಹೊಟ್ಟೆಗೆ ಕಾವು ಕೊಟ್ಟವರು ಹೇಳುತ್ತಾರೆ ಅರಳಿಮರ ಬೋಧಿವೃಕ್ಷವಾದುದು
ಕಣ್ಣು ಮುಚ್ಚಿ ಕುಳಿತ ಸಿದ್ಧಾರ್ಥ ಕಣ್ಣುಬಿಟ್ಟಾಗಲೇ ಸತ್ತು ಹುಟ್ಟುವ ಬೀಜ
ಕಳೆದುಕೂಡುವ ಆಟವು ರೆಕ್ಕೆಗಳನ್ನು ಕತ್ತರಿಸಿಕೊಂಡು ಮತ್ತೆ ಮತ್ತೆ ನೆಲಕ್ಕೆ ಮುತ್ತಿಕ್ಕುವೆನು

ಸುರೆ ಎಂಬುದು ದೇವರು ಹಾಗು ಹೆಣ್ಣಿನ ನಡುವಿನ ಕೊಂಡಿ
ನಶೆಸತ್ತ ಶರಾಬುಗಣ್ಣುಗಳಲಿ ಒಡೆದ ಬೆಳಕಿನ ಬಿಂಬಗಳಾಗಿ ಬೆಂಕಿಹನಿ ತುಳುಕುವುವು
ಕತ್ತಲಾದ ಮೇಲೆ ಭಾನುಬೆತ್ತಲಾದ ಹಾಗೆ ಏಕಾಂತದಲಿ ನಗ್ನಸೂರ್ಯ ನಾಚಿಕೆ ಸುಡುವೆನು

ಕಾವ್ಯ ಪ್ರೇಮದಂತೆ ಅಳಿ ಆಕರ್ಷಣೀಯವಾಗಿ ಸಾವಿನ ಕರೆಯಷ್ಟೇ ಭಯ ಉತ್ಪಾದಿಸುವುದು
ಸಿಡುಕು ಸೂರ್ಯಸತ್ತ ಘಳಿಗೆ ಸಿಡುಬು ಮುಖದ ಚಂದ್ರನಂತೆ
ಜಗಕಂಟಿದ ಪಾಪ ಲೋಕನಿಂದಿತನ ಶಾಪವದು

ಕವಿತೆ ಬರೆದ ಕವಿತೆ ಕವಿತೆಯೇ ಆಗಿರದೆ ಅವಳಾಗುವುದು
ದವಾಖಾನೆಗಳೆಂದರೆ ಭಯಂಕರ ಭುಗಿಲು ಪಡಖಾನೆಯಲಿ ಸ್ವಲ್ಪ ಸಮಾಧಾನವಾಗುವುದು
ಬರೆಯಲಾಗದ ಭಂಡ ಬದುಕು ಒಂದು ಮಾಯೆಯಾಗುವುದು.

ಭಾರತದಲ್ಲಿ ರಾಷ್ಟ್ರೀಯವಾದ

ಮೂಲ ಭಾಷಣ: **ರವೀಂದ್ರನಾಥ ಟ್ಯಾಗೋರ್**
ಕನ್ನಡಕ್ಕೆ: **ಬಿ.ಎಸ್. ಜಯಪ್ರಕಾಶ ನಾರಾಯಣ**

ಭಾರತದಲ್ಲಿ ನಾವು ಎದುರಿಸುತ್ತಿರುವ ಸಮಸ್ಯೆಯು ರಾಜಕೀಯವಾದುದಲ್ಲ, ಅದು ಸಾಮಾಜಿಕವಾದುದು. ಅಂದಮಾತ್ರಕ್ಕೆ ಇದು ಭಾರತದಲ್ಲಿ ಮಾತ್ರ ಇರುವ ಪರಿಸ್ಥಿತಿಯೇನಲ್ಲ. ಪ್ರಪಂಚದ ಎಲ್ಲಾ ದೇಶಗಳಲ್ಲೂ ಇಂಥದೇ ಪರಿಸ್ಥಿತಿ ಇದೆ. ಅಂದಹಾಗೆ, ವಿಶೇಷವಾದ ರಾಜಕೀಯ ಆಸಕ್ತಿಗಳನ್ನು ನಾನು ನಂಬುವುದಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಏನಾಗಿದೆ ಎಂದರೆ, ಅಲ್ಲಿಯ ಆದರ್ಶ, ಮೌಲ್ಯಗಳ ಮೇಲೆಲ್ಲ ರಾಜಕೀಯದ್ದೇ ಯಜಮಾನಿಕೆ. ಇತ್ತ ಭಾರತದಲ್ಲಿ ನಾವು ಕೂಡ ನಿಮ್ಮನ್ನೇ ಕುರುಡಾಗಿ ಅನುಕರಿಸಲು ಹಾತೊರೆಯುತ್ತಿದ್ದೇವೆ. ಈ ಸಂದರ್ಭದಲ್ಲಿ ನಾವು ಯೂರೋಪಿನಲ್ಲಿ ಏನೇನಾಯ್ತು ಎಂಬುದನ್ನು ನೆನಪಿಸಿಕೊಳ್ಳಬೇಕು. ಯೂರೋಪ್‌ನಲ್ಲಿ ಆರಂಭದಿಂದಲೂ ಜನರಲ್ಲಿ ಜನಾಂಗೀಯ ಒಗ್ಗಟ್ಟಿತ್ತು. ಆದರೆ ಅಲ್ಲಿಯ ನಿವಾಸಿಗಳ ಅಗತ್ಯಗಳಿಗೆಲ್ಲ ಸಾಕಾಗುವಷ್ಟು ನೈಸರ್ಗಿಕ ಸಂಪನ್ಮೂಲಗಳಿರಲಿಲ್ಲ. ಆಗ ಸಹಜವಾಗಿಯೇ ಅಲ್ಲಿಯ ನಾಗರಿಕತೆಯು ರಾಜಕೀಯ ಆಕ್ರಮಣಶೀಲತೆ ಮತ್ತು ಲಾಭಕೋರ ಪ್ರವೃತ್ತಿಯನ್ನು ಬೆಳೆಸಿಕೊಂಡಿತು. ಇನ್ನೊಂದೆಡೆ, ಈ ಯೂರೋಪಿಯನ್ನರು ಬಹಳ ಪ್ರಬಲರೂ ಆಸೆಬುರುಕರೂ ಆಗಿದ್ದು ತಮ್ಮ ನೆರೆಹೊರೆಯವರೊಂದಿಗೆ

(ಕವಿ ರವೀಂದ್ರನಾಥ ಟ್ಯಾಗೋರ್ ಅವರು ೧೯೧೬-೧೭ರಲ್ಲಿ ಅಮೆರಿಕ ಮತ್ತು ಜಪಾನ್‌ಗೆ ಪ್ರವಾಸ ಮಾಡಿ, ಎರಡೂ ದೇಶಗಳಲ್ಲೂ Nationalism in America, Nationalism in Japan ಮತ್ತು Nationalism in India ಎಂಬ ಮೂರು ಉಪನ್ಯಾಸಗಳನ್ನು ನೀಡಿದರು. ಟ್ಯಾಗೋರ್ ಅವರು 'ಒಂದು ರಾಷ್ಟ್ರ-ಒಂದೇ ಧರ್ಮ' ತತ್ವಕ್ಕೆ ಸಂಪೂರ್ಣ ವಿರುದ್ಧವಾಗಿದ್ದು, ಬಹುಸಂಸ್ಕೃತಿಗಳ ಪರವಾಗಿದ್ದರು. ಅವರ ಈ ವಿಚಾರಗಳಿಗೆ ಅಮೆರಿಕ ಮತ್ತು ಜಪಾನ್‌ನಲ್ಲಿ ತೀವ್ರ ಅಸಹನೆಯಿಂದ ತುಂಬಿದ್ದ ಪ್ರತಿಕ್ರಿಯೆಗಳು ವ್ಯಕ್ತವಾದವು. ಆದರೂ ಟ್ಯಾಗೋರ್ ತಮ್ಮ ವಿಚಾರದಿಂದ ಹಿಂದೆ ಸರಿಯಲಿಲ್ಲ. ಮೂಲರೂಪದಲ್ಲಿ ೩೯ ಪುಟಗಳಷ್ಟು ದೀರ್ಘವಾಗಿರುವ Nationalism in India ಭಾಷಣದ ಸಂಕ್ಷಿಪ್ತ ರೂಪವಿದು.)



ವ್ಯವಹರಿಸಬೇಕಾಗಿತ್ತು. ಹೀಗಾಗಿ ಈ ಸಮಸ್ಯೆಗಳನ್ನು ಎದುರಿಸಲು ದ್ವೇಷ ಸಾಧನೆಯ ಮಾರ್ಗವೇ ಸರಿ ಎಂಬ ತೀರ್ಮಾನ ಅವರಲ್ಲಿ ಬಂತು. ಕೊನೆಗೆ ಹೀಗೆ ಬೇರೆಯವರ ಜತೆ ಜಮ್ಮ ಸಾಧಿಸುವುದನ್ನೇ ಐರೋಪ್ಯರು ತಮ್ಮ ಅಸ್ತ್ರವಾಗಿ ಬಳಸಿಕೊಂಡರು. ಹೀಗೆ ದೋಚಹೊರಟವರೆಲ್ಲ ಅವರು ಸಂಘಟಿತರಾಗಿ, ಕಂಡವರನ್ನು ದೋಚುತ್ತಿದ್ದರು. ಈಗಲೂ ಯೂರೋಪಿಯನರು ಮಾಡುತ್ತಿರುವುದು ಇದನ್ನೇ. ಅಂದರೆ, ಅವರೆಲ್ಲ ಸಂಘಟಿತರಾಗಿ ಇಡೀ ವಿಶ್ವವನ್ನು ಕೊಳ್ಳೆ ಹೊಡೆಯುತ್ತಲೇ ಇದ್ದಾರೆ.

ಇದೇನೇ ಇರಲಿ, ಭಾರತವು ಇತಿಹಾಸದ ಆರಂಭ ಕಾಲದಿಂದಲೂ ಒಂದು ಸಮಸ್ಯೆಯನ್ನು ಎದುರಿಸುತ್ತಲೇ ಬಂದಿದೆ. ಅದು, ಇಲ್ಲಿನ ಜಾತಿ ಸಮಸ್ಯೆ. ಸಾಮಾನ್ಯವಾಗಿ ಯಾವುದೇ ದೇಶಕ್ಕಾಗಲಿ, ಅದಕ್ಕೆ ತಾನು ಮಾಡುತ್ತಿರುವ ಕೆಲಸದ ಪ್ರಜ್ಞೆ ಇರುತ್ತದೆ. ಆದರೆ ಭಾರತದಲ್ಲಿ ಏನಾಗಿದೆ ಎಂದರೆ, ನಾವು ರಾಜಕೀಯವಾಗಿ ಹೆಜ್ಜೆ ಇಡಲು ಹೋದಾಗಲೆಲ್ಲ ತೀರಾ ವೇಲವವಾಗಿ ಕಂಡಿದ್ದೇವೆ. ಇದನ್ನು ಭಾರತದಲ್ಲಿರುವ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು.

ನಾವು ಶತಶತಮಾನಗಳಿಂದ ಅನುಭವಿಸುತ್ತಿರುವ ಈ ಪರಿಸ್ಥಿತಿ ಇಲ್ಲೂ- ಅಂದರೆ ಅಮೆರಿಕದಲ್ಲೂ- ಬರಬಹುದು. ಈ ದೇಶದಲ್ಲಿ ನನಗೆ ಸಿಕ್ಕ ಹಲವರು, 'ಭಾರತದಲ್ಲಿ ಜಾತಿ ಪದ್ಧತಿಯ ಸ್ಥಿತಿಗತಿ ಏನು?'

ಎಂದು ಪ್ರಶ್ನಿಸಿದರು. ಹೀಗೆ ಕೇಳಿದಾಗಲೆಲ್ಲ ನಾನೂ ಸಹ 'ನಮ್ಮ ಜಾತಿ ಪದ್ಧತಿಯ ಪ್ರಶ್ನೆ ಸದ್ಯಕ್ಕೆ ಪಕ್ಕಕ್ಕಿರಲಿ, ಇಲ್ಲಿ (ಅಮೆರಿಕದಲ್ಲಿ) ನೀವು ರೆಡ್ ಇಂಡಿಯನ್ನರು ಮತ್ತು ನೀಗ್ರೋಗಳಿಗೆಲ್ಲ ಏನು ಮಾಡಿದಿರಿ?' ಎಂದು ಮರುಪ್ರಶ್ನೆ ಹಾಕಿದೆ. ಅವರು ನನಗೆ ಜಾತಿ ಪದ್ಧತಿ ಕುರಿತು ಪ್ರಶ್ನೆ ಹಾಕುತ್ತಿದ್ದುದೇ, ನಾನು ಈ ಪ್ರಶ್ನೆಯನ್ನು ಕೇಳುವಂತೆ ಮಾಡಿತು. ನಿಜ ಹೇಳಬೇಕೆಂದರೆ, ನೀವೆಲ್ಲ ಈಗಲೂ ರೆಡ್ ಇಂಡಿಯನ್ನರು ಮತ್ತು ನೀಗ್ರೋಗಳ ಬಗ್ಗೆ ತಾರತಮ್ಯ ತೋರಿಸುತ್ತಿದ್ದೀರಿ. ಇತರ ಜಾತಿ-ಜನಾಂಗಗಳ ವಿರುದ್ಧವೆಲ್ಲ ನೀವು ಹಿಂಸೆಯನ್ನು ಪ್ರಯೋಗಿಸಿದ್ದೀರಿ. ಹೀಗಾಗಿ, ನೀವು ನಿಮ್ಮ ಈ ಸಮಸ್ಯೆಯನ್ನು ಇಲ್ಲಿ ಬಗೆಹರಿಸಿಕೊಳ್ಳುವವರೆಗೂ ಭಾರತದ ಜಾತಿ ಪದ್ಧತಿಯನ್ನು ಪ್ರಶ್ನಿಸುವ ಹಕ್ಕು ನಿಮಗಿಲ್ಲ.

ಭಾರತವು ಇಷ್ಟೆಲ್ಲಾ ಕಷ್ಟಕೋಟಲೆಗಳನ್ನು ಎದುರಿಸುತ್ತಿದ್ದರೂ ಅದು ಸ್ವಲ್ಪಮಟ್ಟಿಗೆ ಸಾಧನೆಯನ್ನೂ ಮಾಡಿ ತೋರಿಸಿದೆ. ಭಾರತವು ಬಗೆಬಗೆಯ ಜಾತಿ-ಜನಾಂಗಗಳ ನಡುವೆ ಹೊಂದಾಣಿಕೆ ಇಟ್ಟುಕೊಂಡು, ಜಾತಿ-ಜಾತಿಗಳ ಮಧ್ಯೆ ಇರುವ ನಿಜವಾದ ವ್ಯತ್ಯಾಸವನ್ನೂ ಅರಿತುಕೊಳ್ಳಲು ಪ್ರಯತ್ನಿಸಿದೆ. ಇಷ್ಟರ ಮಧ್ಯೆಯೇ ಭಾರತವು ಏಕತೆಯ ನೆಲೆಯನ್ನು ಹುಡುಕುತ್ತಿದೆ. ಇಂಥ ಏಕತೆಯ ನೆಲೆ ನಮಗೆ ಬಂದಿರುವುದು ನಮ್ಮ ದೊಡ್ಡದೊಡ್ಡ ಸಂತರಾದ ಗುರು ನಾನಕ್, ಕಬೀರ, ಚೈತನ್ಯ ಮುಂತಾದವರಿಂದ. ಇವರೆಲ್ಲರೂ ಭಾರತದ ಸಾವಿರಾರು ಜಾತಿ-ಜನಾಂಗಗಳಿಗೆಲ್ಲ 'ದೇವರು ಒಬ್ಬನೇ' ಎಂದು ಬೋಧಿಸಿದರು.

ಹೀಗೆ ನಮ್ಮ -ಅಂದರೆ ಭಾರತದ- ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ತಕ್ಕ ಉಪಾಯಗಳನ್ನು ಕಂಡುಹಿಡಿಯುವ ಮೂಲಕ ನಾವು ಇಡೀ ಜಗತ್ತಿನ ಸಮಸ್ಯೆಯನ್ನು ಬಗೆಹರಿಸಲು ಸಹಾಯ ಮಾಡಿದ್ದೇವೆ. ಹಿಂದೆ ಭಾರತ ಏನಾಗಿತ್ತೋ, ಇವತ್ತು ಇಡೀ ಪ್ರಪಂಚ ಹಾಗಿದೆ. ವಿಜ್ಞಾನದ ಸೌಲಭ್ಯಗಳ ಮೂಲಕ ಇವತ್ತು ಇಡೀ ಜಗತ್ತು ಒಂದು ದೇಶವಾಗುತ್ತಿದೆ. ಹೀಗೆಯೇ ಸಾಗಿದರೆ ನೀವು ಕೂಡ ಏಕತೆಯ ವಿಷಯದಲ್ಲಿ ರಾಜಕೀಯೇತರವಾದ ಒಂದು ನೆಲೆಯನ್ನು ಕಂಡುಕೊಳ್ಳುವ ಕ್ಷಣ ಬರಲಿದೆ. ಭಾರತವು ತನ್ನ ಒಡಲಲ್ಲಿರುವ ಪರಿಹಾರ ಸೂತ್ರವನ್ನು ಇಡೀ ಜಗತ್ತಿಗೇ ಹಂಚಿಕೊಳ್ಳುವಂತಾದರೆ ಅದು ಭಾರತವು ಇಡೀ ಮನುಕುಲಕ್ಕೆ ಕೊಟ್ಟ ಅತಿದೊಡ್ಡ ಕಾಣಿಕೆಯಾಗುತ್ತದೆ. ಇತಿಹಾಸವೆಂದರೆ ಇರುವುದು ಒಂದೇ ಇತಿಹಾಸ. ಅದು ಮನುಷ್ಯನ ಇತಿಹಾಸ ಅಷ್ಟೆ. ಮಿಕ್ಕಂತೆ ಅಲ್ಲಿರುವ ಬೇರೆಬೇರೆ ದೇಶಗಳ ಚರಿತ್ರೆಯೆಲ್ಲ ಅಷ್ಟೊಂದು ದೊಡ್ಡ ಚರಿತ್ರೆಯಲ್ಲಿ ಒಂದೊಂದು ಅಧ್ಯಾಯಗಳಷ್ಟೆ. ಈ ಇತಿಹಾಸದಲ್ಲಿ ಭಾರತ ಅನುಭವಿಸಿರುವ ಯಾತನೆ ಅಸಾಮಾನ್ಯವಾದುದು ಎನ್ನುವುದರಲ್ಲಿ ಅನುಮಾನವಿಲ್ಲ, ಬಿಡಿ.

ಪ್ರತಿಯೊಬ್ಬ ಮನುಷ್ಯನಿಗೂ ಸ್ವಾಭಿಮಾನ ಎನ್ನುವುದು ಇದ್ದೇ ಇರುತ್ತದೆ. ಹೀಗಾಗಿ ಆಳದಲ್ಲಿರುವ ಪ್ರವೃತ್ತಿಯು ಒಬ್ಬ ಮನುಷ್ಯನು ಇನ್ನೊಬ್ಬನೊಂದಿಗೆ ಹೊಡೆದಾಡುವುದನ್ನು ಪ್ರಚೋದಿಸುತ್ತದೆ. ಸ್ವಹಿತಾಸಕ್ತಿಯೇ ಇಂಥ ಸಂಘರ್ಷಗಳಿಗೆಲ್ಲ ಕಾರಣ. ಆದರೆ ಮನುಷ್ಯನ ಪ್ರವೃತ್ತಿ ಇಷ್ಟೇ ಅಲ್ಲ, ಆತನಲ್ಲಿ ಅನುಕಂಪ ಮತ್ತು ಪರಸ್ಪರ ಸಹಕಾರದಂಥ ಇನ್ನೂ ಒಳ್ಳೆಯ ಗುಣಗಳಿವೆ. ಯಾರಿಗೆ ಇಂಥ ಉನ್ನತವಾದ ನೈತಿಕ ಶಕ್ತಿ ಇಲ್ಲವೋ ಅಂಥವರು ಉಳಿದವರ ಜತೆ ಬಾಳಲಾರರು. ಹೀಗಾಗಿ ಇಂಥವರೆಲ್ಲ ಅಂತಿಮವಾಗಿ ನಾಶವಾಗುತ್ತಾರೆ. ಇಲ್ಲದಿದ್ದರೆ, ತೀರಾ ಹೀನಾಯವಾಗಿ ಬದುಕಬೇಕಾಗುತ್ತದೆ. ಯಾರಲ್ಲಿ ಸಹಕಾರ ಬುದ್ಧಿ ಪ್ರಬಲವಾಗಿತ್ತೋ ಅಂಥವರು ಮಾತ್ರವೇ ಇಲ್ಲಿ ಬದುಕುಳಿದಿದ್ದು, ನಾಗರಿಕರಾಗಿದ್ದಾರೆ. ಇದರಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಅಂದರೆ, ಚರಿತ್ರೆಯ ಆರಂಭದ ಕಾಲದಿಂದಲೂ ಮನುಷ್ಯನ ಮುಂದೆ ಎರಡು ಆಯ್ಕೆಗಳಿದ್ದವು. ಅಂದರೆ, ಒಂದೋ ಆತ ಇನ್ನೊಬ್ಬರ ಜತೆ ಹೊಡೆದಾಡುತ್ತ ಸ್ವಹಿತಾಸಕ್ತಿಯನ್ನು ಕಾಪಾಡಿಕೊಳ್ಳಬೇಕಾಗಿತ್ತು; ಇಲ್ಲವೇ ಎಲ್ಲರ ಜತೆ ಬೆರೆತು, ಎಲ್ಲರ ಹಿತಕ್ಕಾಗಿಯೂ ದುಡಿಯಬೇಕಾಗಿತ್ತು.

ಇತಿಹಾಸದ ಆರಂಭಿಕ ಕಾಲಘಟ್ಟದಲ್ಲಿ ಸಂಪರ್ಕ ಸಾಧನಗಳೆಲ್ಲ ಹೀಗಿನಂತೆ ಇರಲಿಲ್ಲ. ಹಾಗೆಯೇ ದೇಶಗಳು ಕೂಡ ತಮ್ಮ ಗಡಿಯನ್ನು ದಾಟಿ ಆಚೆಗೆ ಬರುತ್ತಿರಲಿಲ್ಲ. ಹೀಗಾಗಿ ಆಗೆಲ್ಲ ನಮ್ಮ ಸಮಸ್ಯೆ ಕೂಡ ಚಿಕ್ಕದಾಗಿತ್ತು. ಆಗ ಅಲ್ಲಿ ಇದ್ದವರೆಲ್ಲ ಏಕತೆಯ ಪ್ರಜ್ಞೆ ರೂಢಿಸಿಕೊಂಡು, ತಮ್ಮ ಅಸ್ತಿತ್ವಕ್ಕಾಗಿ ಹೋರಾಡಿದರು. ನಮ್ಮ ಪೂರ್ವಜರ ಇಂಥ ಹೋರಾಟದ ಮನೋಭಾವದಿಂದಾಗಿಯೇ ಅವರ ಕಲೆ, ವಿಜ್ಞಾನ ಮತ್ತು ಧರ್ಮಗಳೆಲ್ಲ ವಿಕಸನಗೊಂಡವು. ವರ್ತಮಾನದ ಬಹಳ ಮುಖ್ಯವಾದ ಅಂಶವೆಂದರೆ, ಈಗ ಬಗೆಬಗೆಯ ಜನಾಂಗಗಳೆಲ್ಲ ತೀರಾ ಹತ್ತಿರಕ್ಕೆ ಬಂದುಬಿಟ್ಟಿವೆ. ಪರಿಣಾಮವಾಗಿ ನಾವೆಲ್ಲರೂ ಮತ್ತೆ ಎರಡು ಬಗೆಯ ಪರ್ಯಾಯ ಆಯ್ಕೆಗಳ ಎದುರು ನಿಂತಿದ್ದೇವೆ. ಅಂದರೆ, ಬಗೆಬಗೆಯ ಜನಾಂಗಗಳ ಜನರೆಲ್ಲ ಪರಸ್ಪರ ಬೆರೆತು, ಸಹಕಾರದಿಂದ ಇರಬೇಕೋ ಎನ್ನುವುದು ಒಂದು ಕಡೆ; ಇಲ್ಲವೇ ಜನಾಂಗಗಳೆಲ್ಲ ಒಂದಕ್ಕೊಂದು ಬಡಿದಾಡಿಕೊಂಡು, ಸೆಣಸಾಡುತ್ತಿರಬೇಕೋ ಎನ್ನುವ ದ್ವಂದ್ವ ಇನ್ನೊಂದು ಕಡೆ.

ಪ್ರೀತಿ ಮತ್ತು ಆಧ್ಯಾತ್ಮಿಕ ಏಕತೆಯ ದಾರ್ಶನಿಕ ಸಂಗತಿಯನ್ನು ಸಾಬೀತು ಪಡಿಸಿದವರು, ಹಾಗೆಯೇ ಇತರರ ಬಗ್ಗೆ ಯಾವುದೇ ದ್ವೇಷ ಭಾವನೆ ತಾಳದ ಮಹಾನುಭಾವರು ಮತ್ತು ಇತರರ ಜಾಗದಲ್ಲಿ ತಮ್ಮನ್ನು ಕಲ್ಪಿಸಿಕೊಳ್ಳುತ್ತಿದ್ದ ನೈತಿಕ ಶಕ್ತಿ ಇದ್ದವರೆಲ್ಲ ನಮ್ಮ ಈ ಯುಗದಲ್ಲಿ ಚಿರಸ್ಥಾಯಿಯಾದ ಸ್ಥಾನಗಳನ್ನು ಹೊಂದಲು ಅತ್ಯಂತ ಯೋಗ್ಯರು ಎನ್ನುವುದನ್ನು ನಾನು ಯಾವ ಮುಲಾಜೂ ಇಲ್ಲದೆ ಹೇಳುತ್ತೇನೆ. ಹಾಗೆಯೇ ಏಕಾಂಗಿಗಳ ಮೇಲೆ ಮುಗಿಬೀಳುವುದನ್ನು ಹೇಳಿಕೊಟ್ಟವರು ಹೇಳಹೆಸರಿಲ್ಲದಂತಾಗುತ್ತಾರೆ ಎನ್ನುವುದೂ ನಿಜ. ನಾವು ನಮ್ಮ ಸಮಸ್ಯೆಗಳನ್ನೆಲ್ಲ ಉನ್ನತವಾದ ನೈತಿಕ ಶಕ್ತಿಯ ಮೂಲಕ ಬಗೆಹರಿಸಿಕೊಳ್ಳಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದ್ದರಿಂದ ಪರಸ್ಪರ ಹೊಡೆದಾಡುವುದನ್ನು ಪ್ರಚೋದಿಸುವ ಬೃಹತ್ ಸಂಸ್ಥೆಗಳಿಂದ ನಮಗೆ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ, ಸಂಘರ್ಷವು ಸದಾ ಇರುವಂತೆ ನೋಡಿಕೊಂಡು ಇತರರ ಸಂಪತ್ತನ್ನು ದೋಚಿ, ದುಡ್ಡು ಮಾಡುವುದೇ ಈ ಸಂಸ್ಥೆಗಳ ಕೆಲಸವಾಗಿದೆ. ಇನ್ನೊಂದೆಡೆ ಈ ಸಂಸ್ಥೆಗಳು ತಮ್ಮ ದೈತ್ಯ ಸ್ವರೂಪ, ತಮ್ಮಲ್ಲಿರುವ ದುಡ್ಡಿನ ಕಿಮ್ಮತ್ತು ಮತ್ತು ಮನುಕುಲದ ಮೇಲೆ ಬೀರುತ್ತಿರುವ ಮೃತ್ಯುಸ್ವರೂಪಿ ಪರಿಣಾಮಗಳಿಂದಾಗಿ ಮನುಷ್ಯನ ಸ್ವಾತಂತ್ರ್ಯಕ್ಕೆ ದೊಡ್ಡ ಅಡ್ಡಗಾಲಾಗಿ ಪರಿಣಮಿಸಿವೆ.

ರಾಷ್ಟ್ರವೆಂಬ ಕಲ್ಪನೆಯು ವಿಕಾಸಗೊಂಡ ಹಾದಿಯಲ್ಲಿ ಭ್ರಾತೃತ್ವವನ್ನು ಎತ್ತಿಹಿಡಿಯುವ ನೀತಿಪೂರಿತ ಸಂಸ್ಕೃತಿಯು ಭೌಗೋಳಿಕ ಎಲ್ಲೆಕಟ್ಟುಗಳಿಂದಾಗಿ ಸೀಮಿತಗೊಂಡಿತು. ಆದರೆ ಬದಲಾದ ಈ ಕಾಲದಲ್ಲಿ ಗಡಿಗಳೆಲ್ಲವೂ ಕೇವಲ ಊಹಾತ್ಮಕವಾಗಿವೆ. ಹೀಗಾಗಿ ಮನುಷ್ಯರೆಲ್ಲ ಈ ನೈತಿಕ ಶಕ್ತಿಯನ್ನು ಎತ್ತಿಹಿಡಿಯಬೇಕಾದ ಕಾಲ ಈಗ ಮತ್ತೆ ಬಂದಿದೆ. ಇದನ್ನು ಮಾಡದಿದ್ದರೆ ನಮ್ಮ ಸರ್ವನಾಶ ಖಂಡಿತ. ಇದು ಈಗ ಮನುಷ್ಯರಲ್ಲಿ ಏನಾಗಿದೆ ಎಂದರೆ, ದುರಾಸೆ ಮತ್ತು ಕ್ರೌರ್ಯ ತಾಂಡವವಾಡುತ್ತಿದೆ. ಇದು ಅನಿರ್ದಿಷ್ಟ ಕಾಲ ಹೀಗೆಯೇ ಮುಂದುವರಿಯುತ್ತ, ಶಸ್ತ್ರಾಸ್ತ್ರಗಳ ಕೈಯೇ ಮೇಲಾದರೆ ದೈತ್ಯ ಯಂತ್ರಗಳು ಮತ್ತು ಉಗ್ರಾಣಗಳು ಹೊರಡಿಸುವ ಧೂಳು, ಹೊಗೆ ಮತ್ತು ಅಲ್ಲಿನ ಕೊಳಕುತನವೇ ಈ ಸುಂದರವಾದ ಭೂಮಿಯನ್ನೆಲ್ಲ ಆವರಿಸಿಕೊಂಡು ಬಿಡುತ್ತದೆ. ಹೀಗಾಗಿ ಮನುಷ್ಯರೆಲ್ಲರೂ ತಮ್ಮ ಪ್ರೀತಿಯ ಶಕ್ತಿ ಮತ್ತು ಸಂಶಯಾತೀತ ಮುನ್ನೋಟದ ಬಲವನ್ನು ಈಗ ಪೂರ್ಣ ಪ್ರಮಾಣದಲ್ಲಿ ಪ್ರದರ್ಶಿಸಬೇಕಾಗಿದೆ. ಇದು ಜಗತ್ತಿಗೆ ಈಗ ಅತ್ಯಗತ್ಯವಾಗಿ ಬೇಕಾಗಿರುವ ನೈತಿಕ ಹೊಂದಾಣಿಕೆಗೆ ಅತಿಮುಖ್ಯ. ಈ ನೈತಿಕ ಹೊಂದಾಣಿಕೆಯಲ್ಲಿ ಹಲವು ರಾಷ್ಟ್ರಗಳ ಜನರು ಮಾತ್ರವಲ್ಲದೆ ಇಡೀ ಜಗತ್ತಿನ ಮನುಷ್ಯರೆಲ್ಲರೂ

ಒಂದುಗೂಡಲಿದ್ದಾರೆ. ಸಕಲರನ್ನೂ ಒಳಗೊಂಡಿರುವ ಆಧ್ಯಾತ್ಮಿಕ ಏಕತೆಯಲ್ಲಿ ಮನುಷ್ಯನು ತನ್ನ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡಾಗ, ಈ ಹೊಸ ಯುಗದ ಅರುಣೋದಯಕ್ಕೆ ಅಗತ್ಯವಾದ ಸಿದ್ಧತೆಯು ವೈಯಕ್ತಿಕ ಮಟ್ಟದಲ್ಲೂ ಅವನ ಸುತ್ತಮುತ್ತಲೂ ಆಗುತ್ತದೆ.

ಪೌರ್ವಾತ್ಯ ಜಗತ್ತಿಗೆ ಪಶ್ಚಿಮದ ನಾಗರಿಕತೆಯನ್ನು ಪರಿಚಯಿಸುವ ಮತ್ತು ಅದನ್ನು ಸಮರ್ಥಿಸಿಕೊಳ್ಳುವ ಹೊಣೆಗಾರಿಕೆಯನ್ನು ಅಮೆರಿಕ ಹೊತ್ತುಕೊಂಡಿದೆ. ಏಕೆಂದರೆ, ಯೂರೋಪ್ ಖಂಡವು ಮನುಷ್ಯತ್ವದ ಮೇಲಿನ ನಂಬಿಕೆಯನ್ನೇ ಕಳೆದುಕೊಂಡಿದ್ದು, ಅಪನಂಬಿಕೆ ಮತ್ತು ರೋಗಗ್ರಸ್ತ ಮನಃಸ್ಥಿತಿಯ ಆಡುಂಬೊಲವಾಗಿದೆ. ಇನ್ನೊಂದೆಡೆ, ಅಮೆರಿಕ ನಿರಾಶಾವಾದಿಯಾಗಲಿ, ಸೊಕ್ಕಿನ ದೇಶವಾಗಲಿ ಆಗಿಲ್ಲ. ಆದರೆ, ಯೂರೋಪ್ ಪ್ರತಿಯೊಂದು ವಿಷಯದಲ್ಲೂ ಆತ್ಮರತಿಯ ಪರಮಾವಧಿಯನ್ನು ಮುಟ್ಟಿದೆ. ವಾಸ್ತವವೇಂದರೆ, ಇಂಥ ಅತಿಯಾದ ಹೆಮ್ಮೆಯ ಭಾವನೆಯು ಕೊನೆಗೆ ಕಣ್ಣಿಗೆ ಕತ್ತಲು ಕವಿಯುವಂತೆ ಮಾಡುತ್ತದೆ. ಈಗ ಯೂರೋಪಿಗೆ ಆಗುತ್ತಿರುವುದು ಇದೇ! ಅಂದರೆ ಅದು ಕ್ರಮೇಣ ತನ್ನ ಆಂತರಿಕ ಮತ್ತು ಬಾಹ್ಯ ಹವ್ಯಾಸಗಳಲ್ಲೆಲ್ಲ ಅನಾರೋಗ್ಯಕರವಾಗಿ ಬೆಳೆಯುತ್ತಿದೆ. ಅದು ಇಂಚು ಇಂಚಿನಲ್ಲೂ ತಾನು ಪಾಶ್ಚಾತ್ಯ ಎಂಬುದನ್ನು ಎತ್ತಿ ತೋರಿಸುತ್ತಿದೆ. ಇಷ್ಟೇ ಅಲ್ಲ, ಈ ಅಂಶವನ್ನೇ ಅದು ಇತರರತ್ತ ತೂರಿ, ಅವರಿಗೆಲ್ಲ ಅವಮಾನ ಮಾಡುತ್ತಿದೆ. ಹೀಗಾಗಿಯೇ ಯೂರೋಪ್‌ಗೆ ತನ್ನಲ್ಲಿರುವ ಒಳ್ಳೆಯ ಅಂಶಗಳನ್ನು ಪೌರ್ವಾತ್ಯ ಪ್ರಪಂಚಕ್ಕೆ ತಿಳಿಸುವುದಾಗಲಿ, ಪೌರ್ವಾತ್ಯ ಜಗತ್ತು ಶತಶತಮಾನಗಳಿಂದ ಕಾಪಾಡಿಕೊಂಡು ಬಂದಿರುವ ವಿವೇಕವನ್ನು ತಾನು ಸ್ವೀಕರಿಸುವುದಾಗಲಿ ಸಾಧ್ಯವಾಗುತ್ತಿಲ್ಲ.

ಯೂರೋಪಿನ ಪ್ರತಿಯೊಂದು ರಾಷ್ಟ್ರವೂ ಪ್ರಪಂಚದ ಬೇರೆಬೇರೆ ಕಡೆಗಳಲ್ಲಿ ಹಲವರನ್ನು ಶೋಷಿಸಿದೆ. ಅಂದರೆ, ಅವರು ಹೆಜ್ಜೆ ಇಟ್ಟಲ್ಲೆಲ್ಲ ಬಲಿಪಶುಗಳ ಸಂತಾನವೇ ಸೃಷ್ಟಿಯಾಗಿದೆ. ಹೀಗಾಗಿ ಬಗೆಬಗೆಯ ಜನಾಂಗಗಳ ಅಂತರ್ಯವನ್ನು ಅರಿತುಕೊಳ್ಳಲು ತೀರಾ ಅಗತ್ಯವಾದ ಅವರ ನೈತಿಕ ಸಹಾನುಭೂತಿಯೂ ಬೌದ್ಧಿಕ ಸಹಾನುಭೂತಿಯೂ ಮಸುಕು ಮಸುಕಾಗಿವೆ. ನಿಜ ಹೇಳಬೇಕೆಂದರೆ, ಭಾರತವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ಇಂಗ್ಲೀಷರಿಗೆ ಸಾಧ್ಯವೇ ಇಲ್ಲ. ಏಕೆಂದರೆ, ಅವರು ಯೂರೋಪನ್ನು ಬಿಟ್ಟು ಬೇರೇನನ್ನೂ ಹಚ್ಚಿಕೊಂಡಿಲ್ಲ. ಈ ವಿಷಯದಲ್ಲಿ ಇಂಗ್ಲೆಂಡನ್ನು ಫ್ರಾನ್ಸ್ ಮತ್ತು ಜರ್ಮನಿಯ ಜತೆ ಹೋಲಿಸಿ ನೋಡಿದರೆ ಎಲ್ಲವೂ ಸ್ಪಷ್ಟವಾಗುತ್ತದೆ. ಫ್ರಾನ್ಸ್ ಮತ್ತು ಜರ್ಮನಿಗಳು ಭಾರತವನ್ನು ಕುರಿತು ಅಧ್ಯಯನ ಮಾಡುವಂಥ ಅಪಾರ ಸಂಖ್ಯೆಯ ವಿದ್ವಾಂಸರನ್ನು ಸೃಷ್ಟಿಸಿವೆ. ಆದರೆ ಭಾರತದ ಸಾಹಿತ್ಯ ಮತ್ತು ತತ್ತ್ವಜ್ಞಾನವನ್ನು ಸಹಾನುಭೂತಿಯ ಒಳನೋಟದಿಂದ ಇಲ್ಲವೇ ಸಮಗ್ರ ದೃಷ್ಟಿಯಿಂದ ಅಧ್ಯಯನ ಮಾಡಿರುವ ಇಂಗ್ಲೆಂಡಿನ ವಿದ್ವಾಂಸರ ಸಂಖ್ಯೆ ತೀರಾ ಕಡಿಮೆ. ರಾಷ್ಟ್ರೀಯತೆಯ ಹೆಸರಿನ ಸ್ವಾರ್ಥದ ಜತೆಗೆ ಅತಿರೇಕವೆನಿಸುವಂಥ ಹೆಮ್ಮೆ ಬೆಳೆದಾಗ ಮತ್ತು ಅಸಹಜ ಸಂಬಂಧಗಳಿದ್ದಾಗ ಇಂಥ ಅನಾರೋಗ್ಯಕರ ಧೋರಣೆಯ ವಿನಾ ಬೇರೇನೂ ಹುಲುಸಾಗಿ ಬೆಳೆಯುವುದಿಲ್ಲ. ಆದರೆ ಪುಣ್ಯಕ್ಕೆ ಅಮೆರಿಕದಲ್ಲಿ ಇನ್ನೂ ಈಗಾಗಿಲ್ಲ. ಇದರಿಂದಾಗಿಯೇ ಅಮೆರಿಕವು ಜಪಾನ್‌ಗೆ ಪಶ್ಚಿಮದ ನಾಗರಿಕತೆಯನ್ನು ಕಲಿಸಿಕೊಡುವುದು ಸಾಧ್ಯವಾಯಿತು. ಚೀನಾ ಕೂಡ ಈ ವಿಷಯದಲ್ಲಿ ನಿಮ್ಮತ್ತ - ಅಂದರೆ ಅಮೆರಿಕದತ್ತ- ವಿಶ್ವಾಸದಿಂದ ನೋಡುತ್ತಿದೆ. ಈ ದೃಷ್ಟಿಯಿಂದ ನೋಡುತ್ತಾ ಹೋದರೆ, ಅಮೆರಿಕ ಮತ್ತು ಭಾರತದ ನಡುವೆ ಸಮಾನಾಂತರವಾದ ಒಂದು ಅಂಶವಿದೆ. ಅದು ಬೇರೇನೂ ಅಲ್ಲ- ಅನೇಕ ಜನಾಂಗಗಳನ್ನು ಪರಸ್ಪರ ಒಂದೇ ದೇಹದ ಅಂಗಾಂಗಗಳಂತೆ ಬೆಸೆದಿರುವುದು. ಆದರೆ ಕೇವಲ ರಾಜಕೀಯಾತ್ಮಕವೂ ವಾಣಿಜ್ಯಾತ್ಮಕವೂ ಆದ ಏಕತೆಯ ನೆಲೆಗಳನ್ನು ಅರಸುತ್ತಿರುವ ದೇಶಗಳಿಗೆ ಇದು ಅಪಥ್ಯವಾಗಿದೆ. ಇಂಥ

ದೇಶಗಳ ಒಲವು ಏನೇ ಇರಲಿ, ಚಿಂತನಶೀಲರೂ ನೈತಿಕ ಬಲವುಳ್ಳವರೂ ಆಧ್ಯಾತ್ಮಿಕ ಏಕತೆಯನ್ನು ಆವಿಷ್ಕರಿಸಿ, ಅದನ್ನು ಸಾಕಾರಗೊಳಿಸುತ್ತಾರೆ.

★

ಭಾರತಕ್ಕೆ ಯಾವತ್ತೂ ರಾಷ್ಟ್ರೀಯವಾದದ ನಿಜವಾದ ಪ್ರಜ್ಞೆ ಇರಲೇ ಇಲ್ಲ. ಈಗ ವಿದ್ಯಾವಂತ ಭಾರತೀಯರು ಇತಿಹಾಸದಿಂದ ಕೆಲವು ಪಾಠಗಳನ್ನು ಕಲಿಯುತ್ತಿದ್ದಾರೆ. ಈ ಪಾಠಗಳೆಲ್ಲವೂ ನಮ್ಮ ಪೂರ್ವಜರ ಪಾಠಗಳಿಗಿಂತ ಭಿನ್ನ. ಜಪಾನ್‌ನ ದುರಂತ ನೋಡಿ, ಆ ದೇಶವು ತಾನು ಸಂಪೂರ್ಣವಾಗಿ ಪಾಶ್ಚಾತ್ಯೀಕರಣಗೊಂಡು ಪ್ರಬಲವಾಗಿ ಬೆಳೆದಿದ್ದೇನೆ ಅಂದುಕೊಂಡಿದೆ. ಆದರೆ ವಾಸ್ತವದಲ್ಲಿ ಹಾಗೇನೂ ಆಗಿಲ್ಲ. ಏಕೆಂದರೆ, ತನ್ನ ಪರಂಪರೆಯನ್ನು ತೊರೆದುಬಿಟ್ಟ ಆ ದೇಶದ ಬಳಿ ಈಗಿರುವುದು ಪಶ್ಚಿಮದಿಂದ ಪಡೆದುಕೊಂಡ ಶಸ್ತ್ರಾಸ್ತ್ರಗಳು ಮಾತ್ರ. ಅಂದರೆ, ಆ ದೇಶವು ತನ್ನ ಅಂತಃಸತ್ವದ ಬಲದ ಮೇಲೆ ಬೆಳೆಯುವುದಿಲ್ಲ ಎಂದರ್ಥ.

ಯೂರೋಪಿಗೆ ಅದರದೇ ಆದ ಇತಿಹಾಸವಿದೆ. ಅದರ ಶಕ್ತಿ ಇರುವುದೂ ಇದರಲ್ಲೇ. ಆದರೆ, ನಾವು ಮಾತ್ರ -ಭಾರತೀಯರು- ಇನ್ನೊಬ್ಬರ ಇತಿಹಾಸವನ್ನು ಎರವಲು ಪಡೆಯುವುದಿಲ್ಲ ಎಂಬ ಶಪಥ ಮಾಡಬೇಕಾಗಿದೆ. ಹೀಗೇನಾದರೂ ಆಗದಿದ್ದರೆ ಅದು ಆತ್ಮಹತ್ಯೆ ಮಾಡಿಕೊಂಡಂತೆ. ನಮ್ಮ ಜೀವನದ ಜತೆ ಸಂಬಂಧವೇ ಇಲ್ಲದ ಸಂಗತಿಗಳನ್ನು ಎರವಲು ಪಡೆಯುತ್ತೇವೆಂದರೆ, ಅಲ್ಲಿಗೆ ನಮ್ಮ ಜೀವನ ಪರಿಸಮಾಪ್ತಿಯಾಯ್ತೆಂದೇ ಅರ್ಥ. ಹೀಗಾಗಿ ಪಾಶ್ಚಾತ್ಯ ನಾಗರಿಕತೆಯ ಜತೆ ಭಾರತವೇನಾದರೂ ಸ್ಪರ್ಧೆಗಿಳಿದರೆ ಅದರಿಂದ ಯಾವ ಲಾಭವೂ ಇಲ್ಲ. ನಾವು ನಮ್ಮ ಪರಂಪರೆ ಹಾಗೂ ನಮ್ಮದೆನ್ನುವ ಮತ್ತೆಲ್ಲವನ್ನೂ ಅಡವಿಟ್ಟು ರಾಜಕೀಯ ರಾಷ್ಟ್ರೀಯತೆಯನ್ನು ಗಳಿಸಿಕೊಳ್ಳಲು ಹೊರಡುವುದೆಂದರೆ, ಇಂಗ್ಲೆಂಡ್ ವಿರುದ್ಧ ಸೆಣಸುವ ತಾಕತ್ತು ಗಳಿಸಿಕೊಳ್ಳಲು ಹೊರಟು ಸ್ವಿಟ್ಜರ್ಲೆಂಡ್ ದೇಶವು ಆ ದೇಶ ಹೊಂದಿರುವಂಥದೇ ನೌಕಾಪಡೆಯನ್ನು ಕಟ್ಟಿದಷ್ಟೇ ಅಸಂಗತ ವಿದ್ಯಮಾನವಾಗಿ ಬಿಡುತ್ತದೆ. ಅಂದರೆ ಭಾರತ ಕೇವಲ ತತ್‌ಕ್ಷಣದ ಲಾಭಗಳಿಗೆ ಆಸೆಪಡಬಾರದು. ಬದಲಿಗೆ ಚಿರಸ್ಥಾಯಿಯಾಗಿ ಉಳಿಯುವಂಥ ಸಂಗತಿಗಳ ಕಡೆಗೆ ನಮ್ಮ ಮುನ್ನೋಟ ಇರಬೇಕು. ಪಾಶ್ಚಾತ್ಯ ಜಗತ್ತು ಭಾರತಕ್ಕೆ ಬಂದುದು ಅದೃಷ್ಟದ ಬಲದಿಂದ. ಇರಲಿ. ಈಗ ನಮ್ಮಲ್ಲೇ ಯಾರಾದರೂ ಒಬ್ಬರು ಪೌರ್ವಾತ್ಯ ಜಗತ್ತನ್ನು ಪಾಶ್ಚಾತ್ಯ ಪ್ರಪಂಚಕ್ಕೆ ತಿಳಿಸಬೇಕಾಗಿದೆ. ಇಷ್ಟೇ ಅಲ್ಲ, ನಾಗರಿಕತೆಯ ನಿರ್ಮಾಣದಲ್ಲಿ ಪೌರ್ವಾತ್ಯ ಜಗತ್ತಿನ ಮೌಲಿಕ ಕಾಣಿಕೆಯೂ ಇದೆ ಎಂಬುದನ್ನು ನಾವು ಅವರಿಗೆ- ಪಾಶ್ಚಾತ್ಯರಿಗೆ- ಮನದಟ್ಟು ಮಾಡಿಕೊಡಬೇಕಾಗಿದೆ. ಇದರ ಜತೆಗೆ, ಭಾರತವು ಪಾಶ್ಚಾತ್ಯ ಜಗತ್ತಿನ ಎದುರು ನಿಂತು ಭಿಕ್ಷೆಯನ್ನೇನೂ ಎತ್ತುತ್ತಿಲ್ಲ ಎನ್ನುವುದು ತಿಳಿದಿರಲಿ.

ರಾಷ್ಟ್ರೀಯವಾದ (ನ್ಯಾಷನಲಿಸಂ) ಎನ್ನುವುದೇ ಒಂದು ವಿಪತ್ತು. ಭಾರತ ನೂರಾರು ವರ್ಷಗಳಿಂದ ಎದುರಿಸುತ್ತಿರುವ ಸಮಸ್ಯೆಗಳ ಆಳದಲ್ಲೆಲ್ಲ ಇರುವುದು ಇದೇ ವಿಪತ್ಕಾರಕ ಸಂಗತಿ. ಇದು ಸಾಲದೆಂಬಂತೆ, ರಾಜಕೀಯಾತ್ಮಕ ನಡವಳಿಕೆಯನ್ನೇ ಪ್ರಧಾನವಾಗಿ ಹೊಂದಿರುವ ದೇಶವು(ಬ್ರಿಟನ್) ನಮ್ಮನ್ನು ದೀರ್ಘಕಾಲದಿಂದ ಆಳುತ್ತಿದೆ. ಇದೇನೇ ಇರಲಿ, ಭಾರತದಲ್ಲಿ ಬಗೆಬಗೆಯ ಆದರ್ಶಗಳನ್ನು ಹೊಂದಿರುವ ನಾನಾ ಬಗೆಯ ಜನರಿದ್ದಾರೆ. ಇಲ್ಲಿ ಕೆಲವರು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ. ಉಳಿದವರು, ಇಂಥ ಸ್ವಾತಂತ್ರ್ಯ ಗಳಿಸಿಕೊಳ್ಳಲು ಇನ್ನೂ ಸರಿಯಾದ ಸಮಯ

ಬಂದಿಲ್ಲ ಎನ್ನುತ್ತಿದ್ದಾರೆ. ಹೀಗಿದ್ದೂ ಇಂಗ್ಲಿಷ್ ಕಾಲೋನಿಗಳಲ್ಲಿರುವ ಜನರಿಗಿರುವ ಹಕ್ಕುಗಳೆಲ್ಲವೂ ಭಾರತೀಯರಿಗೂ ಇರಬೇಕು ಎನ್ನುವುದು ಇವರ ವಾದವಾಗಿದ್ದು ಸಾಧ್ಯವಾದಷ್ಟೂ ಮಟ್ಟಿಗೆ ಸ್ವಾಯತ್ತತೆ ಗಳಿಸಿಕೊಳ್ಳುವ ಆಸೆ ಇಟ್ಟುಕೊಂಡಿದ್ದಾರೆ.

ಭಾರತದಲ್ಲಿ ರಾಜಕೀಯ ಹೋರಾಟ ಶುರುವಾದಾಗ ಭಿನ್ನಾಭಿಪ್ರಾಯಗಳೇನೂ ಇರಲಿಲ್ಲ. ಆದರೆ ಈಗ ಭಿನ್ನಾಭಿಪ್ರಾಯ ಇದೆ. ಆಗ ಇದ್ದುದು ಒಂದೇ ಪಕ್ಷ. ಅದೇ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್. ಆದರೆ, ಈ ಕಾಂಗ್ರೆಸ್ ಮುಂದೆ ನಿಜವಾದ ಗುರಿಗಳೇ ಇರಲಿಲ್ಲ. ಜತೆಗೆ ಅರ್ಥಪೂರ್ಣವಾದ, ರಚನಾತ್ಮಕವಾದ ಯಾವ ಆದರ್ಶವೂ ಈ ಪಕ್ಷಕ್ಕಿರಲಿಲ್ಲ. ಹೀಗಾಗಿ ಕಾಂಗ್ರೆಸ್ ಬಗ್ಗೆ ನನಗೆ ಹೇಳಿಕೊಳ್ಳುವಂಥ ಯಾವ ಉತ್ಸಾಹವೂ ಇರಲಿಲ್ಲ. ಕಾಂಗ್ರೆಸ್‌ನ ಈ ದೌರ್ಬಲ್ಯ ಜನರಿಗೂ ಗೊತ್ತಾಯಿತು. ಹೀಗಾಗಿ ಅದು ೧೯೦೭ರಲ್ಲಿ ಸೂರತ್‌ನಲ್ಲಿ ನಡೆದ ಅಧಿವೇಶನದಲ್ಲಿ ಎರಡು ಹೋಳಾಯಿತು. ಆಗ ಮುಂಚೂಣಿಗೆ ಬಂದಿದ್ದು ತೀವ್ರಗಾಮಿಗಳು. ನಮ್ಮ ಹಕ್ಕುಗಳಿಗಾಗಿ ಬ್ರಿಟಿಷರ ಬಳಿ ದೀನವಾಗಿ ಬೇಡಿಕೊಳ್ಳುವ ತಂತ್ರವನ್ನು ತೀವ್ರಗಾಮಿಗಳು ಸಾರಾಸಗಟಾಗಿ ತಳ್ಳಿಹಾಕಿದರು. ಆದರೆ, ಭಾರತದ ಸಮಸ್ಯೆಗೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿರುವ ಹಲವು ಅಂಶಗಳೂ ಕಾರಣ ಎನ್ನುವುದನ್ನೇ ಇವರು ಒಪ್ಪಿಕೊಳ್ಳಲಿಲ್ಲ.

ಭಾರತವು ಅತ್ಯಂತ ಬೃಹತ್ತಾದ ರಾಷ್ಟ್ರ. ಹಾಗೆಯೇ ಇಲ್ಲಿರುವ ಬುಡಕಟ್ಟುಗಳೂ ಅಪಾರ. ನಿಜ ಹೇಳಬೇಕೆಂದರೆ, ಭಾರತವೆಂದರೆ ಒಂದು ಭೌಗೋಳಿಕ ಚೌಕಟ್ಟಿನಲ್ಲಿರುವ ನೂರಾರು ರಾಷ್ಟ್ರಗಳ ಸಮೂಹ. ಭಾರತದ ಜನ ಸಮುದಾಯಗಳು ಸಹಜವಾಗಿಯೇ ವೈವಿಧ್ಯಮಯ. ಆದರೆ, ಅದೇನೋ ಅಕಸ್ಮಾತ್ತಾಗಿ ಏಕತೆಯ ಎಳೆ ಹೊಂದಿವೆ. ಅಂದಮಾತ್ರಕ್ಕೆ ಈ ವೈವಿಧ್ಯ ಭಾರತದ ಸ್ವಯಂಸೃಷ್ಟಿಯಲ್ಲ. ಇದು ಅದರ ಇತಿಹಾಸದ ಆರಂಭದಿಂದಲೂ ಇದೆ. ಆದರೆ ಆಸ್ಟ್ರೇಲಿಯಾ ಮತ್ತು ಅಮೆರಿಕದಲ್ಲಿ ಏನಾಯ್ತು ಎಂದರೆ, ಯೂರೋಪಿಯನ್ನರು ಅಲ್ಲಿಯ ಮೂಲನಿವಾಸಿಗಳನ್ನೆಲ್ಲ ಸಾಮೂಹಿಕವಾಗಿ ಕೊಲೆಗೈದು, ಅವರನ್ನೆಲ್ಲ ಒಕ್ಕಲೆಬ್ಬಿಸಿ ತಾವು ತಳ ಊರಿದರು. ಭಾರತದಲ್ಲಿ ಮಾತ್ರ ಹೀಗಾಗಿಲ್ಲ. ಮೊದಲಿನಿಂದಲೂ ನಾವು ನಮ್ಮ ದೇಶದಲ್ಲಿ ನಾನಾ ಜಾತಿ-ಜನಾಂಗಗಳನ್ನೆಲ್ಲ ಸಹಿಷ್ಣುತೆಯಿಂದ ನೋಡಿಕೊಂಡು ಬಂದಿದ್ದೇವೆ.

★

ಈ ಸಹಿಷ್ಣುತೆಯ ಫಲವೆಂದರೆ, ನಮ್ಮ ಜಾತಿ ಪದ್ಧತಿ. ಜಾತಿ-ಜಾತಿಗಳನ್ನು ಪರಸ್ಪರ ಸಾಮಾಜಿಕ ಸೌಹಾರ್ದದಿಂದ ಇಟ್ಟುಕೊಂಡು ಬರಲು ಭಾರತ ಬಗೆಬಗೆಯ ಪ್ರಯೋಗಗಳನ್ನು ಮಾಡಿಕೊಂಡೇ ಬರುತ್ತಿದೆ. ಆದರೆ, ಭಾರತವು ಜಾತಿ-ಜಾತಿಗಳ ನಡುವಿನ ವ್ಯತ್ಯಾಸಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಿರುತ್ತವೆ ಎನ್ನುವುದನ್ನು ತಿಳಿದುಕೊಳ್ಳಲು ವಿಫಲವಾಯಿತು. ಹೀಗಾಗಿಯೇ ಅದು ಜಾತಿಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಿತಾದರೂ, ಜೀವನದ ನಿಯಮವಾದ ಚಲನಶೀಲತೆಯನ್ನೇ ಅದು ಮನ್ನಿಸಲಿಲ್ಲ. ಇದು ಸಾಮಾಜಿಕ ಸ್ಥಗಿತತೆಗೆ ಕಾರಣವಾಯಿತು. ಈ ಜಾತಿ ಪದ್ಧತಿಯಿಂದಾಗಿ ವ್ಯಾಪಾರ-ವಾಣಿಜ್ಯದಲ್ಲೂ ಹೀಗೆಯೇ ಆಯಿತು. ಅಂದರೆ, ಇಲ್ಲಿ ಒಂದೊಂದು ವೃತ್ತಿಯನ್ನೂ ಒಂದೊಂದು ಜಾತಿಗೆ ಮೀಸಲಿಡಲಾಯಿತು. ಇದರ ಫಲವಾಗಿ ಕಾಲಕ್ರಮೇಣ ಕಲಾತ್ಮಕತೆಯು ಯಃಕಶ್ಚಿತ್ ಕಸುಬಿನ ಮಟ್ಟಕ್ಕೂ, ಪ್ರತಿಭೆಯು ಕೌಶಲ್ಯದ ಮಟ್ಟಕ್ಕೂ ಕುಸಿಯಿತು.

ಇದೇನೇ ಇರಲಿ, ಭಾರತವು ತನ್ನ ಸಂಕೀರ್ಣ ಜಾತಿ ಪದ್ಧತಿಯ ನಡುವೆಯೂ, ತನ್ನ ಜನಾಂಗೀಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸಿದೆ ಎಂಬುದನ್ನು ಅರಿತುಕೊಳ್ಳಲು

ಪಾಶ್ಚಾತ್ಯರಿಗೆ ಸಾಧ್ಯವಾಗಿಲ್ಲ. ಭಾರತವು ಪ್ರತಿಯೊಂದು ಜಾತಿಗೂ ಅದರ ಎಲ್ಲೆಕಟ್ಟಿನೊಳಗೆ ಅಪಾರ ಸ್ವಾತಂತ್ರ್ಯವನ್ನು ಕೊಟ್ಟಿದ್ದು ಎಲ್ಲೂ ಜಾತೀಯ ಸಂಘರ್ಷ ಸ್ಫೋಟಿಸದಂತೆ ನೋಡಿಕೊಂಡಿದೆ. ಇದು ಅಸಾಧಾರಣ ಸಂಗತಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಪಾಶ್ಚಾತ್ಯ ಜಗತ್ತು ಜಗತ್ತಿನ ಅನೇಕ ಕಡೆ ನಿರ್ಮಿಸಿರುವ ತನ್ನ ವಸಾಹತುಗಳಲ್ಲಿ ಇಂಥ ನಡವಳಿಕೆಯನ್ನೇನೂ ಪ್ರದರ್ಶಿಸುತ್ತಿಲ್ಲ. ನೀವು -ಪಾಶ್ಚಾತ್ಯರು- ಇಂಥ ಸಂದರ್ಭಗಳಲ್ಲೆಲ್ಲ ಏನು ಮಾಡುತ್ತೀರಿ ಎಂದರೆ, ನಿಮ್ಮ ವಸಾಹತುಗಳ ಒಳಕ್ಕೆ ಬರಲು ಮುಂದಾದವರಿಗೆ ತೀರಾ ಅಪ್ರಯೋಜಕವಾದ ಕೆಲಸಗಳನ್ನು ತೆಪ್ಪಗೆ ಮಾಡುವಂತೆ ಷರತ್ತು ಹೇರುತ್ತೀರಿ. ಇಲ್ಲವೇ, ಹೀಗೆ ನಿಮ್ಮತ್ತ ಬರುವವರ ಪಾಲಿಗೆ ಬಾಗಿಲು ಮುಚ್ಚಿ, ಅವರಲ್ಲಿ ಗುಲಾಮಗಿರಿಯನ್ನು ಒಪ್ಪಿಕೊಳ್ಳುವಂಥ ದೈನೇಸಿ ಪರಿಸ್ಥಿತಿ ಸೃಷ್ಟಿಸುತ್ತೀರಿ. ಇದೇ ಜನಾಂಗೀಯ ಸಂಘರ್ಷಕ್ಕೆ ನೀವು ಕಂಡುಕೊಂಡಿರುವ ಪರಿಹಾರ! ಆದರೆ ಇಂಥ ಪ್ರವೃತ್ತಿ ಉನ್ನತ ನಾಗರಿಕತೆಯ ಫಲವಲ್ಲ, ಇದು ನಿಮ್ಮಲ್ಲಿ ಮಡುಗಟ್ಟಿರುವ ದುರಾಸೆ ಮತ್ತು ದ್ವೇಷದ ಫಲ ಎನ್ನುವುದನ್ನು ನೀವು ಒಪ್ಪಿಕೊಳ್ಳಬೇಕು. ಈ ಆಕ್ಷೇಪಣೆಗೆ ನೀವು ಬೇಕಾದರೆ, 'ಇದೆಲ್ಲವೂ ಮನುಷ್ಯ ಸ್ವಭಾವ....' ಎಂದು ಉತ್ತರಿಸುತ್ತೀರಿ. ಆದರೆ, ಇದು ಕುರುಡುತನದಲ್ಲಿ ದೇವರಿಗೇ ಮಾಡುವ ಅಪಮಾನ. ನಮ್ಮ ಸ್ವಹಿತಾಸಕ್ತಿಯನ್ನು ಮುಂದಿಟ್ಟುಕೊಂಡು ಇತರರನ್ನು ಕೀಳಾಗಿ ನೋಡುವುದಿದೆಯಲ್ಲ, ಅದು ಮನುಷ್ಯತ್ವವನ್ನೇ ಕೀಳಾಗಿ ಕಂಡಂತೆ ಎನ್ನುವುದನ್ನು ನೀವು ತಿಳಿದುಕೊಳ್ಳಬೇಕು.

ಭಾರತದ ಹೆಚ್ಚುಗಾರಿಕೆ ಎಂದರೆ, ಇಲ್ಲಿ ಉತ್ಪಾದನಾ ವ್ಯವಸ್ಥೆಯನ್ನೆಲ್ಲ ಸಾಮಾಜಿಕ ಹೊಂದಾಣಿಕೆಯ ತತ್ವದಡಿ ತರಲಾಗಿದೆ. ಸಹಕಾರವೇ ಇದರ ಆಧಾರ. ಆದರೆ ನಿಮ್ಮಲ್ಲಿ -ಅಂದರೆ ಪಶ್ಚಿಮದಲ್ಲಿ- ಹೀಗಿಲ್ಲ. ಇನ್ನೊಬ್ಬನ ಜತೆ ಜಿದ್ದಿಗೆ ಬಿದ್ದು ಸ್ಪರ್ಧಿಸಬೇಕೆಂಬ ಕೆಟ್ಟ ಹಟವೇ ಇಲ್ಲಿನ ಜೀವಾಳವಾಗಿದ್ದು, ವೈಯಕ್ತಿಕ ಸಂಪಾದನೆಯೇ ಇಲ್ಲಿನ ಗುರಿ. ಆದರೆ, ಆಳವಾದ ಯಾವ ಮೌಲ್ಯವೂ ಇಲ್ಲದ ಈ ತತ್ವ ಏನನ್ನೂ ಶಾಶ್ವತವಾಗಿ ಹಿಡಿದಿಟ್ಟುಕೊಳ್ಳಲಾರದು. ಭಾರತದಲ್ಲಿ ನಮ್ಮ ಲೌಕಿಕ ಆಸೆಗಳ ಮೇಲೂ ಅಷ್ಟೆ, ಒಂದು ಮಿತಿ ಇದೆ. ಆ ಮಿತಿಯನ್ನು ನಾವು ದಾಟುತ್ತಿದ್ದೇವೆಂದರೆ, ನಮ್ಮ ಆರೋಗ್ಯದ ಮಿತಿಯನ್ನೇ ಉಲ್ಲಂಘಿಸುತ್ತಿದ್ದೇವೆ ಎಂದರ್ಥ. ಆದರೆ ಪಾಶ್ಚಾತ್ಯ ಜಗತ್ತಿನಲ್ಲಿ ಹೀಗಾಗಿಲ್ಲ. ಇಲ್ಲಿ ಜನರೆಲ್ಲ ದುಡ್ಡಿನ ಹಿಂದೆ ಬಿದ್ದಿದ್ದು, ಒಂದೇ ಸಮನೆ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಈ ಭರದಲ್ಲಿ ಪಾಶ್ಚಾತ್ಯ ಜಗತ್ತು ಆದರ್ಶಗಳನ್ನೇ ಮರೆತಿದೆ ಎಂದು ನಿಮಗೆ ಅನಿಸುವುದಿಲ್ಲವೇನು? ನಾಗರಿಕತೆಯೊಂದು ಹೀಗೆ ಲೌಕಿಕತೆಯ ಹಿಂದೆ ಬಿದ್ದು ತನ್ನ ನೈತಿಕ ಆರೋಗ್ಯವನ್ನೇ ಮರೆಯಬಹುದೇನು? ಆದರೆ ಸಾಮಾಜಿಕ ಆದರ್ಶಗಳಿದ್ದರೆ ಮನುಷ್ಯ ತನ್ನ ಆಸೆಗಳಿಗೆ ಸಹಜವಾಗಿಯೇ ಕಡಿವಾಣ ಹಾಕಿಕೊಳ್ಳುತ್ತಾನೆ. ಇಷ್ಟೇ ಅಲ್ಲ, ಅನಿವಾರ್ಯವಾದರೆ ಆಸೆಗಳನ್ನು ಕಷ್ಟಪಟ್ಟು ದಮನ ಮಾಡಬೇಕಾಗುತ್ತದೆ. ಬರೀ ಆರ್ಥಿಕ ಅಂಶಗಳೇ ನಿರ್ಣಾಯಕವಾಗಿರುವ ನಾಗರಿಕತೆಯಲ್ಲಿ ಏನಾಗುತ್ತದೆ ಎಂದರೆ, ಸದಾ ಬೇಡಿಕೆ-ಪೂರೈಕೆಗಳ ಸುತ್ತವೇ ಎಲ್ಲಾ ಲೆಕ್ಕಾಚಾರವೂ ನಡೆಯುತ್ತಿರುತ್ತದೆ. ಪಾಶ್ಚಾತ್ಯ ಜಗತ್ತಿನಲ್ಲಿ ಈಗ ಆಗುತ್ತಿರುವುದು ಇದೇ!

ನಾವು ತಿನ್ನುವ ಆಹಾರದಿಂದ ನಮ್ಮ ದೇಹಕ್ಕೆ ಪೋಷಣೆ ಸಿಗುತ್ತದೆ. ಆದರೆ ಪೈಸ್ ಈ ಕೆಲಸವನ್ನು ಮಾಡುವುದಿಲ್ಲ. ಅದೇನಿದ್ದರೂ ಮತ್ತೇರಿಸುತ್ತದೆ ಅಷ್ಟೆ. ನಮ್ಮ ಸಾಮಾಜಿಕ ಮೌಲ್ಯಗಳು ನಾವು ತಿನ್ನುವ ಒಳ್ಳೆಯ ಆಹಾರದಂತೆ. ಮನುಷ್ಯ ಜಗತ್ತು ಬೆಳೆದು ಬಂದಿರುವುದೇ ಇಂಥ ಮೌಲ್ಯಗಳಿಂದ. ಆದರೆ ನಾವು ಯಾವಾಗ ಈ ಮೌಲ್ಯಗಳಿಂದ ವಿಮುಖವಾಗಿ ಅಧಿಕಾರದ ಹಿಂದೆ ಓಡಲು ಶುರು ಮಾಡುತ್ತೇವೋ ಅವಾಗ

ಅಸಹಜತೆ ಶುರುವಾಗುತ್ತದೆ. ಅಂಥ ಅಸಹಜ ಜಗತ್ತಿನಲ್ಲಿ ನಳನಳಿಸುವ ಆರೋಗ್ಯ ನಮ್ಮ ಶಕ್ತಿಯಾಗಿರುವುದಿಲ್ಲ. ಹಾಗೆಯೇ ಅಲ್ಲಿರುವ ಸ್ವಾತಂತ್ರ್ಯ ನಿಜವಾದ ಸ್ವಾತಂತ್ರ್ಯವೂ ಆಗಿರುವುದಿಲ್ಲ. ಈ ಮಾತಿನ ತಾತ್ಪರ್ಯ ಇಷ್ಟೆ- ನಿಮ್ಮ ಮನಸ್ಸು ಸ್ವತಂತ್ರವಾಗಿದ್ದರೆ ಮಾತ್ರ ರಾಜಕೀಯ ಸ್ವಾತಂತ್ರ್ಯಕ್ಕೆ ಬೆಲೆ ಅಷ್ಟೆ!

★

ಭಾರತದಲ್ಲಿ ಈಗ ಅನೇಕ ರಾಷ್ಟ್ರೀಯವಾದಿಗಳ ಪ್ರಕಾರ, ನಾವೆಲ್ಲರೂ ನಮ್ಮ ಶಕ್ತಿಯನ್ನು ರಾಜಕೀಯ ಸ್ವಾತಂತ್ರ್ಯ ಗಳಿಸಿಕೊಳ್ಳಲು ವಿನಿಯೋಗಿಸಬೇಕಾಗಿದೆ. ಅವರ ಪ್ರಕಾರ, ನಾವು ಸಾಮಾಜಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ವಿಚಾರದಲ್ಲಿ ಪರಿಪೂರ್ಣತೆಯ ಹಂತಕ್ಕೆ ಬಂದುಬಿಟ್ಟಿದ್ದೇವೆ. ರಾಜಕೀಯ ಸ್ವಾತಂತ್ರ್ಯ ಸಿಕ್ಕಿದರೆ ನಾವು ಸರ್ವತಂತ್ರ ಸ್ವತಂತ್ರರಾಗಿ ಬಿಡುತ್ತೇವೆ ಎನ್ನುತ್ತಿರುವ ಇವರೆಲ್ಲ ಪಶ್ಚಿಮದಿಂದ ಪ್ರಭಾವಿತರಾಗಿರುವವರು; ಅಲ್ಲಿಂದಲೇ ಪಾಠಗಳನ್ನು ಕಲಿತಿರುವವರು. ಹೀಗಾಗಿಯೇ ಇವರು ರಾಜಕೀಯ ಸ್ವಾತಂತ್ರ್ಯವೇ ಅಂತಿಮ ಸತ್ಯ ಎಂದುಕೊಂಡಿದ್ದಾರೆ. ಆದರೆ, ಸಾಮಾಜಿಕವಾದ ದೌರ್ಬಲ್ಯಗಳೇ ರಾಜಕೀಯ ಆವಾಸದಲ್ಲಿ ನಿಜವಾದ ಅಪಾಯಗಳಾಗಿ ಪರಿಣಮಿಸುತ್ತವೆ ಎನ್ನುವುದನ್ನು ನಾವು ಮರೆಯಬಾರದು. ರಾಷ್ಟ್ರೀಯವಾದಿಗಳೆಲ್ಲರೂ ರಾಷ್ಟ್ರೀಯವಾದದ ಬಗ್ಗೆ ಜೋರಾಗಿ ಮಾತನಾಡುತ್ತಾರೆ. ಆದರೆ ಇಂಥ ರಾಷ್ಟ್ರೀಯವಾದದ ನಿಜವಾದ ಆಧಾರ ಬಯಕೆ/ಆಸೆ ಎನ್ನುವುದನ್ನು ಇವರು ಮರೆತಿದ್ದಾರೆ. ರಾಷ್ಟ್ರೀಯವಾದದ ಮೌಲ್ಯವನ್ನು ಬಹಳ ಜೋರಾಗಿ ಎತ್ತಿಹಿಡಿಯುತ್ತಿರುವ ಈ ಜನಗಳೇ ಸ್ವತಃ ತಮ್ಮ ಬದುಕಿನ ಸಾಮಾಜಿಕ ರೀತಿರಿವಾಜುಗಳಲ್ಲಿ ತೀರಾ ಸಂಪ್ರದಾಯಸ್ಥರಾಗಿದ್ದಾರೆ. ಇದನ್ನು ನೆನಪಿಸಿದಾಗಲೆಲ್ಲ ರಾಷ್ಟ್ರೀಯವಾದಿಗಳು, 'ಸ್ವಿಟ್ಜರ್ಲೆಂಡನ್ನು ನೋಡಿ, ಅಲ್ಲಿ ಬಗೆಬಗೆಯ ಜನಾಂಗಗಳಿದ್ದರೂ ಅದು ಒಂದು ರಾಷ್ಟ್ರವಾಗಿಲ್ಲವೇ?' ಎನ್ನುತ್ತಾರೆ. ಆದರೆ ಆ ದೇಶದಲ್ಲಿ ನಾನಾ ಜನಾಂಗಗಳು ಪರಸ್ಪರ ಬೆರೆಯಬಹುದು, ಮದುವೆಯಾಗಬಹುದು ಮತ್ತು ಅವರದೆಲ್ಲ ಒಂದೇ ರಕ್ತ. ಆದರೆ ಭಾರತದಲ್ಲಿ ಹೀಗಿಲ್ಲ. ಇಲ್ಲಿ ಜಾತಿ-ಜಾತಿಗಳ ನಡುವೆ ತೀರಾ ಬಿಗಿಯಾದ ನಿರ್ಬಂಧಗಳಿವೆ. ನಮ್ಮಲ್ಲಿರುವ ಈ ನಿರ್ಬಂಧಗಳು ಎಷ್ಟೊಂದು ಕ್ರೂರವಾಗಿವೆಯೆಂದರೆ, ಇವು ಎಂಥ ಧೀರನನ್ನು ಬೇಕಾದರೂ ಹೇಡಿಯನ್ನಾಗಿ ಮಾಡಿಬಿಡುತ್ತವೆ. ಇಂಥ ಕ್ರೌರ್ಯವು ಅಂತಿಮವಾಗಿ ನಮ್ಮ ರಾಜಕೀಯ ಜೀವನದಲ್ಲಿ ಸುಳ್ಳು ಹೇಳುವುದನ್ನೂ ಡಾಂಭಿಕತೆಯನ್ನೂ ಸೇರಿಸುತ್ತದೆ. ಹೀಗಾಗಿ ಯಃಕಶ್ಚಿತ್ ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಾವು ನಮ್ಮ ನೈತಿಕ ಸ್ವಾತಂತ್ರ್ಯವನ್ನೇಕೆ ತೊರೆಯಬೇಕು?

ಪಾಶ್ಚಾತ್ಯ ಜಗತ್ತಿನಲ್ಲಿ ಕೂಡ ಸಂಘಟಿತ ಅಧಿಕಾರಕ್ಕಾಗಿ ಇರುವ ದುರಾಸೆಯಿಂದಾಗಿ ಮನುಷ್ಯತ್ವಕ್ಕೆ ಪ್ರತಿ ಘಳಿಗೆಯೂ ಕಂಟಕ ಎದುರಾಗುತ್ತಿದೆ. ಆದರೂ ಇನ್ನೂ ಅಲ್ಲಿ ಮನುಷ್ಯನೊಬ್ಬ ಘನತೆಯಿಂದ ತಲೆ ಎತ್ತಿಕೊಂಡು ಓಡಾಡಬಹುದು. ಆದರೆ ಭಾರತದಲ್ಲಿ ಏನಾಗಿದೆ ಎಂದರೆ, ಸಾಮಾಜಿಕ ಸಂಸ್ಥೆಗಳ ಘೋರ ಕಟ್ಟುಕಟ್ಟಳೆಗಳಿಂದಾಗಿ ನಮ್ಮ ವಿದ್ಯಾವಂತರೆಲ್ಲ ಸಂವೇದನೆಯನ್ನೇ ಕಳೆದುಕೊಂಡಿದ್ದಾರೆ. ಹೀಗಾಗಿ ಭಾರತದ ಸಾಮಾಜಿಕ ಅಗತ್ಯಗಳೇನೆಂಬುದೇ ಇವರಿಗೆ ಗೊತ್ತಾಗುತ್ತಿಲ್ಲ. ಆದರೆ, ಇವರೆಲ್ಲ ರಾಜಕೀಯಕ್ಕೇ ಆದ್ಯತೆ ಕೊಡುತ್ತಿದ್ದು ಅಲ್ಲಿ ಮಾತ್ರ ತಮ್ಮ ಪ್ರತಿಭೆ-ಶಕ್ತಿಗಳೆಲ್ಲ ಪ್ರಯೋಜನಕ್ಕೆ ಬರಬಹುದು ಎಂದುಕೊಂಡಿದ್ದಾರೆ. ಇದು ನಿಜಕ್ಕೂ ಅಪ್ರಯೋಜಕ. ಭಾರತದ ಸಾಮಾಜಿಕ ಮತ್ತು ರಾಜಕೀಯ ಪುನರುತ್ಥಾನದ ವಿಷಯ ಇಷ್ಟು ಸಾಕು.

★

ಇನ್ನು ಮುಂದೆ ನಾವು ಭಾರತದ ಕೈಗಾರಿಕಾ ರಂಗದತ್ತ ನೋಡೋಣ. 'ಬ್ರಿಟಿಷ್ ಸರಕಾರ ಸ್ಥಾಪನೆಯಾದ ಮೇಲೆ ಭಾರತದಲ್ಲೇನಾದರೂ ಕೈಗಾರಿಕೆಗಳ ಪ್ರೋತ್ಸಾಹನ ಆಗಿದೆಯೇ?' ಎಂಬ ಪ್ರಶ್ನೆಯನ್ನು ನನಗೆ ಹಲವರು ಕೇಳಿದ್ದಾರೆ. ಬ್ರಿಟಿಷ್ ಸರಕಾರ ನಮ್ಮಲ್ಲಿ - ಅಂದರೆ ಭಾರತದಲ್ಲಿ- ಸ್ಥಾಪನೆಯಾದ ಕೂಡಲೇ ನಮ್ಮ ನೆಲದ ಮೂಲ ಉದ್ಯಮಗಳನ್ನೆಲ್ಲ ಹೊಸಕಿ ಹಾಕಲಾಯಿತು. ಇದನ್ನು ನಾವು ಮರೆಯಬಾರದು. ಅಲ್ಲಿಂದೀಚೆಗೆ ಈ ಪ್ರಪಂಚದ ರಾಕ್ಷಸ ಸದೃಶ ವಾಣಿಜ್ಯ ಸಂಸ್ಥೆಗಳ ಎದುರು ಭಾರತ ತಲೆ ಎತ್ತಿ ದೃಢವಾಗಿ ನಿಲ್ಲುವುದಕ್ಕೆ ಅಗತ್ಯವಾದ ನಿಜವಾದ ಸಹಾಯ ನಮಗೆ ಸಿಕ್ಕಿಯೇ ಇಲ್ಲ. ಪ್ರಪಂಚದ ಉಳಿದ ರಾಷ್ಟ್ರಗಳೆಲ್ಲ ಒಟ್ಟಾಗಿ, ಭಾರತದ ಜನರೆಲ್ಲ ಯಾವತ್ತಿಗೂ ಜಮೀನಿನಲ್ಲಿ ಗೆಯ್ಮೆ ಮಾಡುತ್ತ ಇರುವಂತೆಯೇ ನೋಡಿಕೊಳ್ಳಬೇಕು ಎಂದು ತೀರ್ಮಾನಿಸಿವೆ. ಇದರಿಂದಾಗಿ ಅತ್ಯಗತ್ಯ ಸಂದರ್ಭಗಳಲ್ಲಿ ಬೇಕಾದ ಶಸ್ತ್ರಾಸ್ತ್ರಗಳ ಬಳಕೆ ಕೂಡ ನಮಗೆ ಮರೆತು ಹೋಗುತ್ತಿದೆ. ಹೀಗಾಗಿ ಎಲ್ಲ ದೇಶಗಳ ಕಣ್ಣಲ್ಲೂ ಭಾರತವು ಆಪೋಶನಕ್ಕೆ ಲಾಯಕ್ಕಾಗಿರುವ ದೇಶವಾಗಿದೆ.

ಹೀಗಾಗಿ ಉದ್ಯಮ ರಂಗದಲ್ಲಿ ತನ್ನ ಸ್ವೋಪಜ್ಞತೆಯನ್ನು ತೋರಿಸಲು ಭಾರತಕ್ಕೆ ಅಕ್ಷರಶಃ ಅವಕಾಶವೇ ಇಲ್ಲ. ವೈಯಕ್ತಿಕವಾಗಿ ನಾನು ಇವತ್ತು ಎಲ್ಲೆಲ್ಲೂ ಕಂಡುಬರುತ್ತಿರುವ ಬೃಹತ್ ಸಂಸ್ಥೆಗಳನ್ನು ನಂಬುವವನಲ್ಲ. ಇಂಥ ದೈತ್ಯ ಸಂಸ್ಥೆಗಳು ಅಂತಿಮವಾಗಿ ಕ್ರೌರ್ಯದ ತಾಂಡವ ನೃತ್ಯ ನಡೆಸುತ್ತವೆ ಎನ್ನುವುದು ವಾಸ್ತವ. ಅಂದರೆ, ಸೃಷ್ಟಿಯ ತತ್ತ್ವಕ್ಕೂ ಈ ಸಂಸ್ಥೆಗಳ ಕೆಲಸಕ್ಕೂ ತಾಳ-ಮೇಳವೇ ಇಲ್ಲ. ನಾವು ಒಂದು ಸಲ ಪ್ರಕೃತಿಯ ಕಡೆ ನೋಡಬೇಕು. ಅಗಾಧ ಶಕ್ತಿ ಹೊಂದಿರುವ ಅದು ಯಾವತ್ತೂ ತನ್ನಲ್ಲಿರುವ ಸತ್ಯವನ್ನು ಕ್ರೌರ್ಯದ ಜತೆ ತಳುಕು ಹಾಕಿಕೊಂಡಿಲ್ಲ. ಪ್ರಕೃತಿಯಲ್ಲಿ ಸತ್ಯ ಅನಾವರಣಗೊಳ್ಳುವುದೇನಿದ್ದರೂ ಸೌಂದರ್ಯದ ಜತೆಯಲ್ಲೇ. ಆ ಸೃಷ್ಟಿಕರ್ತ ತನ್ನ ಕೆಲಸ ತನಗೆ ತೃಪ್ತಿ ಕೊಟ್ಟಾಗ ಅದರ ಮೇಲೆ ಒತ್ತುವ ಮುದ್ರೆಯೇ ಸೌಂದರ್ಯ. ಆದರೆ ನಾವು - ಅಂದರೆ ಮನುಷ್ಯರು- ಉತ್ಪಾದಿಸುವ ಉತ್ಪನ್ನಗಳೆಲ್ಲವೂ ಪ್ರಕೃತಿಯಲ್ಲಿರುವ ಈ ಪರಿಪೂರ್ಣತೆಯ ತತ್ತ್ವವನ್ನು ಮರೆತಿವೆ. ನಾವು ನಡೆಸುವ ವ್ಯಾಪಾರ-ವಹಿವಾಟುಗಳು ಸೃಷ್ಟಿಕರ್ತನ ದಯೆಯನ್ನು ಹೀಗೆ ಮರೆತಿರುವವರೆಗೂ ಆ ಉತ್ಪನ್ನಗಳೆಲ್ಲವೂ ಹುಸಿಯಾಗಿರುತ್ತವೆ. ಅಂದರೆ, ಈ ಉತ್ಪನ್ನಗಳಿಗೆಲ್ಲ ಅಸತ್ಯ ಮೆತ್ತಿಕೊಂಡಿರುತ್ತದೆ. ಆದರೆ ಸೌಂದರ್ಯ ಮತ್ತು ಅದರ ಅವಳಿ ಸಹೋದರನಂತಿರುವ ಸತ್ಯಗಳು ಆತುರದಲ್ಲಿ ಬೆಳೆಯುವುದಿಲ್ಲ. ಅವುಗಳ ಬೆಳವಣಿಗೆ ಏನಿದ್ದರೂ ಲೋಕಾಭಿರಾಮವಾದ ವಿರಾಮ ಮತ್ತು ಆತ್ಮನಿಯಂತ್ರಣದಲ್ಲಿ ಮಾತ್ರ. ಆದರೆ ದುಡ್ಡು ಮಾಡಬೇಕೆಂಬ ದೈತ್ಯ ಮೋಹಕ್ಕೆ ಇಂಥ ವಿರಾಮವಾಗಲಿ, ಮಿತಿಯಾಗಲಿ ಖಂಡಿತ ಗೊತ್ತಿಲ್ಲ. ಸದಾ ಏನನ್ನಾದರೂ ಉತ್ಪಾದಿಸುತ್ತಿರಬೇಕು ಮತ್ತು ಅದನ್ನು ಮುಕ್ಕುತ್ತಿರಬೇಕು ಎನ್ನುವುದೊಂದೇ ಇದರ ಗುರಿ. ಅದಕ್ಕೆ ಈ ಸುಂದರವಾದ ಬ್ರಹ್ಮಾಂಡದ ಬಗ್ಗೆಯಾಗಲಿ, ಮನುಷ್ಯರ ಬಗ್ಗೆಯಾಗಲಿ ಸಹಾನುಭೂತಿ ಕಿಂಚಿತ್ತೂ ಇಲ್ಲ. ಒಂದು ಗುಲಗಂಜಿಯಷ್ಟು ಹಿಂಜರಿಕೆಯೂ ಇಲ್ಲದೆ ಸೌಂದರ್ಯವನ್ನು ಹೊಸಕಿ ಹಾಕಿ, ಅದರಿಂದೇನಾದರೂ ದುಡ್ಡು ಸಿಗುತ್ತದಾ ಎಂದು ಯೋಚಿಸುವುದೇ ವ್ಯಾಪಾರಿ ಮೋಹದ ಲಕ್ಷಣ. ಹಿಂದಿನ ಕಾಲದಲ್ಲೆಲ್ಲ ಹೀಗಿರಲಿಲ್ಲ. ಕೇವಲ ದುಡ್ಡಿಗಾಗಿ ಹಾತೊರೆಯುವುದೆಂದರೆ ಹಿಂದೆಲ್ಲ ನಾಚಿಕೆಗೇಡಿನ ವಿಷಯವಾಗಿತ್ತು. ಆದರೆ ವೈಜ್ಞಾನಿಕ ಯುಗದ ಈ ದಿನಗಳಲ್ಲಿ ಹಣವು ತನ್ನ ಅಸಹಜ ಸಮೃದ್ಧಿಯಿಂದಲೇ ಸಿಂಹಾಸನವನ್ನೇರಿ ಕೂತು ಬಿಟ್ಟಿದೆ. ಇಷ್ಟೇ ಅಲ್ಲ, ಅದು ಮನುಷ್ಯನ ಉನ್ನತ ಗುಣಗಳನ್ನೂ ಸೌಂದರ್ಯ ಮತ್ತು ಉದಾತ್ತ ಭಾವನೆಗಳನ್ನೂ ಅವಮಾನಿಸುತ್ತಿದೆ. ನಾವೆಲ್ಲ ಹಣದ ದಾಸರಾಗಿದ್ದು, ನಮ್ಮ ಸೌಂದರ್ಯ ಪ್ರಜ್ಞೆಯೆಲ್ಲ ಧೂಳು ಕುಡಿಯುತ್ತಿದೆ.

ಆದರೆ ದೈತ್ಯ ಸಂಸ್ಥೆಗಳಿಗೆಲ್ಲ ಅವುಗಳ ವ್ಯಾಪಕತೆ ಮತ್ತು ಕೊನೆಯಿಲ್ಲದ ಸಂಕೀರ್ಣತೆಯೇ ತೊಡರುಗಾಲು. ನಿಜ ಹೇಳಬೇಕೆಂದರೆ, ಇವೆರಡೂ ಅವುಗಳ ಸೋಲಿನ ಸಂಕೇತ. ಈಜುವ ಕಲೆಯನ್ನು ಕರತಲಾಮಲಕ ಮಾಡಿಕೊಂಡಿರುವ ವ್ಯಕ್ತಿ ತನ್ನ ಆ ಪರಿಣತಿಯನ್ನು ಯಾವತ್ತೂ ಹಿಂಸಾತ್ಮಕವಾಗಿ ಪ್ರದರ್ಶಿಸುವುದಿಲ್ಲ. ಅವನ ಪರಿಣತಿ ಮೇಲ್ನೋಟಕ್ಕೆ ಅಗೋಚರವಾಗಿದ್ದು ಅವನ ನಿರಾಳ ಭಾವದಲ್ಲೇ ಅದು ಎದ್ದು ಕಾಣುತ್ತದೆ. ಮನುಷ್ಯನಿಗೂ ಪ್ರಾಣಿಗಳಿಗೂ ನಡುವೆ ವ್ಯತ್ಯಾಸ ಸೃಷ್ಟಿಸಿರುವ ಸಂಗತಿ ಎಂದರೆ ನೈತಿಕತೆ. ಹಾಗೆಯೆ ಮನುಷ್ಯನಲ್ಲಿ ಯೋಗ್ಯವಾದದ್ದೆಲ್ಲವೂ ಅಂತರಂಗದೊಳಗಿದ್ದು, ಅವ್ಯಾವುವೂ ಕಣ್ಣಿಗೆ ಕಾಣುವುದಿಲ್ಲ. ಆದರೆ ಇವತ್ತಿನ ನಾಗರಿಕತೆ ಹಿಂಸೆಯಿಂದ ಕೂಡಿದ್ದು, ವಿಪರೀತ ಗದ್ದಲವನ್ನು ಸೃಷ್ಟಿಸುತ್ತಿದೆ. ಅದು ತನ್ನ ಹಣಭಾರದೊಂದಿಗೆ ಮನುಷ್ಯತ್ವದ ಮೇಲೆಯೇ ಕಾಲೂರಿದ್ದು, ಸರ್ವನಾಶ ಮಾಡಲು ಹೊರಟಿರುವಂತಿದೆ. ಇಷ್ಟೇ ಅಲ್ಲ, ದುಡ್ಡಿನ ಹೆಸರಿನಲ್ಲಿ ಅದು ಸಂತೋಷವನ್ನೇ ಬಲಿ ಕೊಡುತ್ತಿದೆ. ಈ ದುಡ್ಡಿನ ಆಸೆಗಾಗಿ ಮನುಷ್ಯ ತನ್ನ ನೈಜ ಭಾವನೆಗಳನ್ನೇ ಕಳೆದುಕೊಂಡಿದ್ದಾನೆ. ಇಲ್ಲೇನಿದ್ದರೂ ಬರೀ ಯಂತ್ರಗಳದ್ದೇ ಆವುಟ.

★

ಭಾರತದಲ್ಲಿರುವ ಒಂದು ಪೌರಾಣಿಕ ಕತೆಯನ್ನು ನಾನು ನಿಮಗೆ ಹೇಳಬೇಕು. ನಮ್ಮಲ್ಲಿ ಅಮೃತತ್ವವನ್ನು ಗಳಿಸಿಕೊಳ್ಳಲು ಹಿಂದೆಲ್ಲಾ ಅನೇಕರು ತಪಸ್ಸಿಗೆ ಕೂರುತ್ತಿದ್ದರು. ಇವರೆಲ್ಲ ತಮ್ಮ ತಪಸ್ಸಿನಲ್ಲಿ ಗೆಲ್ಲಬೇಕೆಂದರೆ ದೇವತೆಗಳ ದೇವತೆಯಾದ ಇಂದ್ರನು ನಾನಾ ರೂಪದಲ್ಲಿ ಕಳಿಸುತ್ತಿದ್ದ ಆಸೆ-ಆಮಿಷಗಳನ್ನೆಲ್ಲ ಗೆಲ್ಲಬೇಕಾಗಿತ್ತು. ತಪಸ್ಸಿಗೆ ಕೂತವನೇನಾದರೂ ಆಸೆಗೆ ಮರುಳಾದನೆಂದರೆ ಅಲ್ಲಿಗೆ ಅವನ ತಪಸ್ಸಿನ ಕತೆ ಮುಗಿಯುತ್ತಿತ್ತು! ಈಗ ಆ ಇಂದ್ರ ಪಾಶ್ಚಾತ್ಯ ಜಗತ್ತಿನ ಮುಂದೆ ಕುರುಡು ಕಾಂಚಾಣದ ಪ್ರಚೋದನೆಯನ್ನು ಬಿಟ್ಟಿದ್ದಾನೆ. ಅವನು ಕಳಿಸಿರುವ ಈ ಪ್ರಚೋದನೆ ಥಳಥಳನೆ ಹೊಳೆಯುತ್ತಿದೆ. ಇದನ್ನು ಪಾಶ್ಚಾತ್ಯ ಜಗತ್ತು ತರತಮ ಪ್ರಜ್ಞೆ ಇಲ್ಲದೆ ಒಪ್ಪಿಕೊಂಡಿದೆ. ಇದರ ಪರಿಣಾಮವಾಗಿ ಹುಟ್ಟಿಕೊಂಡ ಯಂತ್ರಗಳ ಅಬ್ಬರದ ನಡುವೆ ಪಾಶ್ಚಾತ್ಯ ನಾಗರಿಕತೆ ಮತ್ತು ಮನುಷ್ಯತ್ವಗಳೆರಡೂ ಹಳಿ ತಪ್ಪಿ ಬಿಟ್ಟಿವೆ. ಕ್ರೌರ್ಯದ ಅನಾಗರಿಕತೆ ತುಂಬಿಕೊಂಡಿರುವ ಈ ದುಡ್ಡಿನ ಲೋಲುಪತೆಯು ಇಡೀ ಮನುಷ್ಯತ್ವಕ್ಕೇ ಒಂದು ದೊಡ್ಡ ತಲೆನೋವಾಗಿದೆ. ಏಕೆಂದರೆ, ಈ ನಾಗರಿಕತೆಯು ಮನುಷ್ಯನಲ್ಲಿ ಪರಿಪೂರ್ಣತೆಯ ಹಂಬಲದ ಎದುರು ಅಧಿಕಾರದ ಪ್ರಲೋಭನೆಯನ್ನು ಸ್ಥಾಪಿಸಿದೆ. ಅದು ತನ್ನ ನಗ್ನಾವಸ್ಥೆಯಲ್ಲಿ ಆತ್ಮರತಿಯಲ್ಲೇ ಮುಳುಗಿ ಬಿಡುವಂಥ ಸಂತಾನವನ್ನು ಸೃಷ್ಟಿಸುತ್ತಿದೆ. ಇದೆಲ್ಲದರಿಂದಾಗಿ, ಅಂದರೆ ಅಧಿಕಾರ ದಾಹದ ಈ ಪ್ರವೃತ್ತಿಯಿಂದಾಗಿ ಮನುಷ್ಯನಲ್ಲಿರುವ ಅಮೂಲ್ಯ ಸಂಗತಿಗಳೆಲ್ಲ -ಸಹಾನುಭೂತಿ, ಪ್ರೀತಿ, ನೈತಿಕತೆ ಮುಂತಾದವು- ಅಸಹಾಯಕ ಮಗುವಿನಂತಾಗಿ ಬಿಟ್ಟಿದ್ದು, ನಾವು ಶತಶತಮಾನಗಳಿಂದ ಕಾಪಾಡಿಕೊಂಡು ಬಂದಿದ್ದ ಸಂಗತಿಗಳೆಲ್ಲ ನಲುಗುತ್ತಿವೆ.

ಇಂಥ ಪ್ರಲೋಭನೆಗಳನ್ನೆಲ್ಲ ಸಾಕ್ಷಾತ್ ಆ ಇಂದ್ರನೇ ಕಳಿಸಿದರೂ ಇವೆಲ್ಲ ಭಾರತಕ್ಕೆ ಬರಲಿ ಎಂದು ನಾನು ಯಾವತ್ತೂ ಸ್ವಾಗತಿಸುವುದಿಲ್ಲ. ಏಕೆಂದರೆ, ಬಲಾಢ್ಯರನ್ನೇ ನಿರ್ನಾಮ ಮಾಡುತ್ತಿರುವ ಈ ಆಧುನಿಕ ಪ್ರಲೋಭನೆಗಳು, ನಮ್ಮಂಥ ದುರ್ಬಲರ ಪಾಲಿಗೆ ಇನ್ನೂ ಹೆಚ್ಚು ಅಪಾಯಕಾರಿ. ನಾನು ಹೇಳುವುದಿಷ್ಟೆ-


ನಮ್ಮ ಜೀವನ ಬಾಹ್ಯ ನೋಟಕ್ಕೆ ಸರಳವಾಗಿರಲಿ; ಆದರೆ ಅಂತರಂಗದಲ್ಲಿ ಶ್ರೀಮಂತವಾಗಿರಲಿ.

ನಮ್ಮ ನಾಗರಿಕತೆಯು ಸಾಮಾಜಿಕ ಸಹಕಾರದ ಆಧಾರದ ಮೇಲೆ ಬೆಳೆಯಬೇಕೇ ವಿನಾ ಆರ್ಥಿಕ ಶೋಷಣೆ ಮತ್ತು ಸಂಘರ್ಷಗಳ ಮೇಲಲ್ಲ. ನಮ್ಮ ಜನ ಸಮುದಾಯಗಳನ್ನು ಪಾಶ್ಚಾತ್ಯ ಜಗತ್ತು ಸೃಷ್ಟಿಸಿರುವ ಈ ಧನಪಿಶಾಚಿಯ ಕೈಯಿಂದ ಹೇಗೆ ಪಾರು ಮಾಡುತ್ತಾರೆನ್ನುವುದು ಪೌರ್ವಾತ್ಯ ದೇಶಗಳ ಚಿಂತಕರ ಮುಂದಿರುವ ಸವಾಲು. ಏಕೆಂದರೆ, ಪೌರ್ವಾತ್ಯ ಚಿಂತಕರೆಲ್ಲ ಮನುಷ್ಯನ ಆತ್ಮದಲ್ಲಿ ಅಗಾಧ ನಂಬಿಕೆ ಇಟ್ಟುಕೊಂಡಿರುವವರು. ನಮಗಿಂತ ಸಂಪೂರ್ಣ ಬೇರೆಯದೇ ಆದ -ಆದರೆ ನಮ್ಮ ಬದುಕಿಗೆ ಯಾವ ಸಂಬಂಧವೂ ಇಲ್ಲದ- ಮೌಲ್ಯ ಮತ್ತು ಆದರ್ಶಗಳನ್ನು ಹೊಂದಿರುವವರು ಅವನ್ನೆಲ್ಲ ನಮ್ಮ ಮೇಲೆ ಹೇರಲು ಬಂದಾಗ ಪ್ರತಿರೋಧಿಸದೆ ಇರುವುದು ಷಂಡತನ ಮತ್ತು ನಪುಂಸಕತೆಯ ಲಕ್ಷಣವಲ್ಲದೆ ಇನ್ನೇನೂ ಅಲ್ಲ. ನಮ್ಮ ಇತಿಹಾಸವು ಅದರ ತಾರ್ಕಿಕ ಅಂತ್ಯವನ್ನು ಕಾಣುವಂತಾಗಲು ವಿಶ್ವಶಕ್ತಿಗಳೆನಿಸಿಕೊಂಡಿರುವ ದೇಶಗಳೆಲ್ಲ ತಮ್ಮ ದೃಷ್ಟಿಯನ್ನು ಮಾರ್ಪಡಿಸಿಕೊಳ್ಳುವಂತಾಗಲು ನಾವು ಸಕ್ರಿಯವಾಗಿ ಪ್ರಯತ್ನಿಸೋಣ.

★


ನನ್ನ ಈ ಎಲ್ಲ ಮಾತುಗಳನ್ನು ಆಲಿಸಿದ ಮೇಲೆ ನಿಮಗೆ, ನಾನು ಅರ್ಥಶಾಸ್ತ್ರಜ್ಞನಲ್ಲ ಎನ್ನುವ ಸಂಗತಿ ಸ್ಪಷ್ಟವಾಗಿರಬೇಕು. ಈ ಜಗತ್ತಿನಲ್ಲಿ ಸದಾ ಬೇಡಿಕೆ ಮತ್ತು ಪೂರೈಕೆಯ ನಿಯಮ ಹಾಗೂ ಮನುಷ್ಯನಿಗೆ ಹತ್ತು ಹಲವು ವಸ್ತುಗಳ ಮೋಹ ಇದ್ದೇಇರುತ್ತದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ, ಈ ಮನುಕುಲದ ಸತ್ವ ಇಷ್ಟೇ ಅಲ್ಲ. ಇದಕ್ಕಿಂತ ಹೆಚ್ಚಾದ ಪರಿಪೂರ್ಣತೆಯ ಹಂಬಲ ಇಲ್ಲಿದೆ. ಇಲ್ಲಿ ಸೋಲಿನಿಂದ ವಿಜಯೋತ್ಸವದ ಕಡೆಗೆ, ಸಾವಿನಿಂದ ಅಮೃತತ್ವದ ಕಡೆಗೆ ಹೋಗುವುದು ಸಾಧ್ಯವಿದೆ. ಅಂತಿಮವಾಗಿ ನೈಜ ನ್ಯಾಯದ ತತ್ವದ ಪ್ರಕಾರ ಈ ಜಗತ್ತಿನಲ್ಲಿ ಮೂಲೆಗುಂಪಾಗಿರುವವರೆಲ್ಲ ತಮ್ಮ ಅವಮಾನಗಳನ್ನೇ ದಿಗ್ವಿಜಯವಾಗಿ ಪರಿವರ್ತಿಸಿಕೊಳ್ಳಬಹುದು.

ಉಪ ಸಂಪಾದಕರು, ವಿಜಯಕರ್ನಾಟಕ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮



ಪುಸ್ತಕ ಪರಿಚಯ

ನುಡಿನೋಟಗಳುಳ್ಳ ಕಥೆಗಳು



ಊರ ಒಳಗಣ ಬಯಲು ಕಥಾಸಂಕಲನ

ಲೇಖಕ: **ವಿನಯಾ**

ಪ್ರಕಾಶನ: **ಛಂದ ಪುಸ್ತಕ**, ಬೆಂಗಳೂರು

ಪುಟಗಳು : ೧೦೪ ಪ್ರಕಟಣಾ ವರ್ಷ : ೨೦೦೮ ಬೆಲೆ : **ರೂ. ೬೦**

'**ಊ**ರ ಒಳಗಣ ಬಯಲು' ವಿನಯಾ ಅವರ ಮೊದಲ ಕಥಾ ಸಂಕಲನ. ಈ ಮೊದಲೇ ಎರಡು ಕವನ ಸಂಗ್ರಹಗಳನ್ನೂ ಪ್ರಕಟಿಸಿರುವ ವಿನಯಾರ ಈ ಸಂಕಲನದ ಕತೆಗಳಲ್ಲಿ ಕಾವ್ಯದ ಸವಿರುತನವಿದೆ, ಕಾಡಿ ಒಂಟಿಸುವ ನೆನಪುಗಳಿವೆ, ಅಕ್ಕರೆಯ ಜೀವಗಳಿವೆ. ಎಲ್ಲಕ್ಕಿಂತ ಹೆಚ್ಚಾಗಿ ಅವರು ಮಾತ್ರವೇ ಬರೆಯಬಹುದಾದಂತಹ ಕತೆಗಳಿವೆ.

ಇಲ್ಲಿರುವ ಹನ್ನೊಂದು ಕತೆಗಳಲ್ಲಿ ಮೂರು ಪ್ರತಿಷ್ಠಿತ ಕಥಾಸ್ಪರ್ಧೆಗಳ ಬಹುಮಾನ ವಿಜೇತ ಕತೆಗಳು. ಹಾಗೆಂದು ಈ ಸಂಕಲನದಲ್ಲಿ ಇವಿಷ್ಟು ಮಾತ್ರ ಉತ್ತಮ ಕತೆಗಳು ಎಂದೇನೂ ಭಾವಿಸಬೇಕಿಲ್ಲ.

'ಮಹೇಶ, ನಾನು ಪತ್ರ ಬರೆಯಲಿ ಅಂತ ನೀನು ಕಾದು ಕನವರಿಸಿ ಮುಗಿಸಿದ ಅಖಂಡ ಹದಿನೈದು ವರ್ಷಗಳ ನಂತರ ಈ ಮೊದಲ ಪತ್ರ ಬರೆಯುತ್ತಿದ್ದೇನೆ' ಎಂದು ಆರಂಭವಾಗುವ ಮೊದಲನೆಯ ಕತೆ 'ಒಂದು ಖಾಸಗಿ ಪತ್ರ'ದಲ್ಲಿ ತನ್ನದೇ ಊರಿನ ಹುಡುಗನೊಬ್ಬನಿಂದ ಮಾನಸಿಕ ಕಿರಿಕಿರಿಗೆ ಒಳಗಾಗುವ ಹುಡುಗಿಯೊಬ್ಬಳ ವೇದನೆ ನಿರೂಪಿಸಲ್ಪಟ್ಟಿದೆ. ಮದುವೆಯಾಗಿ ದೂರ ಹೋದ ಬಳಿಕ ಎಷ್ಟೋ ವರ್ಷಗಳ ನಂತರ ಆ ಹುಡುಗನಿಗೆ ಬರೆಯುವ ಪತ್ರದ ರೂಪದಲ್ಲಿದೆ ಈ ಕತೆ. ಈ ನಿರೂಪಣಾ ಶೈಲಿ ಹೊಸ ಮಾದರಿಯದಲ್ಲವಿದ್ದರೂ, ಕತೆಯ ಆಳ ಇದನ್ನೂ ಮೀರಿ ನಮ್ಮನ್ನು ತಟ್ಟುತ್ತವೆ.

ಎರಡನೆಯ ಕತೆ 'ಊರ ಒಳಗಣ ಬಯಲು'. ಇದರಲ್ಲಿ ಬೇರೆ ಧರ್ಮದವಳನ್ನು ಪ್ರೀತಿಸಿ ಮದುವೆಯಾಗಿ ಊರ ಜೊತೆಗಿನ ಸಂಬಂಧವನ್ನು ಕಡಿದುಕೊಂಡ ನಾಯಕ ಬಹುಕಾಲದ ಬಳಿಕ ಊರಿಗೆ ಮರಳಿ ಬರುತ್ತಾನೆ. ಅಲ್ಲಿನ ದೇವಸ್ಥಾನದಲ್ಲಿ ಪೂಜೆ ಮಾಡಿಸುವ ನಾಯಕ, ಹಳೆಯ ಸ್ನೇಹಿತರೊಡನೆ

ಮುಖಾಮುಖಿಯಾದಾಗ ಹಿಂದಿನ ನೆನಪುಗಳು ಮರುಕಳಿಸುತ್ತವೆ. ಕೋಮುಗಲಭೆಯ ಕಾಲದಲ್ಲಿ ಒಂದು ಧರ್ಮವನ್ನು ತೀವ್ರವಾಗಿ ವಿರೋಧಿಸಿದ್ದ ನಾಯಕ ಸುಧಾಕರನೇ ಎಷ್ಟೋ ಕಾಲದ ನಂತರ ಬೇರೊಂದು ಧರ್ಮೀಯಳನ್ನು ಮದುವೆಯಾಗುತ್ತಾನೆ. ಒಂದು ಕಾಲದಲ್ಲಿ ಒಂದು ಧರ್ಮಕ್ಕೆ 'ತೀವ್ರ ನಿಷ್ಠ'ನಾಗಿದ್ದ ನಾಯಕನ ಈ 'ಪಲ್ಲಟ'ವನ್ನು ಕತೆ ಬಹಳ ಅಚ್ಚುಕಟ್ಟಾಗಿ ಕಟ್ಟಿಕೊಡುತ್ತದೆ. ವರ್ತಮಾನದ ಪ್ರಕ್ಷುಬ್ಧ ಬದುಕಿನ ಕಾಲಘಟ್ಟದಲ್ಲಿ ಇಂಥ 'ಜೀವನ್ಮುಖಿ ಪಲ್ಲಟಗಳು' ಎಲ್ಲರ ಬದುಕನ್ನು ಸಹನೀಯಗೊಳಿಸ ಬಲ್ಲವೇನೋ ಎಂಬ ಭಾವವನ್ನು ಈ ಕಥನ ಮೂಡಿಸುತ್ತದೆ.


ಈ ಸಂಕಲನದ ಮಹತ್ವದ ಕಥೆ ಎನ್ನಬಹುದಾದದ್ದು 'ಕಡೀ ತನಕಾ ಕಾಯೋ ಅಭಿಮಾನ'. ಈ ಕತೆಯ ಹರಹು ವಿಸ್ತಾರವಾದದ್ದು. ಜೋಗಜ್ಜ-ಬೊಮ್ಮಕ್ಕ. ಗಂಗಿ-ಎಂಟ್ರಾಮ, ಕರಿಯಮ್ಮ-ದಯಾನಂದ: ಹೀಗೆ ಮೂರು ತಲೆಮಾರಿನ ಕತೆಯಿದು. ಸ್ವಾತಂತ್ರ್ಯ ಹೋರಾಟಗಾರನಾಗಿದ್ದರೂ ಸೂಳೆಯ ಸಹವಾಸದಲ್ಲಿ ಜಮೀನು-ಬಂಗಾರಗಳನ್ನೆಲ್ಲ ಕಳಕೊಂಡ ಜೋಗಜ್ಜ, ಮುಂದಿನ ಬದುಕನ್ನು ಹರಸಾಹಸ ಪಟ್ಟು ಕಟ್ಟಿದ ಆತನ ಸೊಸೆ ಗಂಗಕ್ಕ, ಎಂಜಿನಿಯರ್ ಗಂಡನ ಚಿನ್ನದ ಪಂಜರದ ದೆಸೆಯಿಂದ ಆತ್ಮಹತ್ಯೆ ಮಾಡಿಕೊಂಡ ಗಂಗಕ್ಕನ ಮಗಳು ಕರಿಯಮ್ಮ, ಈ ಯಾಂತ್ರಿಕ ಬದುಕಿನಲ್ಲಿ ಸಂಕುಚಿತಗೊಳ್ಳುತ್ತಿರುವ ಸಂಬಂಧಗಳು; ಹೀಗೆ ಬದುಕಿನ ನಾನಾ ಮಜಲುಗಳನ್ನು ಈ ಕತೆ ಸಶಕ್ತವಾಗಿ ಮೂಡಿಸಿದೆ.

'ನೋಯದವರೆತ್ತ ಬಲ್ಲರೋ' ಕೂಡ ಸಂಬಂಧಗಳನ್ನು ಒರೆಗೆ ಹಚ್ಚಿ ನೋಡುವ ಕತೆ. ತನಗೆ ಯಾರೂ ಇಲ್ಲದ ಅಂಜನಕ್ಕನನ್ನು ಬಾಲ್ಯದಿಂದ ಹಚ್ಚಿಕೊಂಡಿದ್ದ ವಸುಧಾ, ಅಂಜನಕ್ಕ ಆತ್ಮಹತ್ಯೆ ಮಾಡಿಕೊಂಡಿದ್ದನ್ನು ಬೇಕಂತಲೇ ವಸುಧಾಗೆ ತಡವಾಗಿ ತಿಳಿಸುವ ಅಪ್ಪ-ಅಮ್ಮ: ಹೀಗೆ ವಸುಧಾಳ ಮನಸ್ಸಿನಲ್ಲಿ ಹಿಮ್ಮುಖವಾಗಿ ಬಿಚ್ಚಿಕೊಳ್ಳುವ ಈ ಕತೆ, ಸಂಬಂಧಗಳನ್ನು ವ್ಯಾವಹಾರಿಕತೆ ಹೇಗೆ ಕತ್ತರಿಸುತ್ತದೆ ಎಂಬುದನ್ನು ಬಹಳ ಸೂಕ್ಷ್ಮವಾಗಿ ಹೇಳುತ್ತದೆ.

ಈ ಸಂಕಲನದಲ್ಲಿರುವ 'ಎಲ್ಲಾ ಆರಾಮು ತಾನೆ', 'ಕ್ಷಮೆಯಿರಲಿ ಕಂದಾ', 'ದಣಿವು ಕಾಡುವ ಹೊತ್ತು', 'ಸ್ವಯ', 'ಹತ್ತು ವರ್ಷದ ಹಿಂದೆ ಮುತ್ತೂರ ತೇರಿನಲಿ' ಮುಂತಾದವುಗಳೂ ಒಳ್ಳೆಯ ಕತೆಗಳು. ಇಲ್ಲಿನ ಭಾಷೆ, ರೂಪಕಗಳ ಬಗೆಗೂ ಹೇಳಲೇಬೇಕು. 'ಭಾಷೆಯ ಬಳಕೆ ಬೇಕಾದ್ದಕ್ಕಿಂತ ಹೆಚ್ಚಾಗಿದೆ ' ಎಂಬ ಅಪವಾದದಂತಹ ಮಾತಿದ್ದರೂ ಅದು ತೀರಾ ನಿಜವೇನಲ್ಲ. ಇಲ್ಲಿನ ಕೆಲವು ಕತೆಗಳಿಗೆ ಪ್ರಾದೇಶಿಕ ಭಾಷೆಯ ನೆಲೆಯಿದ್ದಾಗಲೇ ಹೆಚ್ಚು ಅರ್ಥವತ್ತಾಗಿರುತ್ತದೆ. 'ಗದ್ದಿ ಗೆಯ್ಮೆ ಸೂತಕದನ್ನಕೂ ಅಗ'. ಈ ಮಾತು ಆಡುಭಾಷೆಯಲ್ಲಿದ್ದಾಗಲೇ ಹೆಚ್ಚು ಅರ್ಥಪೂರ್ಣ. 'ಮಗಳು ಅಂದ್ರೆ ದಾಗಿನದ ಹಾಂಗೆ. ಬೇಕಾದಾಗ ಹಾಕ್ಕೊಂಡು ಬ್ಯಾಡಂದಾಗ ತಗದಿಡಬಹುದು ಅನ್ನೋ ಅಮ್ಮನ ಧೋರಣೆ' 'ಅಮ್ಮ ದಿಕ್ಕಬಳ್ಳಿ ಮೆಟ್ಟಿ ಬಂದವಳಂತೆ ಬಂದು ''ಹಡಬೆ ಹೆಣ್ಣೆ! ಮರ್ಯಾದೆ ಕಳೀತಿಯೇನ? ಎಂದವಳೇ ಒಲೆ ಮೇಲಿನ ಸಾರನ್ನು ಎತ್ತಿ ತೊಡೆ ಮೇಲೆ ಸುರಿದುಬಿಟ್ಟಳು! ನನ್ನ ನೋವುಗಳೇ ಹೀಗೆ. ಇಲ್ಲಿದೆ ಅಂತ ತೋರಿಸಿಕೊಳ್ಳಲು ಆಗದ ಹಾಗೆ !'' 'ಮನೆ ಮುಂದೆ ಕಡಿದು ರಾಶಿ ಮಾಡಿದ ಮರದ ನಾಟುಗಳಿದ್ದವು. ಎಲ್ಲ ಮುಗೀತು ಅಂತನ್ನುವ ಹೊತ್ತಲ್ಲೂ ನಾಟಿನ ಮೈಮೇಲೆ ಶ್ರಾವಣದ ಗಿಡ ಹುಟ್ಟಿ ಹೂ ಬಿಡುತ್ತಿತ್ತು. ಒಮ್ಮೊಮ್ಮೆ ಸೀತೆ ದಂಡೆನೂ ಅರಳ್ತಿತ್ತು. ಸತ್ತು ಒರಗಿದ ನಾಟಿಗೇ ಒಂದು ಬದುಕು ಇರುವಾಗ ನನ್ನಂಥ ಹಸಿ ಜೀವಕ್ಕೆ ಇರ್ಲಿಕ್ಕಿಲ್ಲವೇ ಎಂದು ಮನಸ್ಸು ಗಟ್ಟಿ ಮಾಡ್ತಿದ್ದೆ'

ಇಂಥ ಅನನ್ಯ ನುಡಿನೋಟಗಳುಳ್ಳ ಕಥೆಗಳನ್ನು ತಮ್ಮ ಮೊದಲ ಸಂಗ್ರಹದಲ್ಲಿಯೇ ಕೊಟ್ಟಿರುವ ವಿನಯಾ ಅವರ ಮುಂದಿನ ಸಂಕಲನಕ್ಕೆ ಕಾಯುವುದರಲ್ಲಿ ತಪ್ಪೇನಿಲ್ಲ.

ಹಿನ್ನೋಟ... ಮೆಲುಕು....



ಇಲ್ಲಿ ಎಲ್ಲವೂ ಸುಖಾಂತವಲ್ಲ
ಕಥಾಸಂಕಲನ
ಲೇಖಕ: **ಎಂ.ಎಚ್.ನಾಯಕ ಬಾಡ**

ಕನ್ನಡ ವಿಮರ್ಶಾಲೋಕದ ಜಾಣ ಅವಜ್ಞೆಗೆ ಒಳಗಾದ ಕತೆಗಾರರಲ್ಲಿ ಹಿರಿಯ ಕತೆಗಾರ ಎಂ.ಎಚ್.ನಾಯಕ ಬಾಡ ಕೂಡಾ ಒಬ್ಬರು. ಅವರ ಹಲವಾರು ಕಥಾಸಂಕಲನಗಳು ಪ್ರಕಟವಾದರೂ ಅದನ್ನು ವಿಮರ್ಶಕರೇನೂ ಗಂಭೀರವಾಗಿ ಪರಿಗಣಿಸಿದಂತಿಲ್ಲ. ಇದರ ಬಗ್ಗೆ ನಾಯಕರೂ ತಲೆ ಕೆಡಿಸಿಕೊಳ್ಳದೇ ತಮ್ಮ ಪಾಡಿಗೆ ತಾವು ಬರೆಯುತ್ತಲೇ ಇದ್ದಾರೆ. ವಿಮರ್ಶೆಯ ಬಗೆಗಿನ ನಿರ್ಲಿಪ್ತ ಭಾವ ಹಾಗೂ ಕತೆಯ ಕುರಿತಾದ ಆಸ್ಥೆಗಳೇ ಅವರ ಕೈ ಹಿಡಿದು ಬರೆಸುತ್ತಿರುವ ಹಾಗಿದೆ.

'ಸಾಕ್ಷವೇರ ಬರಹಗಾರರಿಗೆ ಇರುವ 'ಮಾಧ್ಯಮಗಳ ಸಂಪರ್ಕ', ಮಾಧ್ಯಮಗಳಿಗೂ ಅವರ ಬಗೆಗೆ ಇರುವ 'ಅತೀವ ಆಕರ್ಷಣೆ'ಗಳಿಂದಾಗಿ ನಾಯಕರಂಥವರು ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾದರೇನೋ ಅನಿಸುತ್ತದೆ. ಈ ರೀತಿಯ ನಿರ್ಲಕ್ಷ್ಯ ಕೇವಲ ಎಂ.ಎಚ್.ಎನ್ ಅವರಿಗಷ್ಟೇ ಸೀಮಿತವಲ್ಲ. ಹಲವಾರು ಹಿರಿಯ ಬರಹಗಾರರಿಗೆ ಇಂಥ 'ಸಂಪರ್ಕ'ದ ಕುರಿತಾಗಿ 'ತಿಳಿವಳಿಕೆ' ಇಲ್ಲದ ಕಾರಣ ಅವರು ಲೈಮ್‌ಲೈಟ್‌ನಲ್ಲಿರಲು ಸಾಧ್ಯವಾಗಿಲ್ಲ. ಬಹುತೇಕ ಮಾಧ್ಯಮಗಳ 'ಗುಂಪುಗಾರಿಕೆ', ತಮಗೆ ಬೇಕಾದವರ ಪುಸ್ತಕಗಳನ್ನಷ್ಟೇ ವಿಮರ್ಶಕರಿಗೆ ನೀಡಿ 'ಅನನ್ಯ ವಿಮರ್ಶೆ' ಬರೆಯಿಸುವ ವ್ಯವಸ್ಥೆ, ಅವರ ಬರಹಗಳನ್ನೇ 'ಆಯ್ದು' ಪ್ರಕಟಿಸುವ, ಅವರ ಹೆಸರನ್ನು ಬರಹದ ಸಾಲುಗಳನ್ನು 'ಕೋಟ್' ಮಾಡುವ ವೈಪರೀತ್ಯದಿಂದಾಗಿ ಒಳ್ಳೆಯ ಬರಹಗಾರರೂ ಹಿಂದೆ ಸರಿಯುವಂತಾಗಿದೆ. ಇದಕ್ಕೆ 'ಪ್ರಕಾಶ'ಕರೂ ಹೊರತಾಗಿಲ್ಲ ಎಂಬುದೂ ಗಮನಾರ್ಹ. ಇತ್ತೀಚಿನ ಬೆಳವಣಿಗೆಗಳನ್ನು ಕಂಡಾಗ ಇವನ್ನೆಲ್ಲ ಹೇಳಬೇಕೆನಿಸಿತು.

'ಇಲ್ಲಿ ಎಲ್ಲವೂ ಸುಖಾಂತವಲ್ಲ' ಇದು ನಾಯಕರ ನಾಲ್ಕನೆಯ ಕಥಾ ಸಂಕಲನ. (ಇದರ ನಂತರ ಅವರ ಇನ್ನೆರಡು ಸಂಕಲನಗಳು ಬಂದಿರಬಹುದು.) ಇದರಲ್ಲಿ ಒಂದಿಷ್ಟು ಒಳ್ಳೆಯ ಕಥೆಗಳಿವೆ. ಇಲ್ಲಿನ ಹದಿಮೂರು ಕತೆಗಳಲ್ಲಿ 'ಮನುಷ್ಯತ್ವ' 'ನಿಮಿತ್ತ' 'ಉಳಿದದ್ದು ನೋವು ಮಾತ್ರ' 'ಕತ್ತಲೆಯಿಂದ ಬೆಳಕಿನೆಡೆಗೆ' 'ನನ್ನ ತಂಗಿ ಹೇಮಾ' 'ಗತಿ' ಉತ್ತಮ ಕತೆಗಳು. ಓದಿ ಮುಗಿಸಿದ ಮೇಲೂ ಇವು ಮನಸ್ಸಿನಲ್ಲಿ ಉಳಿಯುತ್ತವೆ, ಬೆಳೆಯುತ್ತವೆ, ಕಾಡುತ್ತವೆ. ಇದು ನಾಯಕರ ಬರವಣಿಗೆಯ ಶಕ್ತಿ. ಇಲ್ಲಿನ ಎಲ್ಲ ಕತೆಗಳಲ್ಲೂ ಮುಖ್ಯವಾಗಿ ಕಂಡುಬರುವುದು ಮಾನವೀಯತೆ, ಪ್ರೀತಿ, ವಿಷಾದ, ಬದುಕಿನ ವೈರುಧ್ಯಗಳು. ಈ ನೆಲೆಗಳಲ್ಲಿಯೇ ಇವರ ಕತೆಗಳು ಸಂಭವಿಸುತ್ತವೆ. ಬಸ್‌ನಲ್ಲಿ ಅಪರಿಚಿತ ಮಹಿಳೆಯೊಬ್ಬಳಿಗೆ ಸಹಾಯ ಮಾಡುವ ಯುವಕನ ಆಸ್ಥೆಯಾಗಲೀ, ಬೇಡಲು ಬಂದ ಪುಟ್ಟ ಬಾಲಕಿಗೆ, ನೆರವಾಗುವ ವ್ಯಕ್ತಿಯ ಅಕ್ಕರೆಯಾಗಲೀ ನಮ್ಮನ್ನು ತಟ್ಟದಿರದು.

ನಾಯಕರು ಈ ಕತೆಗಳಲ್ಲಿ ಪ್ರಾದೇಶಿಕ ಭಾಷೆ, ಸಂಸ್ಕೃತಿಗಳನ್ನು ಹಿಡಿಯಲು ಹೊರಟಾಗ ಬಹಳ ಯಶಸ್ವಿಯಾಗುತ್ತಾರೆ. ಆದರೆ ಈ ತಂತ್ರ ಬೇರೆ ಕತೆಗಳಲ್ಲಿ ಅಷ್ಟು ಸಕ್ಸಸ್ ಆಗುವುದಿಲ್ಲ. ಇದಕ್ಕೆ 'ಗತಿ' ಮತ್ತು 'ಕುಡಿ' ಒಳ್ಳೆಯ ಉದಾಹರಣೆಗಳು. ಅಲ್ಲದೇ ಕತೆಯ ರಾಚನಿಕ ವಿನ್ಯಾಸದಲ್ಲಿ ಹೊಸ ಪ್ರಯೋಗವೇನೂ ಇಲ್ಲ. ಎರಡು-ಮೂರು ಕತೆಗಳನ್ನು ಹೊರತುಪಡಿಸಿದರೆ ಉಳಿದ ಎಲ್ಲ ಕತೆಗಳಲ್ಲೂ ಒಂದು ಹಿನ್ನೋಟ(ಫ್ಲ್ಯಾಷ್‌ಬ್ಯಾಕ್) ಹಾಗೂ ಮುರಿದುಬಿದ್ದ ಅಥವಾ ಪರಿಸ್ಥಿತಿಯ ಒತ್ತಡಗಳಿಂದ ದೂರವಾದ ಪ್ರೇಮ, ಅದರ ಮರುಶೋಧಗಳಿವೆ. ಹೀಗಾಗಿ ಇಲ್ಲಿನ ಪಾತ್ರಗಳು ಬಹುಕಾಲದ ಬಳಿಕ ಸಂಧಿಸುತ್ತವೆ ಅಥವಾ ಆ ಯತ್ನದಲ್ಲಿರುತ್ತವೆ.

ಈ ಕತೆಗಳಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಅಲ್ಲಲ್ಲಿ ಕಾಣುವ ಹರಿತವಾದ ವ್ಯಂಗ್ಯ. ಉದಾಹರಣೆಗೆ ನೋಡಿ: 'ನೌಕರಿಯ ನೆಪದಲ್ಲಿ ಸಿಟಿಯಲ್ಲಿ ಇರಲು ತೊಡಗಿದ ಮೇಲೆ ವಕ್ರವಕ್ರವಾಗಿದ್ದ ಹೆಸರನ್ನು ಸ್ಮಾರ್ಟಾಗಿ ಕತ್ತರಿಸಿಕೊಂಡ...', 'ಸರ್ಕಾರದ ಇಲಾಖೆಯೊಂದರಲ್ಲಿ ಸೆಕ್ಷನ್ ಆಫೀಸರ್. ಆಫೀಸರು ಅಂದ್ರೆ ಅದೇನೂ ಅವನಲ್ಲಿದ್ದ ವಿಶೇಷ ಸಾಮರ್ಥ್ಯದಿಂದ ಬಂದುದಲ್ಲ. ಅವನಷ್ಟೇ ಓದಿದ, ಅವನ ಜೊತೆಗೇ ಇಲಾಖೆಗೆ ಸೇರಿದ ಯಾವುದಾದರೂ ಒಂದು ಕತ್ತೆಯೂ ಕೂಡ ಇಪ್ಪತ್ತೆಂಟು ವರ್ಷಗಳ ಸರ್ವಿಸ್ಸಿನ ನಂತರ ಸೆಕ್ಷನ್ ಆಫೀಸರಾಗಿಯೇ ಬಿಡುತ್ತಿತ್ತು.'

ನಾಯಕರ ಕತೆಗಳನ್ನು ಓದಿದ ಯಾರೂ, ಹಳೆಯ ಪ್ರೇಮವನ್ನು ಒಂದು ಕ್ಷಣವಾದರೂ ಮೆಲುಕು ಹಾಕದಿರಲಾರರು. ಆದರೆ ಈ ಮೆಲುಕು ಅಥವಾ ಹಳಹಳಿಕೆಯಷ್ಟೇ ಕತೆಯ ಉದ್ದೇಶವಲ್ಲವಲ್ಲ. ಹೀಗಾಗಿ ಇದು ನಾಯಕರ ವೈಶಿಷ್ಟ್ಯ ಹಾಗೂ ಮಿತಿ ಎರಡೂ ಆಗಿದೆ. ಆದರೂ ಯಾವ 'ಮಾಧ್ಯಮ' ಅಥವಾ 'ಪ್ರಕಾಶ'ಕರ ಒತ್ತಾಸೆ, ನಿರೀಕ್ಷೆಯೂ ಇಲ್ಲದೇ ಈಗಲೂ ಬರೆಯುವುದಿದೆಯಲ್ಲ, ಅದು ಬಹಳ ದೊಡ್ಡದು.

ಕೈದಿಗಳ ಬದುಕಿನ ಕಥೆ



ಕೈದಿಗಳ ಕಥನ ಕಥಾಸಂಕಲನ
ಲೇಖಕ: **ಗಣೇಶ ಅಮೀನಗಡ**
ಪ್ರಕಾಶನ: **ಛಂದ ಪುಸ್ತಕ, ಬೆಂಗಳೂರು**
ಪುಟಗಳು: ೧೦೪ ಪ್ರಕಟಣಾ ವರ್ಷ: ೨೦೦೮ ಬೆಲೆ: **ರೂ. ೬೦**

ಮೇಲಿನ ಎರಡು ಪುಸ್ತಕಗಳಿಗಿಂತ ವಿಭಿನ್ನವಾದುದು ಈ 'ಕೈದಿಗಳ ಕಥನ'. ಕನ್ನಡದಲ್ಲಿ ಈ ಮಾದರಿಯ ಪುಸ್ತಕ ಬಂದಿರುವುದು ಬಹುಶಃ ಇದೇ ಮೊದಲ ಸಲ ಇದ್ದಿರಬಹುದು.

ಪತ್ರಕರ್ತರಾಗಿ ಹೆಸರಾಗಿರುವ ಹಾಗೂ ರಂಗಭೂಮಿಯ ಸೆಳೆತವಿರುವ ಗಣೇಶ ಅಮೀನಗಡ ಈಗಾಗಲೇ ರಂಗಭೂಮಿಯ ಕುರಿತ ಲೇಖನಗಳ ಸಂಗ್ರಹ 'ಪ್ರಯೋಗ ಪ್ರಸಂಗ' ಹಾಗೂ ಹಿರಿಯ ರಂಗಕರ್ಮಿ ಏಣಗಿ ಬಾಳಪ್ಪನವರ ರಂಗಾನುಭವಗಳ ನಿರೂಪಣೆಯ 'ಬಣ್ಣದ ಬದುಕಿನ ಚಿನ್ನದ ದಿನಗಳು' ಕೃತಿಯನ್ನು ಪ್ರಕಟಿಸಿದ್ದಾರೆ.

ರಂಗ ನಿರ್ದೇಶಕ ಹುಲಿಗೆಪ್ಪ ಕಟ್ಟಿಮನಿ ಅವರು ಮೈಸೂರು ಜೈಲಿನ ಕೈದಿಗಳಿಂದ ನಾಟಕ

ಆಡಿಸಿದ್ದರು. ಅವರ ತಾಲೀಮಿಗೆ ಒಮ್ಮೆ ಕಟ್ಟಿಮನಿ ಜೊತೆ ಗಣೇಶ್ ಕೂಡಾ ಹೋಗಿದ್ದರು. ರಂಗಭೂಮಿಯ ಒಡನಾಟದಿಂದ ಬದಲಾದ ಈ ಕೈದಿಗಳ ಕುರಿತು ಆಸಕ್ತಿ ಮೂಡಿದ್ದರಿಂದ, ಅವರನ್ನು ಮಾತಾಡಿಸಿ, ಅವರ ನೋವಿನ ಕತೆಯನ್ನು ಅವರದೇ ಮಾತುಗಳಲ್ಲಿ ಹಿಡಿದಿಟ್ಟಿದ್ದಾರೆ.

ಇದರಲ್ಲಿ ೨೧ ಕೈದಿಗಳ ಕಥನವಿದೆ. ಪ್ರತೀ ಕೈದಿಗಳೂ ತಮ್ಮ ಬದುಕಿನ ಕತೆಗಳನ್ನು ವಿವರವಾಗಿ ಅರುಹಿದ್ದಾರೆ. ಯಾವ ಕಾರಣದಿಂದ ಜೈಲಿಗೆ ಬರುವಂಥ ಪರಿಸ್ಥಿತಿ ಉಂಟಾಯಿತು, ಇಲ್ಲಿಗೆ ಬಂದ ಮೇಲೆ ಓದು, ಬರಹಗಳಲ್ಲಿ ತೊಡಗಿಸಿಕೊಂಡಿದ್ದು, ವಿದ್ಯಾಭ್ಯಾಸ ಆರಂಭಿಸಿದ್ದು, ಮುಂದುವರಿಸಿದ್ದು, ತಮ್ಮ ಹಳೆಯ ಅನಾಗರಿಕ ವರ್ತನೆಗಳ ಬಗ್ಗೆ ಜಿಗುಪ್ಸೆ ಉಂಟಾಗಿದ್ದು, ರಂಗ ನಿರ್ದೇಶಕ ಕಟ್ಟಿಮನಿಯವರ ರಂಗಶಿಬಿರದಲ್ಲಿ ಯೋಗಾಸನ, ಪ್ರಾಣಾಯಾಮ ಕಲಿತಿದ್ದು, ಮಣ್ಣಿನ ಗೊಂಬೆ, ಮೂರ್ತಿಗಳನ್ನು ನಿರ್ಮಿಸಿದ್ದು, ಚಿತ್ರಗಳನ್ನು ಬಿಡಿಸಿದ್ದು, ಸಂಗೀತ ಕೇಳತೊಡಗಿದ್ದು, ನಾಟಕದಲ್ಲಿ ಅಭಿನಯಿಸತೊಡಗಿದ್ದು ಹೀಗೆ ಹತ್ತು ಹಲವಾರು ಸಂಗತಿಗಳನ್ನು ಕೈದಿಗಳು ಇಲ್ಲಿ ಹಂಚಿಕೊಂಡಿದ್ದಾರೆ.

ಹತ್ತು ವರ್ಷಗಳಿಂದ ಕೈದಿಗಳಿಗೆ ತರಬೇತಿ ನೀಡಿ, ಅವರಿಂದ ಯಶಸ್ವಿಯಾಗಿ ನಾಟಕವಾಡಿಸುತ್ತ ಬಂದ ರಂಗ ನಿರ್ದೇಶಕ ಹುಲಿಗಪ್ಪ ಕಟ್ಟಿಮನಿ ಅವರ ಅನುಭವದ ದೀರ್ಘ ಚಿತ್ರಣವೂ ಈ ಕೃತಿಯಲ್ಲಿದೆ. ಇದು ಈ ಪುಸ್ತಕದ ಪ್ಲಸ್ ಪಾಯಿಂಟ್.

ಮುನ್ನುಡಿಯಲ್ಲಿ ಡಾ.ಕೆ.ವಿ.ನಾರಾಯಣ ಆಶಿಸಿರುವುದು ಹೀಗೆ; 'ಜೈಲಿನೊಳಗೆ ಹೋಗಿ ಇವರನ್ನೆಲ್ಲಾ ಮಾತಾಡಿಸಿ ಅವರ ನೆನಪುಗಳನ್ನು ಕೆದಕಿ ಆ ನೆನಪುಗಳನ್ನು ಮಾತಿನಲ್ಲಿ ಕಟ್ಟಿಕೊಡುವಂತೆ ಮಾಡುವುದು ಸುಲಭದ ಕೆಲಸವಲ್ಲ. ಸದ್ಯ ಜೈಲುಗಳಿನ್ನೂ ಜನರ ಪ್ರವಾಸದ ತಾಣಗಳಾಗಿಲ್ಲ. ಅಪರಾಧಿಗಳೆಂದು ನ್ಯಾಯಾಲಯ ಹೇಳಿದ್ದರೆ ಅಥವಾ ಕಾನೂನು ಪಾಲಕರೆಂದು ನೇಮಕವಾಗದಿದ್ದರೆ ಅಲ್ಲಿಗೆ ಹೋಗುವುದು ಸುಲಭವಲ್ಲ, ಅದೂ ಸಾಹಸವೇ. ಅಲ್ಲಿಗೆ ಹೋದ ಮೇಲೆ ನಿಯಮಗಳಿಗೆ ಅನುಗುಣವಾಗಿಯೇ ಕೈದಿಗಳೊಡನೆ ಮಾತಾಡಬೇಕು. ಅವರ ಮಾತುಗಳನ್ನು ರೂಪಿಸಬೇಕು. ಇದೆಲ್ಲವೂ ತಾಳ್ಮೆ ಹಾಗೂ ಚಾಕಚಕ್ಯತೆಯನ್ನು ಬಯಸುತ್ತವೆ. ಈ ನಿಟ್ಟಿನಲ್ಲಿ ಗೆಳೆಯ ಗಣೇಶ ಅಮೀನಗಡ ಸಾಕಷ್ಟು ಯಶಸ್ವಿಯಾಗಿದ್ದಾರೆ. ಇದು ಅವರು ನೋಡ ಬಯಸಿರುವ ಲೋಕದ ಅಂಚು ಮಾತ್ರ ಅನ್ನುವುದು ಅವರಿಗೆ ಗೊತ್ತಿದೆ. ಮುಂದೆ ಅವರು ಈ ಅಂಚಿನ ಜಾಡು ಹಿಡಿದು ಈ ಲೋಕದ ಒಳಗನ್ನು ಕನ್ನಡದಲ್ಲಿ ಕಟ್ಟಿ ಕೊಡುವಂತಾಗಲಿ ಎಂದು ಹಾರೈಸುತ್ತಲೇ ಈಗ ಮಾಡಿರುವ ಸಾಧನೆಗೆ ಅವರನ್ನು ನಾನು ಅಭಿನಂದಿಸುತ್ತೇನೆ. ' ನಮ್ಮ ಹಾರೈಕೆಯೂ ಅದೇ.

- ರವೀಂದ್ರ ಮಾವಖಂಡ

ravindra783@gmail.com

ಆತ್ಮೀಯವೆನಿಸುವ ಕಥೆಗಳು


ಕಥೆಗಾರ ಕೇಶವಮಳಗಿಯವರ ರೂಪಕ ಲೋಕದ ಈ ಕಥನವು ಓದುತ್ತಾ ಹೋದಂತೆ ಮೊದಲಿಗೆ ಭಾವದ ಕಟ್ಟೆ ಒಡೆದು ಆತ್ಮೀಯವೆನಿಸುತ್ತದೆ.

ಇಷ್ಟವನ್ನು ತಬ್ಬಿಕೊಳ್ಳುವ, ಜತನದಿಂದ ಮೂಡಿರುವ ಕಥನಗಳು ನಮ್ಮ ಹಾದಿಯ ನಡೆಯನ್ನು ನಿಂತು ಗಮನಿಸಿದೆ; ಬದುಕಿಗೊಂದು ಅರ್ಥ-ನೋಟವನ್ನು ತೋರುವುದರಲ್ಲಿ ಈ ಕಥನದ ಪಾತ್ರಗಳಿವೆ. ಸ್ಪರ್ಧೆಗಳ ಟಕ್ಕಾಟಿಕ್ಕಿಯಲ್ಲಿ ಒಂದು ಸೋಲು ಕಣ್ಣೀರ ಕೋಡಿಯಾಗಿ ಆತ್ಮಹತ್ಯೆಯ ಚಿತ್ರಗಳನ್ನೇ ಬಿಡಿಸುತ್ತಿರುವ ವರ್ತಮಾನವನ್ನು 'ಕಥೆ ಮುಗಿಯಿತು, ಈಗ ಪೂರ್ಣವಿರಾಮ' ಆತಂಕದಲ್ಲಿ ತೆರೆದುಕೊಂಡಿವೆ. 'ಹೋಗಿ ಬಾ ಮಗುವೆ, ನಿನ್ನ ದಾರಿಯನ್ನು ರೂಪಿಸಿಕೊಳ್ಳಲು' ದಿನವೂ ಎದುರಾಗುವ ಕ್ಷುದ್ರ ಕ್ಷಣಗಳಿಗೆ ತೆತ್ತುಕೊಳ್ಳುತ್ತಲೇ ದಾಟುವುದನ್ನು ಕಲಿಸುವ ಸಲುವಾಗಿದೆ. ಈ ಕಥನದೊಂದಿಗೆ ಅಬ್ರಾಹಂ ಲಿಂಕನ್ ತನ್ನ ಮಗ ಮೊದಲ ಸಲ ಶಾಲೆಗೆ ಹೋದಾಗ ಶಿಕ್ಷಕರಿಗೆ ಬರೆದ ಅಪರೂಪದ ಪತ್ರವಿದೆ.

'ಜಗದ ಪುಸ್ತಕಗಳೆಲ್ಲ ನನಗಿರಲಿ ಗೆಳೆಯ' ಧಾರವಾಹಿ, ಎಫ್.ಎಮ್.ಗಳ ದೆಸೆಯಿಂದ ಕಣ್ಣು, ಕಿವಿಗಳಿಗೆ ವಿಪರೀತ ಕೆಲಸ ಕೊಟ್ಟುಕೊಂಡು 'ಬ್ಯುಸಿ'ಯಾಗುತ್ತಿರುವ ನಮಗೆ ಓದಿನ ಸುಖವನ್ನು ಉರಿಯುವ ಅವಮಾನದ ಕ್ಷಣಗಳಲ್ಲಿ ನಿಂತು ಉತ್ಕಟವಾಗಿ ಕಟ್ಟಿಕೊಡುತ್ತದೆ.

'ಅದೇ ಕಣೋ ಕಿತ್ತು ಹೋಗಿರೋ ಆ ಖಾಲಿ ಕೋಣೆ' ತನ್ನ ಜೀವಂತವೆನಿಸುವ ಪುಟ್ಟಪುಟ್ಟ ವಿವರಗಳಿಂದ ಒಂದು ದೃಶ್ಯಕಾವ್ಯವಾಗಿ ಮನಸ್ಸಲ್ಲಿ ಉಳಿಯುತ್ತದೆ. ಹಾಗೆ 'ಟೀಕಾಚಾರ್ಯರಿಗೆ ಅನಂತ ನಮಸ್ಕಾರ' ಅವರಿವರು ಬೀಸುವ ಟೀಕೆಯ ಕಲ್ಲುಗಳಿಂದಲೇ ನಿರ್ಮಾಣಗೊಂಡ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. 'ನನ್ನ ಬರಹ ನನ್ನ ನೋಟ' ಕಥನ ಲೇಖಕರ ಸ್ವಾನುಭವದ ಸ್ಪರ್ಶದಿಂದಾಗಿ ಓದುಗನನ್ನು ಬಹಳ ಕಾಲ ಹಿಡಿದಿಟ್ಟುಕೊಳ್ಳುತ್ತದೆ.

ಒಂದು ಕೋನದಲ್ಲಿ ಈ ಕಥನ ವಿಮರ್ಶೆಯ ಎಕ್ಸ್‌ರೇ ತೆಗೆದಿದೆ. ಇದು ವಿಮರ್ಶೆಯ ತಕ್ಕಡಿಯ ತಳವನ್ನು; ತಕ್ಕಡಿ ಹಿಡಿದಿರುವ ಕೈಗಳನ್ನು



ನೇರಳೆ ಮರ
ಕಥೆಗಾರ ಕಂಡ ರೂಪಕ ಲೋಕದ ಕಥನ
ಲೇಖಕ: **ಕೇಶವ ಮಳಗಿ**
ಪ್ರಕಾಶನ: **ಕಥನ,** ನಾಗರಭಾವಿ, ಬೆಂಗಳೂರು
ಪುಟಗಳು : ೧೦+೯೪
ಪ್ರಕಟಣಾ ವರ್ಷ : ೨೦೦೮
ಬೆಲೆ : **ರೂ. ೬೦**

ಪರಿಶೀಲಿಸಲು ಕ್ರಿಯಾಶೀಲಗೊಳಿಸುತ್ತದೆ. ಮುಖ್ಯವಾಗಿ ಬರೆಯುವವರ ಆತ್ಮವಿಶ್ವಾಸ ಹೇಗಿರಬೇಕು ಎನ್ನುವುದಕ್ಕೆ ಒಂದು ಮಾದರಿಯಾಗುವುದು.

ಹಳೆ ಮಂದಿಗೆ, ಹಳಹಳಿಕೆ, ಹೃದಯೇನ ಅಸನ್ನಿಹಿತಾ, ಚಳಿಯ ಬಿಟ್ಟದ ಸಂತಸ ಮಾತು ಕಥನಗಳು ತಮ್ಮ ಸಾಪೇಕ್ಷಿತ ಗುಣದಿಂದ ಹಲವು ಟಿಸಿಲುಗಳಲ್ಲಿ ಓದುಗನೊಳಗೆ ಬೆಳೆಯುತ್ತವೆ. ನೇರಳೆಮರ, ನಿನಗೊಂದು ಪ್ರೇಮಪತ್ರ ಬರೆಯಲೆ ಪಲಣ, ಸಾಲಿಯ ನೋಡಿದಿರ, ಕಥನಗಳು ನಾವು ಮರೆತಂತಿರುವುದನ್ನು ಜ್ಞಾಪಿಸುತ್ತ ನಮ್ಮ ಹಾದಿಯ ಹಾಳೆಗೆ ಹಲವು ಬಣ್ಣಗಳನ್ನು ಹುಟ್ಟಿಸಿಕೊಳ್ಳಲು ಅನುವಾಗುತ್ತವೆ.

ಅಲ್ಲಲ್ಲಿ ಕೆಲವು ಭಾಗಗಳನ್ನು ಓದುವಾಗ (ಉದಾ: ೫, ೮, ೯, ೩....) ಉಪನ್ಯಾಸದ ಶೈಲಿ ಇಣುಕಿ ಗದ್ಯ ತುಸು ಮಂಕಾಗಿದೆ ಅನಿಸಿದರೂ: ಇಲ್ಲಿನ ಕಥನಗಳು ಭಾವಿತ ಮನಸ್ಸೊಂದರ ಪಿಸುಮಾತಿನ ಹಾಗಿದೆ.

ಹಿಂಸೆಯೇ ಆವರ್ತನ ಕೇಂದ್ರಬಿಂದು



ನೀರಗಂಧ
ಕವನಸಂಕಲನ
ಲೇಖಕ:
ಜಿ.ವಿ. ಆನಂದಮೂರ್ತಿ
ಪ್ರಕಾಶನ: **ಬೋಧಿಶ್ರೀ ಪ್ರಕಾಶನ**, ತುಮಕೂರು
ಪುಟಗಳು: ೧೫+೭೧
ಪ್ರಕಟಣಾ ವರ್ಷ: ೨೦೦೭
ಬೆಲೆ: **ರೂ. ೬೦**

ಕಳೆದ ಎರಡು ದಶಕಗಳಲ್ಲಿ ಪ್ರಕಟವಾಗಿರುವ ಕನ್ನಡ ಕಾವ್ಯವು ಪ್ರಜ್ಞೆಗೆ ತರುತ್ತಿರುವ ಒಂದಂಶ; ಅದು ಈ ಕಾಲದ ಹಿಂಸೆಯೇ ಆಗಿದೆ. ಜಿ.ವಿ. ಆನಂದಮೂರ್ತಿಯವರ ಮೊದಲ ಸಂಕಲನ 'ನೀರಗಂಧ' ಇಂತಹ ಹಿಂಸೆಯ ಆವರ್ತನವನ್ನೇ ಕೇಂದ್ರವಾಗಿಸಿಕೊಂಡಿದೆ. ಒಂದೇ ಮೂಸಿನಲ್ಲಿ ಒಂದೇ ವಿಷಯದ ಬಗ್ಗೆ ಗಮನಪಟ್ಟಂತಿರುವ ಇಲ್ಲಿನ ಕವಿತೆಗಳನ್ನು ಓದಿದಾಗ ಪ್ರಸ್ತುತ ಕಾವ್ಯ ಏಕೆ ಹಿಂಸೆಯತ್ತ ತನ್ನ ದೃಷ್ಟಿ ಕೊಟ್ಟಿದೆ? ಮತ್ತು ಒಟ್ಟು ವ್ಯವಸ್ಥೆಯಲ್ಲಿ ಹಿಂಸೆಯ ಸ್ವರೂಪ ಎಂಥದ್ದು ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳುವಂತೆ ಮಾಡುತ್ತದೆ.

ಈ ನೆಲಕ್ಕೆ ಎರಡು ರೆಕ್ಕೆಗಳಿದ್ದರೆ
ಸುರಿಯುತ್ತಿರಲಿಲ್ಲ ಅದರ ಮೈಯಿಂದ ಇಷ್ಟೊಂದು ರಕ್ತ

(ಬಹುರೂಪಿ)

ಹೀಗೆ ಹಲುಬುವ ಇಲ್ಲಿನ ಕವಿ, ತನ್ನ ತೇವದ ಕಣ್ಣುಗಳಲ್ಲಿ ತುಂಬಿಕೊಂಡಿರುವ ಚಿತ್ರವೆಂದರೆ,

ಅನ್ನ ಬೇಡುವ ಹಸಿದ ತಣಿಗಳ ಮುಂದೆ
ಭೀತಿ ಗರ್ಭವ ಬಗೆದ ಬಂದ ತ್ರಿಶೂಲಧಾರಿಗಳು
ಬಸುರಿ ಬಾಣಂತಿಯರ ಕರುಳ ಬಗೆದರು
ತೊಟ್ಟಿಲ ಕೂಸುಗಳ ಸೊಲ್ಲಡಗಿಸಿದರು

(ಧರೆಗೆ ದೊಡ್ಡವರು)

-ಎಂದು ನೊಂದುಕೊಂಡು ಈ ನೆಲದಲ್ಲಿ ಸುರಿದಿರುವ ರಕ್ತವ ತೊಡೆದು ಹಾಕಲು ಧರೆಗೆ ದೊಡ್ಡವರಾದ ಮಂಟೇಸ್ವಾಮಿಯನ್ನು ಕವಿ ಮನಸ್ಸು ನೆನೆಯುತ್ತದೆ.

ಇಂತಹ ಅವಲೋಕನಗಳ ನಡುವೆಯೂ ಇಲ್ಲಿನ ಕವಿತೆಗಳು ಕೃಷಿ ಸಮುದಾಯದ ಚಹರೆ, ಗ್ರಾಮ್ಯ ನುಡಿಗಟ್ಟು, ನಂಬುಗೆಗಳನ್ನು ಧರಿಸಿಕೊಂಡಿದೆ.

ಉದಾ: ಹಾರೋಗೇರಿಯಲಿ
ಹಗಲು ಸತ್ತರೆ ಅಕ್ಕಿಯಿಲ್ಲ
ಕುಂಬಾರಗೇರಿಯಲಿ
ಇರುಳು ಸತ್ತರೆ ಎಣ್ಣೆಯಿಲ್ಲ (ತೂಗು ಮೋಡಗಳ ಬಗೆ ಮಾಡಿ)

ಜನಪದ ಕಾವ್ಯಗಳಲ್ಲಿ ಸಾಮಾನ್ಯವಾಗಿ ಬರುವ ಲಯವನ್ನು ಮುರಿದು ಕಟ್ಟಿರುವುದು ಹೀಗೆ.

ಕಾಳರಾತ್ರಿಯೊಳಗೆ
ಕೀವು ಸುರಿವ ರಣಗಾಯದ ದಾರಿ
ಮೂಗುತ್ತದೊಳಗೆ ಬಿಚ್ಚುಗತ್ತಿಯ ಹಾರ
ಬೆಟ್ಟ ಹತ್ತಿ ಬೆಟ್ಟ ಇಳಿದರೂ ತೀರಲಾರದ ಸಾಲ (ಜವಳಿ ಕಟ್ಟೆಯ ಜೀವಕಳೆ)

ಬಹುಪಾಲು ಇಲ್ಲಿನ ಕವಿತೆಗಳು(ಸರಗುಣಿಕೆ ದಾರಿಯೊಳಗೆ, ನೀರಗಂಧ, ಅಯೋಧ್ಯೆಯ ಸಂಜೆ, ಮಂದಹಾಸದ ಸಂಜೆ) ಈ ನೆಲದ ನಂಟಿನೊಂದಿಗೆ ತನ್ನ ಇರುವನ್ನು ಕಂಡುಕೊಂಡಿವೆ. ನೆಲದ ಜೀವರಾಶಿಗಳ ಬೆಚ್ಚನೆಯ ಬಾಳುವೆಗಾಗಿ ನಿಟ್ಟುಸಿರುಬಿಟ್ಟಿದೆ.

ಮುನ್ನುಡಿಗೆ ಮೊದಲು ಜಿ. ರಾಜಶೇಖರ್‌ರವರು ಎತ್ತಿಕೊಂಡಿರುವ ವಿಚಾರಗಳು ಪ್ರಸ್ತುತವಾಗಿದ್ದು; ಕವಿತೆಗಳ ಅಂತರ್ಯವನ್ನು ಇಂದಿನ ಸಾಮಾಜಿಕ ಸಂದರ್ಭದೊಳಗಿಟ್ಟು ನೋಡಿ ಅರಿಯಲು ಒಂದು ಪ್ರವೇಶಿಕೆಯನ್ನು ಒದಗಿಸುತ್ತದೆ. ಆದರೆ, ಇಲ್ಲಿ ಸಮಕಾಲೀನ ಕನ್ನಡ ಕಾವ್ಯದ ಬಗೆಗಿನ ಜಿ.ಆರ್.ರವರ ಆಕ್ರೋಶವು ಅವರ ಕಾವ್ಯ ಓದಿನ ಕೊರತೆಯನ್ನು ಹೇಳುತ್ತದೆ.

ಒಂದು ಕಡೆ; ಕನ್ನಡ ಸಮಕಾಲೀನ ಕವಿಗಳ ಭಾವಕೋಶದ ಹಗುರತೆ ಅಸಹನೀಯವಾಗಿದೆ(ಪುಟ: ಆರು) ಎನ್ನುವ ಬೀಸಾದ ನಿರ್ಣಯ ಹುಟ್ಟಿ; ಈ ಸಂಕಲನವನ್ನು ನಿಷ್ಠುರವಾಗಿಯೂ ನೋಡುವಂತಾಗಿದೆ. ಚುಟುಕ, ಕಿರುಕವಿತೆ, ನಗೆಹನಿ, ಬಗೆಗಿನ ವಿಮರ್ಶೆಯನ್ನು ಹೊರತುಪಡಿಸಿ ಉಳಿದಂತೆ ಆಡಿರುವ ಇಲ್ಲಿನ ಮಾತುಗಳು ಕನ್ನಡ ಅಧ್ಯಾಪಕರು ನವ್ಯ ಸಾಹಿತ್ಯದ ಮಿತಿಯನ್ನು ಗುರುತಿಸಲು ಕಂಠಪಾಠ ಮಾಡಿದ ಉಲ್ಲೇಖಗಳಾಗಿವೆ.

ಪ್ರಸ್ತುತ ಕನ್ನಡ ಕಾವ್ಯವನ್ನು ಏಕರೂಪದ ಪರಕದಲ್ಲಿ ಮಾತ್ರವೇ ನೋಡಬಯಸುವ ಈ ಮುನ್ನುಡಿಯ ಹೆಬ್ಬಯಕೆಗೆ ಒಂದು ಮಿತಿಯಿದೆ. ಏಕರೂಪತೆಯನ್ನು ಒಗ್ಗಿಸಿಕೊಂಡು ಬರೆದು ಅವಸಾನಗೊಂಡ ಬಂಡಾಯ ಕಾವ್ಯದ ಚಿತ್ರಪಟ ನಮ್ಮ ಬೆನ್ನಿಗಿದೆ.

ಎಚ್.ಎಸ್. ರಾಘವೇಂದ್ರರಾವ್‌ರವರ ಸುದೀರ್ಘವಾದ ಹಿನ್ನುಡಿ ಈ ಕವಿತೆಗಳ ಅಂತರಂಗವನ್ನು ಮುಟ್ಟಿದೆ.

ಗೂಡು ಕಟ್ಟಬಹುದೇ?

ಈ ಹಿಂದೆ (೨೦೦೦) ವಿಕ್ರಮ ವಿಸಾಜಿಯವರು 'ತಮಾಷ' ಎನ್ನುವ ಕವನ ಸಂಕಲನ ಪ್ರಕಟಿಸಿದ್ದರು. ಇದೀಗ 'ಗೂಡು ಕಟ್ಟುವ ಚಿತ್ರ' ಎನ್ನುವ ಮತ್ತೊಂದು ಕವನ ಸಂಕಲನ ಓದುಗರ ಮುಂದಿದೆ. ವರ್ತಮಾನದಲ್ಲಿ ನಾವು ಕೂಡಿ ಕಟ್ಟಿಕೊಳ್ಳಬೇಕಾದ ಒಂದು ಪ್ರತಿಮೆಯಾಗಿ 'ಗೂಡು ಕಟ್ಟುವ ಚಿತ್ರ'ವಿದೆ. ಇಲ್ಲಿನ ಕವಿತೆಗಳ ಒಡಲಲ್ಲಿ ಸದ್ಯದ ಒಂದು ಸಮಾಜದ ವಿಮರ್ಶೆಯೂ ತಣ್ಣಗೆ ನಡೆದಿದೆ.

ಪಕ್ಷಿ ಪಕ್ಷಿಗೂ ಆತಂಕವನ್ನು ಬಿತ್ತುತ್ತಿರುವ ಧರ್ಮ, ದೇವರು, ಪ್ರಭುತ್ವ ಶಕ್ತಿಗಳ ಮಧ್ಯೆ ನಿಂತಿರುವ ಕವಿ ಇಲ್ಲಿ ಗೂಡು ಕಟ್ಟುವ ಧ್ಯಾನದಲ್ಲಿದ್ದಾನೆ. ದಿಕ್ಕಾಪಾಲಾಗಿರುವ ಕಡ್ಡಿಗಳನ್ನು ಒಟ್ಟುಗೂಡಿಸಿ ಒಂದು ಗೂಡು ಕಟ್ಟಬಹುದೆ ಎನ್ನುವ ಪ್ರಶ್ನೆ; ಕಟ್ಟಲಾದೀತೆ ಎನ್ನುವ ಆತಂಕ; ಕಟ್ಟಬಹುದು ಎನ್ನುವ ತುಡಿತ ಈ ಸಂಕಲನದ ದ್ರವ್ಯವಾಗಿದೆ.

ಬಿಡಾಕು, ನಡೆನಡೆದು, ಗುಬ್ಬಿ, ಪುರಾಣ, ಕಾಲಕಟ್ಟಳೆ- ಓದುಗನನ್ನು ಕಾಡುವ ಉತ್ತಮ ಕವಿತೆಗಳಾಗಿವೆ.

ನಾನು ಕವಿತೆಯಲ್ಲಿ ನಿರ್ಣಯಗಳನ್ನು
ಕೊಡಲು ಸಾವಿರಾರು ಪದಗಳು ಒತ್ತಾಯಿಸುತ್ತದೆ
ನ್ಯಾಯವನ್ನು ಒದಗಿಸಲು ಒಂದೆರಡು
ಪದಗಳು ಮಾತ್ರ ಕಣ್ಣಂಚಿನಲ್ಲಿ ಬೇಡುತ್ತದೆ.

(ಕಾವ್ಯನ್ಯಾಯ)

ಕಾವ್ಯದ ಒಳ ಎಚ್ಚರವನ್ನು, ಅದು ಮುಟ್ಟಬೇಕಿರುವ ನಿಜದ ನೆಲೆಯನ್ನು ಹೀಗೆ ಕಂಡುಕೊಂಡಿರುವ ಕವಿ; ಈ ಮೂಲಕ ತಮ್ಮ ಕವಿತೆಗಳಿಂದ ಒದಗಿ ಬರಬಹುದಾದ ಒಂದು ಸಣ್ಣ ಸ್ಫೋಟವನ್ನು ಗಮನಕ್ಕೆ ತರುತ್ತಾರೆ.

ಎಂಥ ನೀರಿನ ಅಂಚಿನಲ್ಲೂ ಒಮ್ಮೊಮ್ಮೆ
ಪಾಚಿಗಟ್ಟುತ್ತದೆ- ಮಳೆಗಾಲ ಅದನ್ನು ತೊಳೆಯದೆ ಬಿಡುವುದಿಲ್ಲ
....
ಒಮ್ಮೊಮ್ಮೆ ನಾಲಿಗೆಗಿಂತ ಹಲ್ಲು ಬಲು ಮೃದು
ಎನಿಸುತ್ತದೆ - ಮಾತನಾಡುವ ಉತ್ಸಾಹ ಕಳೆದುಹೋಗುವುದಿಲ್ಲ

(ಬದುಕು)

ಪ್ರತಿ ಕ್ಷಣದ ಆಗುವಿಕೆ ಮತ್ತು ಹುಟ್ಟುವ ಪ್ರಕ್ರಿಯೆಯನ್ನು



ಗೂಡುಕಟ್ಟುವ ಚಿತ್ರಗಳು
ಕವನಸಂಕಲನ
ಲೇಖಕ:
ವಿಕ್ರಮ ವಿಸಾಜಿ
ಪ್ರಕಾಶನ: ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ
ಪುಟಗಳು : ೧೨+೫೦
ಪ್ರಕಟಣಾ ವರ್ಷ : ೨೦೦೬
ಬೆಲೆ : ರೂ. ೩೫

ಒಪ್ಪಿಕೊಂಡು ಬಾಳುವ ಮಾನವ ಮನಃಸ್ಥಿತಿಯೇ ರೂಪಿಸಿದಂತಿದೆ 'ಬದುಕು' ಕವಿತೆ. ಮನುಷ್ಯ ತನ್ನ ಸುತ್ತಣ ಪರಿಸರದಿಂದ, ಸಂಬಂಧಗಳಿಂದ, ಅವಮಾನಗಳಿಂದ ಮನಸ್ಸನ್ನು ತರಚಿಸಿಕೊಳ್ಳುವುದು, ಗಾಯವಾಗುವುದು ನಿರಂತರ ನಡೆಯುತ್ತಲೇ ಇರುತ್ತದೆ. ಹೀಗಿದ್ದಾಗಲೂ ಈ ಬದುಕಿಗೇ ಇರುವ ತಾಳುವ ಶಕ್ತಿಯನ್ನು ಕಾಣಿಸುವ ಕಾರಣವಾಗಿ ಈ ಕವಿತೆ ಮನಸ್ಸಲ್ಲಿ ಉಳಿಯುತ್ತದೆ. ಆದರೂ, ಈ ಬದುಕಿನ ಕುರಿತು, ಅದರ ಒಳ ಸಂಬಂಧದ ಬಗೆಗೆ ಕವಿಗಿರುವ ಬೆರಗೆಂದರೆ,

ಪ್ರತಿ ಬೆರಳಿನ ಕೊನೆಯಲ್ಲಿ ಯಾಕಿರುತ್ತದೊ
ಒಂದು ಉಗುರು
ಉಗುರಿಗೆ ನೀರುಣಿಸುವ ರಕ್ತದ ಸಹನೆ (ನಡೆ ನಡೆದು)

ಬಹಳ ವರ್ಷಗಳಿಂದ ಕವಿತೆಗಳನ್ನು ಬರೆಯುತ್ತ ಬಂದಿರುವ ಈ ಕವಿಯ ಇನ್ನಿತರ ಕವಿತೆಗಳ ಬಗೆಗೂ ಹೇಳಬೇಕಾಗಿದೆ. ದಾರಿ, ವಿದಾಯ, ಕೋಲೆಗಾರರೊಂದಿಗೆ – ಇಂತಹ ಕವಿತೆಗಳನ್ನು ಸಂಕಲನದಲ್ಲಿ ಸೇರಿಸಬೇಕಿತ್ತೆ ಎನ್ನುವ ಪ್ರಶ್ನೆಯನ್ನು ಸ್ವತಃ ಕವಿಯೇ ಕೇಳಿಕೊಂಡಿದ್ದರೆ ಚೆಂದವಿತ್ತು. ಅಂಗುಲಿಮಾಲ, ಕೂಡಲ ಸಂಗಮ, ಇಂತಹವುಗಳನ್ನು ತಂದು ಕೂರಿಸಿರುವುದರಿಂದ ಓದುಗರಿಗೆ ಗೊಂದಲಗಳನ್ನು ಹಂಚಿದಂತಾಗಿದೆ ಅಷ್ಟೆ.

ವಿನಾಕಾರಣ ಕವಿತೆಯ ಸಾಲಿನ ಮುಂದೆ ಚುಕ್ಕಿಗಳನ್ನಿಟ್ಟು ಏನೋ ಘನವಾದ ಅರ್ಥವಿದೆ ಎಂಬ ಹುಸಿ ಭಾವ ಬಿತ್ತುವ (ಕನ್ನಡಿ, ದಾರಿ, ಮಿಂಚು, ಭರವಸೆಯಿಂದ ನಮಗೆ) ಇವು ಈ ಕವಿಯ ಉಡಾಫೆಗೆ ಉದಾಹರಣೆ. ಗೂಡು ಕಟ್ಟುವ ಚಿತ್ರ ಸಂಕಲನಕ್ಕೆ ಎಸ್.ಕೆ. ಹನುಮಂತಯ್ಯ ಮುನ್ನುಡಿ ಬರೆದಿದ್ದಾರೆ. ಬರೆಯುವಾಗ ನಾನು ಕವಿ ಎನ್ನುವ ಕಟ್ಟೆಚ್ಚರ ಇರುವುದರಿಂದ ಆರಂಭದ ಏಳು ಭಾಗಗಳು ಹನುಮಂತಯ್ಯನವರ ಸ್ವಕವಿತನದ ಸ್ವಪ್ರತಿಷ್ಠೆಯ ರೇಖುಗಳಂತೆ ಕಾಣಿಸುತ್ತದೆ. ಗಮನಿಸಬೇಕಾದ ಸಂಗತಿಯೆಂದರೆ, ಕವಿತೆಗಳಿಗೆ ಪೀಠಿಕಾರೂಪವಾಗಿ ಎಸ್.ಕೆ. ಹನುಮಂತಯ್ಯ ಪ್ರಸ್ತಾಪಿಸಿರುವ ಎರಡು ಮುಖ್ಯ ಅಂಗಳಿವೆ. ಅದು ಹೀಗಿದೆ –

'ಶ್ರೇಷ್ಠ ಹಾಗೂ ಶಾಶ್ವತ ಭಾಷೆಯ ಬಗ್ಗೆ ಭಾವುಕರಾಗಿ ಮಾತನಾಡುವವರು, ತತ್ಕಾಲದ ಹಾಗೂ ವೈಯಕ್ತಿಕ ಯಾತನೆಗೆ ವಿಮುಖರಾಗುತ್ತಾರೆ. ಇಂಥವರಿಗೆ ಕ್ರಾಂತಿಕಾರಿ ಭಾಷೆ ಪಥ್ಯವಾಗುತ್ತದೆ. ಭಾಷೆಯ ಸಾಮಾಜಿಕ ಚಳುವಳಿಯ ಭಾಗವೆಂದು ಭಾವಿಸುವವರು ತತ್ಕಾಲದ ಕ್ರಾಂತಿಯ ಸತ್ಯ, ಸತ್ವಗಳನ್ನು ಸಾರ್ವಕಾಲಿಕವೆಂದೇ ಭಾವಿಸುತ್ತಾರೆ. ಈ ಎರಡೂ ನೆಲೆಯ ಬರಹಗಾರರು ಇಂದು ನಮ್ಮ ಮುಂದೆ ಬರೆಯುತ್ತಿದ್ದಾರೆ. ನನಗೆ ಎರಡನೇ ನೆಲೆಯವರು ಇಷ್ಟ.' (ಪುಟ ೭)

ಹನುಮಂತಯ್ಯನವರು ಇಲ್ಲಿ ಮುಖ್ಯವಾಗಿ ಕೇಳಿಕೊಳ್ಳಬೇಕಾದ ಪ್ರಶ್ನೆಯೊಂದು ಎದುರಾಗುತ್ತದೆ. ಕಾವ್ಯದಲ್ಲಿ ಭಾಷೆಯನ್ನು ಸಾಮಾಜಿಕ ಚಳವಳಿಯ ಭಾಗವೆಂದೇ ಭಾವಿಸಿ, ಬಳಸಿ ಪ್ರಭುತ್ವಕ್ಕೆ ಪುಸ್ತಕವನರ್ಪಿಸಿ, ಪ್ರಭುತ್ವದ ಪಂಗಿನಲ್ಲಿಯೇ ಕೈಕಾಲು ಬಡಿಯುತ್ತಿರುವ ಬೂಟಾಟಿಕೆಯ ಕವಿ ಸಿದ್ದಲಿಂಗಯ್ಯನವರು - ಅವರ ಕಾವ್ಯವೂ ಕಣ್ಣ ಮುಂದೆ ಇದೆಯಲ್ಲ. ಇದಕ್ಕೆ ಏನು ಮಾಡುವುದು? ಇದು ಒತ್ತಟ್ಟಿಗಿರಲಿ.

ಕ್ರಾಂತಿಯ ಭಾಷೆಯೇ ಮಾನದಂಡವಾಗುವುದಾದರೆ ಕಾವ್ಯಕ್ಕೆ, ಈ ತರಹದಲ್ಲಿ ಬಳಸದೆಯೂ ಒಟ್ಟಂದದಲ್ಲಿ ಸಮಾಜಮುಖಿಯಾಗಿ ತೆತ್ತುಕೊಂಡಿರುವ ಚಂದ್ರಶೇಖರ ಕಂಬಾರರ ಕಾವ್ಯವನ್ನೋ ಅಥವಾ ಲಕ್ಷ್ಮೀಪತಿ ಕೋಲಾರರ ಕಾವ್ಯಕ್ಕೆ ಏನೂ ಅರ್ಥ ಇಲ್ಲವೇ?

ಎರಡು ನೆಲೆಯ ಬರಹಗಾರರು ಎಂದು ಗೆರೆ ಕೊರೆಯುವ ಮುನ್ನ ಎನ್.ಕೆ.ಯವರು ಯೋಚಿಸಬೇಕೆನಿಸುತ್ತದೆ. ಕ್ರಾಂತಿಕಾರರೆಲ್ಲ ಪ್ರಭುತ್ವದ ಕೈಗಳಿಗೆ ಹೊಳೆಯುವ ಉಂಗುರಗಳಾಗಿ ಪರಿವರ್ತನೆಯಾಗುತ್ತಿರುವ ದಿನಗಳಿವು. ಹೀಗಿರುವಾಗ ಇಂತಹ ದ್ವೀಪದಂತಹ ಆಲೋಚನಾಕ್ರಮವನ್ನು ಮೀರುವ ಪ್ರಯತ್ನ ಪ್ರಾಮಾಣಿಕವಾಗಿ ಆಗಬೇಕಾಗಿದೆ. ಏಕೆಂದರೆ, ಮನುಷ್ಯ ಕೇಂದ್ರವಾಗಿ ನಿಂತು ಮಾನವೀಯವಾಗುವ ನಿಟ್ಟಿನಲ್ಲಿ ಅನೇಕ ಕನ್ನಡ ಕವಿತೆಗಳು ನಮ್ಮ ಪಾಲಿಗಿದೆ.

ಭಾವರಚನೆಯ ಮಾಯಾಪೆಟ್ಟಿಗೆ



ಮಾಯಾಪೆಟ್ಟಿಗೆ
ಕವನಸಂಕಲನ
ಲೇಖಕ:
ಜ್ಯೋತಿಗುರುಪ್ರಸಾದ್
ಪ್ರಕಾಶನ: ಅಧ್ಯಯನ ಮಂಡಲ, ಬೆಂಗಳೂರು
ಪುಟಗಳು: [illegible]
ಪ್ರಕಟಣಾ ವರ್ಷ: [illegible]
ಬೆಲೆ: ರೂ. ೬೦

'**ಚುಕ್ಕಿ**' ಎನ್ನುವ ಸಂಕಲನವನ್ನು ಪ್ರಕಟಿಸಿರುವ ಜ್ಯೋತಿ ಗುರುಪ್ರಸಾದ್‌ರವರ ಎರಡನೇ ಕವನ ಸಂಕಲನ ಮಾಯಾ ಪೆಟ್ಟಿಗೆ. ಕವಿತೆಗಳಂತೆ ತೋರುವ ಸಂಯಮದ ಭಾವಚರನೆಗಳಿವು. ಒಟ್ಟು ತೊಂಬತ್ತು ಭಾವರಚನೆಗಳನ್ನು ಕವಿತೆಗಳು ಎಂದು ಕರೆಯುವ ಧೈರ್ಯ ಮಾಡಿದ್ದಾರೆ ಕವಿ.

ಕವಿತೆ ಖಂಡಿತ
ಹೇಳುವಂಥದಲ್ಲ
ಬರೆಯುವಂಥದಲ್ಲ
ಬೋಧಿಸುವಂಥದ್ದಂತೂ
ಅಲ್ಲವೇ ಅಲ್ಲ
ಆಗುವಂಥದ್ದು ಮಾತ್ರ
(ಜೀವಮಾನದ ಕರೆ)

ಹೀಗೆ ಕಾವ್ಯ ಕ್ರಿಯಾಕಾರಣವಾದ ಬಗೆಗೆ ಕವಿ ದಾಖಲಿಸುತ್ತಾರಾದರೂ ಈ ಸಂಕಲನದ 'ಕವಿತೆಗಳು' ಕವಿತೆ ಸಂಭವಿಸುವ ಕ್ಷಣದಿಂದ ಆಚೆ ನಿಂತಿವೆ. ಈಚೆಗೆ ಜೀವ ಮಿಡಿತದ ಸದ್ದು, ಹೀಗೆ ಹಾಳೆಯ ಮೇಲೆ... ಸಂಕಲನಗಳು ಪ್ರತಿಮೆ, ರೂಪಕ ಇನ್ನಿತರ ಅಲಂಕಾರಾದಿಗಳನ್ನು ತೋರಿದರೂ, ಕಾಣುವ ಸೃಜನಶೀಲತೆಯಲ್ಲಿ ಕವಿತೆಯನ್ನು ಅನುಭವಕ್ಕೆ ತಂದುಕೊಟ್ಟಿರುವ ಪ್ರಯತ್ನ ಕಣ್ಣ ಮುಂದಿವೆ. ಇದಕ್ಕೆ ಭಿನ್ನವಾಗಿ ಕೆ.ಪಿ. ಸುರೇಶರ ಪದ್ಯಗಳು ಪ್ರಾಣಿ ಕೇಂದ್ರಿತವಾಗಿದ್ದೂ ಮನುಷ್ಯ ಸ್ವಭಾವ-ಸಂಬಂಧಗಳನ್ನು ಅಖಂಡವಾಗಿ ಹಿಡಿಯಲು ಪ್ರಯತ್ನಿಸಿರುವ ಉದಾಹರಣೆಯೂ ಇದೆ. ಇವುಗಳೆಲ್ಲವನ್ನೂ ಮರೆತು

'ಮಾಯಾಪೆಟ್ಟಿಗೆ'ಯನ್ನು ಸುಮ್ಮನೆ ಓದುತ್ತ ಹೋದರೂ ಒಂದು ಕಾವ್ಯ ಪ್ರಯತ್ನ ನಡೆದಿದೆ ಎಂದು ಅನ್ನಿಸುವುದಿಲ್ಲ. ಕವಿಗೆ ಇಲ್ಲಿ ಭಾವನೆಗಳನ್ನು ಪ್ರಕಟಿಸುವುದಷ್ಟೇ ಮುಖ್ಯವಾಗಿದೆ.

ಇಂಥದೊಂದು ಸಂಕಲನಕ್ಕೆ ಯು.ಆರ್. ಅನಂತಮೂರ್ತಿಯವರು ಬರೆದಿರುವ ಮುನ್ನುಡಿ ಭಾವರಚನೆಗೂ, ಕವಿತೆಗೂ ನಡುವೆ ಇರುವ ವ್ಯತ್ಯಾಸದ ಸಣ್ಣ ಪ್ರಶ್ನೆಯನ್ನು ಕೇಳಿಕೊಳ್ಳದೆ ಕವಿಗೆ ಏಣಿಯಾಗಲು ಹೋಗಿ ಅಧ್ವಾನವಾಗಿದೆ. ಭಾವ ರಚನೆಯ 'ಸಾಮಾನ್ಯ ಚಿತ್ರಕ್ಕೆ ಸುವರ್ಣ ಚೌಕಟ್ಟ'ನ್ನು ಹಾಕಿಸಿರುವುದನ್ನು ಗಮನಿಸಿದಾಗ, ಬರೆಹದ ಪದಾರ್ಥಕ್ಕಿಂತ ಕವಿಯೇ 'ಶೋ-ಪೀಸ್' ಆಗುವ ಧಾವಂತವಿಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

ಆರ್. ಸುಧೀಂದ್ರಕುಮಾರ್.

ಮಣ್ಣಿನವಾಸನೆ ಉಳಿಸಿಕೊಂಡ 'ಗೋಡೆಗೆ ಬರೆದ ನವಿಲು'

ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರವಾದ ಸಣ್ಣಕತೆ ಕಾಲದಿಂದ ಕಾಲಕ್ಕೆ ತನ್ನೊಳಗಿನ ಆಂತರಿಕ ಶಿಸ್ತನ್ನು ಬದಲಿಸಿಕೊಳ್ಳದೆಯೂ ಮೇಲ್ನೋಟದ ಬದಲಾವಣೆಗಳಿಗೆ ಪಕ್ಕಾಗುತ್ತಲೇ ಬಂದಿದೆ. ಆಧುನಿಕ ಕನ್ನಡ ಕಥಾ ಜಗತ್ತಂತೂ ವರ್ತಮಾನದ ಬದುಕಿನ ಎಲ್ಲ ಮುಖಗಳನ್ನು ಒಳಗೊಳ್ಳುತ್ತಲೇ ಸ್ಥಿತ್ಯಂತರದ ಸಾಕ್ಷಿಯಾಗಿ ದಾಖಲಾಗುತ್ತಲೇ ಇದೆ. ಒಂದು ಸಿದ್ಧ ಚೌಕಟ್ಟನ್ನು 'ಕತೆ' ಇರಲೇಬೇಕೆಂಬ ನಿಯಮವನ್ನೂ ಮೀರಿ ಈ ಹೊತ್ತಿನ ಕಥೆಗಾರರು ಬರೆಯತೊಡಗಿದ್ದಾರೆ. ಬಂಡಾಯ ಮತ್ತು ಹೋರಾಟದ ಹಾದಿಗಳನ್ನು ಮೇಲ್ನೋಟಕ್ಕೆ ಬಿಟ್ಟುಕೊಟ್ಟಂತಿದ್ದರೂ, ಬದುಕಿನ ಒಂದು ಸಣ್ಣ ಘಟನೆಯನ್ನೂ ವಿಸ್ತರಿಸಿ ಅದನ್ನು ಮಾನವೀಯ ನೆಲೆಯ ಮೂಲಕ ಕತೆಕಟ್ಟಿಕೊಡುವ ಪ್ರಯತ್ನ ಧಾಳಾಗಿ ಕಾಣಸಿಗುತ್ತಿದೆ.



ಗೋಡೆಗೆ ಬರೆದ ನವಿಲು
ಕಥಾಸಂಕಲನ
ಲೇಖಕ:
ಸಂದೀಪನಾಯಕ್
ಪ್ರಕಾಶನ: **ಛಂದ ಪುಸ್ತಕ,** ಬೆಂಗಳೂರು
ಪುಟಗಳು : ೧೨೮
ಪ್ರಕಟಣಾ ವರ್ಷ : ೨೦೦೯
ಬೆಲೆ : **ರೂ. ೬೦**

ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ಸಂದೀಪ ನಾಯಕರ 'ಗೋಡೆಗೆ ಬರೆದ ನವಿಲು'. ೨೦೦೯ನೇ ಸಾಲಿನ ಛಂದ ಪುಸ್ತಕ ಬಹುಮಾನ ಪಡೆದ ಈ ಕಥಾಸಂಕಲನದಲ್ಲಿ ಇರುವ ಒಂದು ಡಜನ್ ಕತೆಗಳೆಲ್ಲವೂ ಇದುವರೆಗೂ ನಾವು ಕತೆ ಎಂದು ನಂಬಿರುವ ರೀತಿಯಿಂದ ಭಿನ್ನವಾಗಿ, ಆದರೆ ಬದುಕಿನ ಸಣ್ಣ ಸಣ್ಣ ಘಟನೆಗಳನ್ನೇ ಮೂಲವಾಗಿಟ್ಟುಕೊಂಡು ಹೆಣೆದಿರುವ ಬದುಕಿನ ಮೌಲ್ಯ ಮಾಪನದಂತಿವೆ. ಇಲ್ಲಿನ ಎಲ್ಲ ಕಥೆಗಳ ಮೂಲ ಉತ್ತರಕನ್ನಡದ ನೆಲ ಮತ್ತು ಅಲ್ಲಿನ ಸಂಸ್ಕೃತಿಗಳನ್ನು ಆಧರಿಸಿದುದೇ ಆಗಿರುವುದೂ ವಿಶೇಷವಾಗಿದೆ. ಸಂಕಲನದ ಕತೆಗಳ ಕೆಲಪಾತ್ರಗಳು ಹಲವು ಕತೆಗಳಲ್ಲಿ

ಮತ್ತೆ ಮತ್ತೆ ಕಾಣಿಸಿಕೊಳ್ಳುವುದೂ ಒಂದು ಬಗೆಯಲ್ಲಿ ಕತೆಗಾರ ಆ ಮೂಲಕ ಹಳೆಯ ಕತೆಗಳ ಕೊಂಡಿಯನ್ನು ಬೇರೆ ಬೇರೆ ಕತೆಗಳ ಕೇಂದ್ರ ಪಾತ್ರಗಳನ್ನು ವಿಮರ್ಶಿಸಲು, ಉದ್ದೀಪಿಸಲು ಬಳಸಿಕೊಂಡ ತಂತ್ರವೆಂದೇ ನನಗನಿಸುತ್ತಿದೆ. ನಗರ ಕೇಂದ್ರಿತ ಸಮಸ್ಯೆಗಳಿಲ್ಲದಿದ್ದರೂ ಇಲ್ಲಿನ ಬಹುತೇಕ ಕತೆಗಳ ಪಾತ್ರಗಳು ನಗರದಲ್ಲಿದ್ದೂ ಊರಿನ ಧ್ಯಾನದಲ್ಲಿ ನಿರತವಾಗಿರುವುದು ಮತ್ತು ಒಂದಲ್ಲ ಒಂದು ವಿಧದಿಂದ ಮತ್ತೆ ಊರಿನ ತೆಕ್ಕೆಗೆ ಬೀಳುವುದೂ ನಡೆದಿದೆ. ಜಾತಿಯ ಸಮಸ್ಯೆ, ಪರಿಸರ ಹಾನಿಯ ಎಚ್ಚರ, ಶೋಷಣೆಯೇ ಮುಂತಾದ ಸಾಮಾಜಿಕ ಅನಿಷ್ಟಗಳೂ ಇಲ್ಲಿನ ಕತೆಗಳಲ್ಲಿ ಇದ್ದರೂ ಅವನ್ನು ದೊಡ್ಡ ಭೂತವಾಗಿಸಿ ಅಥವ ಅವುಗಳ ವಿರುದ್ಧದ ಬಂಡಾಯದ ಕೂಗಾಗಲೀ ಇಲ್ಲದಿರುವುದೂ ಗಮನಿಸಬೇಕಾದ ವಿಷಯವೇ ಆಗಿದೆ. ಸಂಯಮ ಮೀರದ ಹದವಾದ ಭಾಷೆ ಇಲ್ಲಿನ ಕತೆಗಳ ಮುಖ್ಯ ಬಂಡವಾಳ. ಕೆಲವೇ ಕೆಲವು ಪಾತ್ರಗಳಲ್ಲೇ ಕತೆಯನ್ನು ಬೆಳೆಸಿ ಮುಗಿಸುವ ರೀತಿ ಕೂಡ ಗಮನಿಸಬೇಕಾದ ಸಂಗತಿಯಾಗಿದೆ. ಏಕೆಂದರೆ ಸಣ್ಣಕತೆಯೊಂದರಲ್ಲೇ ಕಾದಂಬರಿಗಾಗುವಷ್ಟು ಪಾತ್ರಗಳನ್ನು ಸೃಷ್ಟಿಸಿ ಅವುಗಳ ಪೋಷಣೆಗೆ ಗಮನ ಕೊಡದೇ ಬರೀ ಉದ್ದೋಉದ್ದದ ಕತೆಗಳನ್ನು ಬರೆಯುತ್ತಿರುವವರ ನಡುವೆ ಸಂದೀಪ ನಾಯಕರ ಕತೆಗಳೆಲ್ಲವೂ ಹೆಚ್ಚೆಂದರೆ ಹತ್ತು ಪುಟಗಳ ಮಿತಿಯಲ್ಲೇ ಮುಗಿದುಬಿಡುವುದೂ ಮತ್ತೊಂದು ಅಂಶ. ಉದಾಹರಣೆಗೆ 'ಬಾಗಿಲ ಮುಂದೆ' ಎನ್ನುವ ಕತೆಯಂತೂ ಶುರುವಾಗುವ ಮೊದಲೇ ಮುಗಿದುಬಿಡುತ್ತದೆ. ಓದುಗನನ್ನು ಥಟ್ಟನೆ, ಹಠಾತ್ತನೆ ಸರಳ ಸಂಗತಿಯ ಅನಾವರಣದ ಮೂಲಕ ಮಿಡಿಗೊಳಿಸಬಹುದೆಂಬ ಲೆಕ್ಕಾಚಾರ ಇಲ್ಲೆಲ್ಲ ಕೆಲಸ ಮಾಡಿದಂತಿದೆ.

ಸ್ವಗತದ ನಿರೂಪಣೆ ಮತ್ತು ಉತ್ತಮಪುರುಷದ ಗೊಂದಲಗಳಿಲ್ಲದೇ ಕತೆಗಳನ್ನು ಕಟ್ಟುವುದರಲ್ಲಿ ಕತೆಗಾರರು ಗೆದ್ದಿದ್ದಾರಾದರೂ ಒಂದು ಓದಿನ ನಂತರ ಮರು ಓದು ಬಯಸುವ ವಸ್ತುಗಳು ಇಲ್ಲಿನ ಕತೆಗಳಲ್ಲಿದ್ದರೂ ತೀರ ಸರಳೀಕೃತ ಕಥನ ವಿಧಾನದಿಂದಾಗಿ ಆ ಅವಕಾಶವನ್ನು ಕತೆಗಾರರೇ ಕಳೆದು ಕೊಂಡಿದ್ದಾರೆ. 'ಬಾಗಿಲ ಮುಂದೆ', ಕಂಡಷ್ಟೇ ಆಕಾಶ ಮತ್ತು ಸಖಿ ಕತೆಗಳು ಇನ್ನೂ ವಿಸ್ತರಿಸಬಹುದಾದ ಅವಕಾಶವನ್ನು ಕಳೆದುಕೊಂಡ ಕಾರಣಕ್ಕೆ ಬರಿಯ ತುಟಿತುದಿಯ ಅನುಕಂಪವನ್ನಷ್ಟೇ ಹುಟ್ಟಿಸುತ್ತವೆ. ಪ್ರಾಯಶಃ ಕತೆಗಾರರು ಉದ್ದನೆಯ ಕತೆಗಳನ್ನು ಓದುಗರು ಇಷ್ಟಪಡಲಾರರೆಂಬ ತಮ್ಮದೇ ನಿರ್ಧಾರದಲ್ಲಿ ಎಡವಿದರೇನೋ ಅನ್ನಿಸುತ್ತದೆ. ಈ ಮೂರೂ ಕತೆಗಳೂ ಸ್ವಲ್ಪ ಪರಿಶ್ರಮ ಪಟ್ಟಿದ್ದರೆ ಬಹಳ ಕಾಲ ಕಾಡುವ ವಸ್ತುವನ್ನಿಟ್ಟುಕೊಂಡಿದ್ದೂ ಅವಸರದಲ್ಲಿ ಮುಗಿಸಿಬಿಟ್ಟ ಕಾರಣ ಬರಿಯ ಹಳಹಳಿಕೆಗಳಾಗೇ ಉಳಿದುಬಿಡುತ್ತವೆ. 'ಆನೆ ಸಾಕಿದ ಮನೆಗೆ ಎರಡು ಹೂ ದಂಡೆ' ಇಂಥ ಮಿತಿಗಳನ್ನು ಮೀರಿದ ಕಾರಣ ಸಂಕಲನದ ಮುಖ್ಯ ಕತೆಗಳಲ್ಲೊಂದಾಗಿದೆ. 'ಕರೆಯ ಮೋಹನ' ಮತ್ತು 'ಮರೆತು ಹೋದ ಒಂದು ಸಂಬಂಧ'ದ ವೆಂಕಟಣ್ಣ ವರ್ತಮಾನದಲ್ಲಿ ಚಲಾವಣೆ ಕಳಕೊಂಡ ನಾಣ್ಯಗಳಾಗಿ ಕಾಡುತ್ತಾರೆ. ಹಾಗೆಯೇ ಹಿರಿಯರು ಆಧುನಿಕ ಜೀವನದಲ್ಲಿ ಹೇಗೆ ಮೂಲೆ ಗುಂಪಾಗುತ್ತಿದ್ದಾರೆ ಮತ್ತವರ ಪ್ರಸ್ತುತತೆಯನ್ನೇ ಕಳಕೊಳ್ಳುತ್ತಿದ್ದಾರೆ ಅನ್ನುವುದನ್ನೂ ದಟ್ಟವಾಗಿ ದಾಖಲಿಸಿವೆ. 'ಉರುಳಿತೊಂದು ಮರ' ಕತೆಗಾರರು ತಮಗೂ ಪರಿಸರ ಪ್ರಜ್ಞೆ ಕಾಡುತ್ತಿದೆ ಎನ್ನುವ ಕಾರಣಕ್ಕೆ ಬರೆದಂತೆ ಕಾಣುತ್ತದೆ. ಉಳಿದ ಕತೆಗಳಲ್ಲಿರುವ 'ಓಟ' ಮತ್ತು ಹಿಡಿತ ಸಿಗದ ಕಾರಣ ಹಾಗೂ ನಾಯಕನನ್ನು ಉದ್ದಾಮನನ್ನಾಗಿ ಚಿತ್ರಿಸಲೇಬೇಕೆಂಬ ಹಟ ಇಲ್ಲಿ ಕೆಲಸ ಮಾಡಿರುವ ಕಾರಣ 'ಉರುಳಿತೊಂದು ಕತೆ'ಯಾಗಿಬಿಟ್ಟಿದೆ. 'ಇಲ್ಲಿ ಬಂದವು ಸುಮ್ಮನೆ' ಮನುಷ್ಯನ ಆಸೆಗಳ ಮತ್ತು ಲಂಪಟತನದ ಅನಾವರಣವಾಗಿರುವುದರಿಂದ ಹಾಗೂ ಒಂದಲ್ಲ ಒಂದು ಕಾರಣಕ್ಕೆ ಬೇಸ್ತು ಬೀಳಲೇಬೇಕಾದ ಅನಿವಾರ್ಯತೆಗಳು ಎಲ್ಲರ ಬದುಕಿನಲ್ಲೂ ಘಟಿಸುವುದರಿಂದ ಓದುವಾಗ ಹಾಯೆನ್ನಿಸುತ್ತದೆ. ಅವರಿವರ ನಡುವಿನ ಆಟದ ದಾಳವಾದ ಮೋಹನನಂಥ ಪಾತ್ರಗಳನ್ನು

ಕತೆಗಾರರು ಏಕೋ ಪೋಷಿಸಲು ಮನಸ್ಸು ಮಾಡದ್ದರಿಂದ ಪಾಪ ಈ ಕತೆಯ ಮೋಹನ ಮತ್ತು 'ಒಂಭತ್ತು, ಎಂಟು, ಎಂಟು' ಕತೆಯ ಮಂಕಾಳಜ್ಜಿ ಬಡವಾಗಿದ್ದಾರೆ. ಹಾಗೆ ನೋಡಿದರೆ ಹೇಳಹೊರಟದ್ದು ಒಂದಾದರೆ ಆಗುವುದು ಮತ್ತೊಂದಾಗುವ ಕಾರಣದಿಂದಾಗಿ 'ಒಂಭತ್ತು, ಎಂಟು, ಎಂಟು' ಮತ್ತು 'ಬೊಂಬೆಗೊಂದು ಸೀರೆ' ಗಮನ ಸೆಳೆಯುತ್ತವೆ. ದಾರಿ ತಪ್ಪಿದ ಅಕ್ಕನ ಹುಡುಕಾಟದಲ್ಲಿನ ದೇವಿ ಮತ್ತು ಮನೆ ಬಿಟ್ಟು ಓಡಿ ಬಂದ ಶರಣ್ ಕಡೆಗೂ ವ್ಯವಸ್ಥೆಯ ಕೈಯಲ್ಲಿನ ಗೊಂಬೆಗಳಾಗುತ್ತಾರೆ. ಮೂಲತಃ ಅಲ್ಪತೃಪ್ತಿಯ ಈ ಎರಡೂ ಪಾತ್ರಗಳನ್ನೂ ಅವರ ಯತ್ನದಲ್ಲಿ ಉತ್ತೀರ್ಣರನ್ನಾಗಿಸದ ಕತೆಗಾರರು ಆ ಕಾರಣಕ್ಕೇ ಮೆಚ್ಚುಗೆ ಗಳಿಸುತ್ತಾರೆ. ಇದಕ್ಕೆ ತದ್ವಿರುದ್ಧವಾಗಿ 'ಇನ್ನೊಂದೇ ಕಥೆ'ಯ ಶಶಕ್ಕ ಮತ್ತು 'ನಿನ್ನಲ್ಲೇ ಇರಲಿ'ಯ ಮುಕುಂದರನ್ನು ದಡ ಸೇರಿಸುವ ಕತೆಗಾರರು ಆಶ್ಚರ್ಯ ಹುಟ್ಟಿಸುತ್ತಾರೆ.

ವ್ಯಕ್ತಿಯ ಒಳತುಮುಲಗಳನ್ನು, ಆ ವ್ಯಕ್ತಿ ಲೌಕಿಕದ ವ್ಯವಹಾರಗಳಲ್ಲಿ ಕಾಯ್ದುಕೊಳ್ಳಬೇಕಾದ ಎಚ್ಚರವನ್ನೂ ಜೊತೆಜೊತೆಯಾಗಿ ನಿರ್ವಹಿಸುವುದು ಕತೆಗಾರರಿಂದ ಸಾಧ್ಯವಾಗಿರುವುದು ಒಟ್ಟೂ ಸಂಕಲನದ ಧನಾತ್ಮಕ ಯತ್ನವಾಗಿದೆ. ಆದರೆ ದುರಂತಗಳಲ್ಲೇ ಅಂತ್ಯವಾಗುವ ಇಲ್ಲಿನ ಬಹುತೇಕ ಕತೆಗಳು ನಿರಾಶಾವಾದವನ್ನು ಪುಷ್ಟೀಕರಿಸುವುದು ಅಷ್ಟೇ ಋಣಾತ್ಮಕವಾಗಿದೆ. ನಿರಾಶೆ, ವಿಷಾದ, ಸೋಲುಗಳಲ್ಲೇ ಉಳಿಯುವ ಇಲ್ಲಿನ ಬಹುತೇಕ ಪಾತ್ರಗಳು ಇರುವುದೇ ಸೀಮಿತ ಚೌಕಟ್ಟಿನ ಸರಳ ಸಮಸ್ಯೆಗಳಲ್ಲಿ. ಈ ಪಾತ್ರಗಳು ಸೀಮಿತ ಪ್ರದೇಶದ ಸರಳ ಸಮಸ್ಯೆಗಳಲ್ಲಿ ಒದ್ದಾಡುತ್ತಿದ್ದರೂ ಅವನ್ನು ಉತ್ಪ್ರೇಕ್ಷಿಸದ ಕಥನ ಕ್ರಮ ಮತ್ತು ಅಂಥ ಸನ್ನಿವೇಶ ನಿರ್ಮಾಣದ ಕಾರಣ ಸಣ್ಣ ಚೌಕಟ್ಟಿನಲ್ಲಿ ಜಡಿಸಿಟ್ಟ ಚಿತ್ರಗಳಾಗಿವೆ. ಇಲ್ಲಿನ ಎಲ್ಲ ಕತೆಗಳ ಪಾತ್ರಗಳೂ ಅರೆಶಿಕ್ಷಿತರಾಗಿರುವುದು ಮತ್ತು ಕೆಳಸ್ತರದ ಸಮಾಜದಿಂದ ಬಂದವರಾಗಿರುವುದೂ ಸಂಕಲನದ ವಿಶೇಷಗಳಲ್ಲೊಂದಾಗಿದೆ. ಜೊತೆಗೇ ಬಲಿಷ್ಠ ಮುಜುಗರದ ಕಾರಣದಿಂದಾಗಿ ವಿನಮ್ರರಾಂತಿರಬೇಕಾದ ಪಾತ್ರಗಳ ಅನಿವಾರ್ಯತೆಯನ್ನೂ ಚಿತ್ರಿಸಿದೆ.

'ಗೋಡೆಗೆ ಬರೆದ ನವಿಲು' ಹೆಸರಿನ ಕತೆ ಸಂಕಲನದಲ್ಲಿಲ್ಲದೇ ಹೋದರೂ ಒಟ್ಟು ಸಂಕಲನ ಮನೆಯ ಮುಂದಿನ ಗೋಡೆಯ ಅಲಂಕಾರಕ್ಕೆ ಬರೆದ ನವಿಲಿನ ಚಿತ್ರದ ಹಾಗೆ ಕತೆಗಾರರು ಅವರ ಕುಶಲ ಕತೆಗಾರಿಕೆಗೆ ತಾವೇ ಕೊಟ್ಟುಕೊಂಡ ಹೆಸರಾಗಿದೆ. 'ಅಗಣಿತ ಚಹರೆ' ಸಂದೀಪ ನಾಯಕರ ಮೊದಲ ಪ್ರಕಟಿತ ಕವನ ಸಂಕಲನ. ಕವಿಯಾಗಿ ಅವರಿಗಿದ್ದ ಭರವಸೆಗಳು ಕತೆಗಾರರಾದ ಕೂಡಲೇ ಏಕೆ ಹೊರಟುಹೋದವೋ ತಿಳಿಯದಾಗಿದೆ. ಆದರೆ ಕವಿತೆಗಳ ಜೊತೆಯಲ್ಲಿದ್ದ ಯಕ್ಷಗಾನ, ತಾಜಾ ಮೀನು, ಬಸ್ ಸ್ಟ್ಯಾಂಡು, ಬಂಡಿಹಬ್ಬ ಇಲ್ಲಿನ ಕತೆಗಳಿಗೂ ವಿಸ್ತರಿಸಿರುವ ಕಾರಣಕ್ಕೆ 'ಮಣ್ಣಿನ ವಾಸನೆ' ಉಳಿಸಿಕೊಂಡ ಕತೆಗಾರರಾಗಿಯೂ ಉಳಿಯುತ್ತಾರೆ.

– ಡಿ.ಎಸ್.ರಾಮಸ್ವಾಮಿ

ಪ್ರತಿಕ್ರಿಯೆ



೮೧ನೆಯ ಸಂಚಯ ಬಂದಿದೆ. 'ಹಿಂದ್ ಸ್ವರಾಜ್' ಅನ್ನು ನೆನಪಿನಿಂದ ವಿವೇಚಿಸುವ ಲೇಖನಗಳು, ಈ ನವ್ಯೋತ್ತರ ಕಾಲದ ಸಾರ್ವಜನಿಕ ಜೀವನ, ನೈತಿಕ ನೆಲೆಗಳ ಮೇಲೆ ನಿಂತು, ಸರ್ವೋದಯ ಪ್ರಜ್ಞೆಯ ಹಾದಿಗುಂಟ ಮುನ್ನಡೆಯುವುದಕ್ಕೆ ದಿಕ್ಸೂಚಿಯಾಗಿವೆ. ಕನ್ನಡದಲ್ಲಿ ಗಾಂಧೀ ಸಾಹಿತ್ಯ ಅಪರೂಪ. ಅನುವಾದಗಳೇ ಜಾಸ್ತಿ. ಗಾಂಧಿಯ ಸತ್ಯಾಗ್ರಹ, ಭಾಷಣಗಳು, ಗಾಂಧಿಯ ಪತ್ರಿಕಾ ಅಂಕಣಗಳು– ಸಿದ್ದವನಹಳ್ಳಿ, ಗೊರೂರು, ಶಾ.ದಿ., ನಾರಾಯಣರಾವ್, ದಿವಾಕರ, ಹರ್ಡೀಕರ್ ಮುಂತಾದವರಿಂದ ಒಂದು ಕಾಲಕ್ಕೆ ಅನುವಾದವಾಗಿ, ಟಿಪ್ಪಣಿ–ವ್ಯಾಖ್ಯಾನ ರೂಪವಾಗಿ ಬಂದಿವೆ. ಆದರೆ ಗಾಂಧಿಯನ್ನು ಅರ್ಥೈಸುವ ಅನ್ವಯಿಸಿ ಹೇಳುವ ವಿಚಾರಗಳು ಬಂದುದು ಈಚೆಗಿನ ಕಾಲದಲ್ಲಿ. ಗಾಂಧಿ ಪ್ರೇರಿತ ಲೋಹಿಯ ವಿಚಾರಗಳು ಕನ್ನಡದಲ್ಲಿ ಅನುವಾದಗೊಂಡಿವೆ. ಅವುಗಳ ಮರುಓದು ಸಾಧ್ಯವಾಗಬೇಕಿದೆ. ಅದಕ್ಕೆ ಮುಂಚೆ, ಗಾಂಧಿಯ 'ಹಿಂದ್ ಸ್ವರಾಜ್' ಮೆಲುಕು ಹಾಕಬೇಕಾದ ಗ್ರಂಥ. ಅಧಿಕಾರ ರಾಜಕಾರಣದಲ್ಲಿ ಮೈಮನಸು ಮರೆತಿರುವ ಇಂದಿನ ಯಾವನೇ ಒಬ್ಬನಿಗೆ ಗಾಂಧಿ ಕಾಡಿಸುತ್ತಿಲ್ಲ. ವರುಣ, ರಾಹುಲರಂಥ 'ನಾಳಿನ ನೇತಾರ'ರಿಗಂತೂ ಗಾಂಧಿ ಅಪಥ್ಯ! ಗಾಂಧೀವಾದಕ್ಕೆ ಎದುರಾಗಿ ಯಾವ ಒಂದು ಚಳವಳಿ ಯಾವತ್ತೂ ಆಗಲಿಲ್ಲ; ಎಡಪಂಥೀಯರು, ಆರೆಸ್ಸೆಸ್ ಅನ್ನು ಮಾತ್ರ ವಿರೋಧಿಸುತ್ತ ಶಕ್ತಿ ಹರಣ ಮಾಡಿಕೊಂಡರು. ಆರೆಸ್ಸೆಸ್‌ನ ಉಸಾಬರಿಗೇ ಹೋಗದ ಲೋಹಿಯಾ, ಗಾಂಧೀವಾದದ ಮುಮುಕ್ಷುವನ್ನು ಕಾಣಿಸಿದರು; ಆದರೆ ಅವರ ಅನುಯಾಯಿಗಳೆಲ್ಲ ಇಂದಿರಾ ಯಕ್ಷಿಣಿಗೆ ಬಲೆಗೆ ಬಿದ್ದ ಹುಲಿಗಳಾಗಿ ಹೋದರು. ಕೃಪಲಾನಿ, ವಿನೋಬಾ, ಜಯಪ್ರಕಾಶ ನಾರಾಯಣರನ್ನು ಮತ ರಾಜಕಾರಣ ಮಟ್ಟಹಾಕಿತು. ಗಾಂಧೀ ಸಾವಿನೊಂದಿಗೆ 'ಹಿಂದ್ ಸ್ವರಾಜ್ಯ' ಮರೆಯಾಗಿಹೋಯಿತು. ಈ ೫೦-೬೦ ವರ್ಷಗಳಲ್ಲಿ ಕಲಿತ ಪಾಠಗಳು– ಕೇವಲ ಚಿಂತನೆ-ಚರ್ಚೆ-ಗೋಷ್ಠಿಗಳ ವಸ್ತುವಾಗಿ ಉಳಿದಿವೆ. ಸಿದ್ಧತೆ, ಸನ್ನದ್ಧತೆ ದೂರ ಉಳಿಯಿತು. 'ಯಂತ್ರಗಳನ್ನ ಕಳಚೋಣ ಬನ್ನಿ' (ಪ್ರಸನ್ನ) ಪುಸ್ತಕ, 'ಹಿಂದ್ ಸ್ವರಾಜ್'ದ ಸಂದೇಶದಿಂದ ಬಂದಂತಿದೆ. ಪುಸ್ತಕ, ಮಸ್ತಕಕ್ಕೆ ಹೊಕ್ಕು ಅಲ್ಲೇ ನಿಂತುಬಿಡುವುದೇ ಒಂದು ಚೋದ್ಯ. 'ಸಂಚಯ' ಮಾಡಬೇಕಾದ ಕೆಲಸದ ಮುಂದುವರಿಕೆಯಾಗಿ, ನಾವು ಓದುಗರು, ಲೇಖಕರು ಇವತ್ತಿನ ವ್ಯವಹಾರ ಜೀವನದಲ್ಲಿ ಏನು ಮಾಡಲು ಶಕ್ಯವಿದೆ, ಮಾಡಬೇಕು. 'ಸಂಚಯ' ಅದಕ್ಕಾಗಿ ಕೊಟ್ಟ ಸಾಮಗ್ರಿ ಸಾಕಷ್ಟು.

ಸರಕಾರದಲ್ಲಿರುವ ಶಾಸಕ, ಮಂತ್ರಿ, ಅವರಿಗೆ ಆಡಳಿತ ಯಂತ್ರವಾಗಿ ವ್ಯವಹರಿಸುವ ಭಾ.ಸೇ.ಆ., ಕ.ಸೇ.ಆ.

ಮುಂತಾದ ಪರೀಕ್ಷೆ ಪಾಸಾಗಿರುವ 'ಅಧಿಕಾರಿ' ವರ್ಗದವರು ಇದನ್ನು ಓದಿ, ಮನವರಿಕೆ ಮಾಡಿಕೊಂಡರೆ, ನಮ್ಮಂಥ ನಿರಧಿಕಾರಿಗಳಿಗೆ ಓದಿದ್ದಕ್ಕೂ ಸ್ವಲ್ಪ ಸಾರ್ಥಕ ಅನ್ನಿಸಬಹುದು. ಇಲ್ಲ ಓದಿಗಾಗಿ ಓದು, ಜ್ಞಾನಕ್ಕಾಗಿ ಜ್ಞಾನ ಎನ್ನುವ ಹಳಿಯ ಮೇಲೆ ಸಾಗುವ (ಗುರಿಯಿಲ್ಲದ) ನಿಲ್ದಾಣ ಹುಡುಕುತ್ತ ದಣಿಯುವ ರೇಲು ಗಾಡಿಗಳಾಗಿ ನಾವು ಹೋಗುತ್ತ ಇರಬೇಕಾಗುತ್ತದೆ. ಇದು ನಿರಾಸೆ ಇಲ್ಲದ್ದಕ್ಕೆ ಹೇಳಿದ ಮಾತು.

ಶ್ಯಾಮಸುಂದರ ಬಿದರಕುಂದಿ, ಹುಬ್ಬಳ್ಳಿ

★

ಸಂಚಯದ ನೂರರ ಹಿಂದ್ ಸ್ವರಾಜ್ ವಿಶೇಷ ಸಂಚಿಕೆ ತಲುಪಿತು. ತುಂಬ ಸಕಾಲಿಕವಾಗಿ ಹಿಂದ್ ಸ್ವರಾಜ್‌ಗೆ ಭಾಷ್ಯವೆಂಬಂತೆ, ಪೂರಕ ಸಾಹಿತ್ಯವೆಂಬಂತೆ, ಕೈಪಿಡಿಯಂತೆ, ಮತ್ತು ಪೂರಕ ಪಠ್ಯದಂತೆ ವಿಶೇಷ ಸಂಚಿಕೆಯನ್ನು ತಂದದ್ದಕ್ಕಾಗಿ ನಿಮಗೆ ಹಾರ್ದಿಕ ಅಭಿನಂದನೆಗಳು, ಹಾಗೂ ಪ್ರೀತಿ ವಿಶ್ವಾದ ಶುಭಕಾಮನೆಗಳು. ಪತ್ರಿಕೆ ಕೈ ತಲುಪಿದ ಕೂಡಲೇ ಎಲ್ಲ ಲೇಖನಗಳ ಮೇಲೆ ಕಣ್ಣಾಡಿಸಿದೆ. ಎಲ್ಲ ಲೇಖನಗಳು ವಿಚಾರಪೂರ್ಣವಾಗಿವೆ. ಪುನಃ ಪುನಃ ಓದಿ ಅರ್ಥಮಾಡಿಕೊಳ್ಳ ಬೇಕಾಗಿವೆ. ಒಬ್ಬ ಲೇಖಕರ ಲೇಖನ ಬಹಳ ದೀರ್ಘವಾಗಿದೆಯೆಂದು ಅನಿಸಿತು. ಸಂಚಯದ ಲೇಖಕರೆಲ್ಲ ಗಾಂಧೀ ವಿಚಾರದ ಅಭಿಮಾನಿಗಳೇ ಆಗಿದ್ದಾರೆ ಮತ್ತು ಚಿಂತಕರಾಗಿದ್ದಾರೆ. ಗಾಂಧೀ ವಿಚಾರ ಆಚರಣೆಗೆ ಏಕೆ ಬರುತ್ತಿಲ್ಲವೆಂಬ ಬಗ್ಗೆ ಈ ಲೇಖಕರೆಲ್ಲರನ್ನೂ ಕಲೆ ಹಾಕಿ ಒಂದು ಗೋಷ್ಠಿ ನಡೆಸಬಹುದಲ್ಲವೆ? ಜಿ.ಬಿ. ಹರೀಶರವರಿಗೂ ಅಭಿನಂದನೆಗಳು.

ಸುರೇಂದ್ರ ಕೌಲಗಿ, ಜನಪದ ಸೇವಾ ಟ್ರಸ್ಟ್(ರಿ), ಮೇಲುಕೋಟೆ, ಮಂಡ್ಯ

★

ನೀವು ವಿಶ್ವಾಸದಿಂದ ಕಳುಹಿಸಿದ 'ಸಂಚಯ'ದ ನೂರರ ಹಿಂದ್ ಸ್ವರಾಜ್ ವಿಶೇಷ ಸಂಚಿಕೆಯು ಕೈಸೇರಿತು. ವಂದನೆಗಳು.

ಸಂಚಿಕೆಯನ್ನು ನೋಡುತ್ತಲೇ ಆಶ್ಚರ್ಯವೂ, ಸಂತೋಷವೂ ಆಯಿತು. ಇಂಥದೊಂದು ಸಂಚಿಕೆಯನ್ನು ಕಲ್ಪಿಸಿಕೊಂಡಿರಲ್ಲ, ಅದೇ ಅದ್ಭುತ ಸಂಗತಿ. ಗಾಂಧೀಜಿಯವರಲ್ಲಿ ಒಂದಿಷ್ಟು ಕುತೂಹಲ ದಾಟಿ ಗಂಭೀರ ಆಸಕ್ತಿಯನ್ನು ಉಳಿಸಿಕೊಂಡು ಹಿಂದ್ ಸ್ವರಾಜ್‌ದ ನೆನಪನ್ನು ಕ್ರಿಯಾಶೀಲವಾಗಿ ನೀವು ಮಾಡಿಕೊಂಡಿದ್ದೀರಿ ಎನ್ನುವುದು ನನಗೆ ವಿಶೇಷವಾಗಿ ಕಾಣುತ್ತದೆ. ಸಂಚಿಕೆಯ ಲೇಖಕ ವರ್ಗದ Spectrum ಕಂಡಾಗ ನನ್ನ ಅಚ್ಚರಿ ಇನ್ನೂ ಬೆಳೆಯಿತು. ಅಭಿನಂದನೆಗಳು. ಈ ವಯಸ್ಸಿಗೆ ನನ್ನ ಆಸಕ್ತಿಗಳು ಬಹಳ ಬದಲಾಗಿವೆ. ದಶಕದಶಕಗಳ ಕಾಲ ನನಗಿದ್ದ ಆಸಕ್ತಿಗಳು ಹಲವು ಈಗ ಹಿಂದಕ್ಕೆ ಸರಿದಿವೆ. ಪ್ರಾಧಾನ್ಯ ಪಡೆದುಕೊಳ್ಳುವ ವಿಷಯಗಳೂ ಬದಲಾಗಿವೆ. ಆಗಲೂ ಈ ಸಂಚಿಕೆ ನನಗೆ ಸಂತೋಷ ಕೊಡುತ್ತದೆ. ಇದು ಮುಖ್ಯವಾದ ಓದಾಗುತ್ತದೆ ಎನ್ನಿಸಿದೆ. ನನ್ನ ಓದು ಈಗ ನಿಧಾನ. ನನ್ನ ವೇಗದಲ್ಲಿಯೇ ಇದನ್ನು ಓದುತ್ತೇನೆ.

ವಿಶೇಷ ಸಂಚಿಕೆಯನ್ನು ವಿಶ್ವಾಸದಿಂದ ಕಳುಹಿಸಿದಿರಿ. ವಂದನೆಗಳು. ಸದ್ದಿಲ್ಲದೆ ಗಂಭೀರವಾದ ತೂಕವಾದ ಕೆಲಸವನ್ನು ಮಾಡುತ್ತಿದ್ದೀರಿ. ಅಭಿನಂದನೆಗಳು, ನಿಮಗೆ ಎಲ್ಲ ಶುಭವಾಗಲಿ.

ಎಲ್.ಎಸ್. ಶೇಷಗಿರಿರಾವ್, ಬೆಂಗಳೂರು - ೫೬೦ ೦೭೮

ಸಂಚಯ ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ

ಸಾಹಿತ್ಯ ಸ್ಪರ್ಧೆ-೨೦೦೯

ಹೊಸ ಬರಹಗಾರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸಂಚಯ ಸಾಹಿತ್ಯ ಪತ್ರಿಕೆಯು ಈ ವರ್ಷವೂ ಕನ್ನಡದ ಕಾವ್ಯ ಮತ್ತು ಲೇಖನ ಸ್ಪರ್ಧೆಗಳನ್ನು ಆಯೋಜಿಸಿದೆ.

ಕಾವ್ಯ ಸ್ಪರ್ಧೆ

ಇದರಲ್ಲಿ ಭಾಗವಹಿಸುವವರು ತಮ್ಮ ಸ್ವಂತ ರಚನೆಯ ಎರಡು ಕವಿತೆಗಳನ್ನು ಕಳುಹಿಸಬೇಕು. ಅನುವಾದಗಳಾಗಲೀ, ಈಗಾಗಲೇ ಪ್ರಕಟಗೊಂಡಿರುವ ಕವಿತೆಗಳಿಗಾಗಲೀ ಅವಕಾಶವಿಲ್ಲ

ಲೇಖನ ಸ್ಪರ್ಧೆ

ಈ ಸ್ಪರ್ಧೆಗೆ ಕೊಟ್ಟಿರುವ ಐದು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು ೧೫ ಪುಟಗಳನ್ನು ಮೀರದ ಒಂದು ಲೇಖನ ಕಳುಹಿಸಬಹುದು.

ಲೇಖನ ಸ್ಪರ್ಧೆಯ ವಿಷಯಗಳು

- ಟಿ.ವಿ. ಮಾಧ್ಯಮ ಮತ್ತು ಜೀವನ ಸತ್ಯಗಳು
- ಹೊಸ ಶತಮಾನದಲ್ಲಿ ಕನ್ನಡ ಕಾದಂಬರಿಗಳು
- ಗಿರೀಶ್ ಕಾರ್ನಾಡರ ನಾಟಕವೊಂದರ ವಿಮರ್ಶೆ
- ಕನ್ನಡ ಸಿನೆಮಾ: ಸದ್ಯದ ಸಾಧ್ಯತೆ-ಸವಾಲುಗಳು

ಸ್ಪರ್ಧೆಯ ನಿಯಮಗಳು

- ಬರಹಗಳು ಸ್ವತಂತ್ರವಾಗಿದ್ದು ಎಲ್ಲೂ ಪ್ರಕಟಗೊಂಡಿರಬಾರದು
- ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕ ಹಾಗೂ ವಯೋಮಿತಿಗಳು ಇಲ್ಲ.
- ಸ್ಪರ್ಧೆಗೆ ಕಳುಹಿಸಲಾದ ಹಸ್ತಪ್ರತಿಗಳನ್ನು ವಾಪಸ್ಸು ಕಳುಹಿಸಲಾಗುವುದಿಲ್ಲ.
- ಹಸ್ತಪ್ರತಿಯ ಜೊತೆಗೆ ಲೇಖಕರ ಹೆಸರು, ಸಂಪರ್ಕ ವಿಳಾಸಗಳನ್ನು ಬೇರೆ ಕಾಗದದಲ್ಲಿ ಬರೆದು ಲಗತ್ತಿಸಿರಬೇಕು.
- ಬಹುಮಾನಗಳು ಪುಸ್ತಕ ರೂಪದ್ದಾಗಿದ್ದು ತೀರ್ಪುಗಾರರ ತೀರ್ಮಾನವೇ ಅಂತಿಮ.
- ಆಯ್ದ ಬಹುಮಾನಿತ ಬರಹಗಳು ಸಂಚಯ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತದೆ.


ಬರಹಗಳನ್ನು ಕಳುಹಿಸಲು ಕೊನೆಯ ದಿನಾಂಕ ನವೆಂಬರ್ ೩೦, ೨೦೦೯

ಬರಹಗಳನ್ನು ಕಳುಹಿಸಬೇಕಾದ ಸಂಪರ್ಕ ವಿಳಾಸ

ಸಂಚಯ

ಕೇರಾಫ್ ಜೆನ್ ಹೈಜಿನಿಕ್ಸ್, ನಂ. ೮೬, ೮ನೇ ಅಡ್ಡರಸ್ತೆ, ಅಶೋಕನಗರ,
ಬನಶಂಕರಿ ೧ನೇ ಹಂತ, ಬೆಂಗಳೂರು - ೫೬೦ ೦೫೦

ಸಂಚಯ ಗ್ಯಾಲರಿ



ಬಿ.ವಿ. ಕಾರಂತ

ಕೃಪೆ: A moment in time ಕೃತಿಯಿಂದ

SANCHAYA (Bi-Monthly), MAG(2) PRB-DECL : 309/94-95

ಮುನ್ನ ಮುನ್ನಕೆ ಗುಬ್ಬಮನೆಯ ಹೂಡಿದ ಹಾಗೆ
ಹಿನ್ನೆಲೆಯೊಳಿದ್ದಂಥ ಮನೆಯು ಮಣ್ಣನು ಕೂಡಿ
ಮಣ್ಣಾಗಲಿಲ್ಲ ಹೊಸ ಮನೆಗೆ ಇಂಬನು ಮಾಡಿ
ತದು ವಿಫಲ ಕಾರ್ಯವಲ್ಲ,

ದ.ರಾ.ಬೇಂದ್ರೆ

Edited, Printed & Published by
D.V. PRAHLAD,
No. 100, 2nd Main, 6th Block
3rd Stage, 3rd Phase, Banashankari,
Bangalore - 560 085, Ph : 080-2679 19